ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಖ್ಯೆ-ಸುದ್ದಿ: ಜಾಗತಿಕ ತಾಪಮಾನ ಹೆಚ್ಚಳ ಹವಾಮಾನ ಏರುಪೇರು
ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ₹ 1 ಕೋಟಿ ವಿಮೆ 5
ಲಾಲ್‌ಬಾಗ್‌ನಲ್ಲಿ ಸಮೀಕ್ಷೆ, ಒಳಿತಿನ ನಿರೀಕ್ಷೆ 3
ಇಂದು ಕ್ಷೇಮ ಕುಶಲ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,624	18,329	₹54,060 (ಬೆಂಗಳೂರು)	₹63,400 (ಬೆಂಗಳೂರು)	81.26

ನೆಹರೂ ಗುಣಗಾನ ಮಾಡಿದ ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಮುನ್ನಡೆಸಿದ ಖ್ಯಾತಿ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಸಲ್ಲುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೆಹರೂ ಅವರ ಜನ್ಮದಿನದ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿರುವ ಅವರ ಪ್ರತಿಮೆಗೆ ಸೋಮವಾರ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಮಹಾತ್ಮ ಗಾಂಧೀಜಿಯವರ ಜತೆ ನಿಕಟ ಸಂಬಂಧ ಹೊಂದಿದ್ದ ನೆಹರೂ, ಸ್ವಾತಂತ್ರ್ಯ ಹೋರಾಟದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದರು. ಭಾರತದ ಉದಯಕ್ಕೆ ಬಹಳ ಶ್ರಮ ವಹಿಸಿದ್ದರು. ದೇಶದ ಮೊದಲ ಪ್ರಧಾನಿಯಾಗಿ ನೆಹರೂ ಅವರು ಹಲವು ಅಭಿವೃದ್ಧಿ ಯೋಜನೆಗಳಿಗೆ ಅಡಿಪಾಯ ಹಾಕಿದರು’ ಎಂದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಅಲಿಪ್ತ ಚಳವಳಿಯನ್ನು ಮುನ್ನಡೆಸಲು ಮಾರ್ಷಲ್ ಟಿಟೊ ಅವರೊಂದಿಗೆ ಸೇರಿ ನೆಹರೂ ಮಾಡಿರುವ ಕೆಲಸಗಳು ಅದ್ಭುತವಾದುವು. ಅಲಿಪ್ತ ಚಳವಳಿಯ ಮೂಲಕ ಭಾರತವು ಈಗಲೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಅವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಅರ್ಥಪೂರ್ಣ ರೀತಿಯಲ್ಲಿ ಆಚರಿಸಲಾಗುತ್ತಿದೆ ಎಂದು ಹೇಳಿದರು.

ನೆಹರೂ ಕೊಡುಗೆ ಸ್ಮರಿಸಿದ ಪ್ರಧಾನಿ ಮೋದಿ

ಪಂಡಿತ್ ಜವಾಹರಲಾಲ್ ನೆಹರೂ ಅವರ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಪ್ರಥಮ ಪ್ರಧಾನಿಯ ಕೊಡುಗೆಯನ್ನು ಸ್ಮರಿಸಿದ್ದಾರೆ.

‘ದೇಶದ ಮಾಜಿ ಪ್ರಧಾನಿ ನೆಹರೂ ಅವರಿಗೆ ನನ್ನ ನಮನಗಳು. ದೇಶಕ್ಕೆ ಅವರು ನೀಡಿರುವ ಕೊಡುಗೆಗಳನ್ನು ಈ ಸಂದರ್ಭದಲ್ಲಿ ನಾವು ಸ್ಮರಿಸಬೇಕು’ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ರಿಜಿಜು ವಾಗ್ದಾಳಿ

ನವದೆಹಲಿ (ಪಿಟಿಐ): ಕಾಶ್ಮೀರ ವಿವಾದಕ್ಕೆ ಸಂಬಂಧಿಸಿದಂತೆ ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ವಿರುದ್ಧ ಅವರ ಜನ್ಮದಿನ ದಂದೇ ಕೇಂದ್ರದ ಕಾನೂನು ಸಚಿವ ಕಿರಣ್ ರಿಜಿಜು ಹರಿಹಾಯ್ದಿದ್ದಾರೆ.

‘ಭಾರತದ ಜೊತೆಗೆ ಕಾಶ್ಮೀರವನ್ನು ಸೇರಿಸಬೇಕು ಎಂದು ಅಂದಿನ ಮಹಾರಾಜ ಹರಿಸಿಂಗ್ ಮಾಡಿದ ಮನವಿಯನ್ನು ನೆಹರೂ ಅವರು ಒಂದಲ್ಲ, ಮೂರು ಬಾರಿ ತಿರಸ್ಕರಿಸಿದ್ದರು’ ಎಂದು ಟೀಕಿಸಿ ರಿಜಿಜು ಟ್ವೀಟ್ ಮಾಡಿದ್ದಾರೆ.

‘ಮೂರ್ಖತನದ ತೀರ್ಮಾನ’

ಶ್ರೀನಗರ (ಪಿಟಿಐ): ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರದ ಆಗಿನ ಮಹಾರಾಜ ಹರಿ ಸಿಂಗ್ ಅವರು ಒಪ್ಪಂದಕ್ಕೆ ಸಹಿ ಮಾಡಲು ಸಿದ್ಧ ರಿದ್ದರು. ಹೀಗಿದ್ದರೂ ನೆಹರೂ ಅವರು ಕಾಶ್ಮೀರ ಸಮಸ್ಯೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. ಅದು ದೊಡ್ಡ ಪ್ರಮಾದ ಹಾಗೂ ಮೂರ್ಖತನದ ತೀರ್ಮಾನ’ ಎಂದು ಟೀಕಿಸಿದ್ದಾರೆ.

‘ವಿವೇಕ’ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಬೊಮ್ಮಾಯಿ ಚಾಲನೆ

ಕೇಸರಿ ಬಳಿದರೆ ತಪ್ಪೇನು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: ‘ಶಾಲಾ ಕೊಠಡಿಗಳಿಗೆ ಕೇಸರಿ ಬಣ್ಣ ಬಳಸಿದರೆ ತಪ್ಪೇನಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಕಲಬುರಗಿ ತಾಲ್ಲೂಕಿನ ಮಡಿಯಾಳ ತಾಂಡಾದಲ್ಲಿ ಸೋಮವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮ ದಲ್ಲಿ ‘ವಿವೇಕ’ ಶಾಲಾ ಕೊಠಡಿಗಳ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ಸ್ವಾಮಿ ವಿವೇಕಾನಂದರು ಸನ್ಯಾಸಿ. ಜಗತ್ತಿಗೆ ವಿವೇಕ ನೀಡಿದವರು. ಅವರನ್ನು ಪ್ರೇರಣೆಯಾಗಿ ಇಟ್ಟುಕೊಂಡು ಉತ್ತಮ ವಾತಾವರಣ ಕಲ್ಪಿಸಲು ಈ ಪರಿಕಲ್ಪನೆ ರೂಪಿಸಲಾಗಿದೆ’ ಎಂದರು.

ಕೇಸರಿ ಬಣ್ಣ ಬಳಿಯಲು ಮುಂದಾ ಗಿರುವ ಸರ್ಕಾರದ ಕ್ರಮ ಸರಿಯಲ್ಲ ಎಂಬ ಕಾಂಗ್ರೆಸ್, ಜೆಡಿಎಸ್ ಆಕ್ಷೇಪಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಎಲ್ಲದರಲ್ಲೂ ರಾಜಕಾರಣ ಮಾಡುವುದು ಬಹಳ ಕೆಳ ಮಟ್ಟದ್ದು. ಕೇಸರಿ ಬಣ್ಣ ಭಾರತದ ಧ್ವಜದಲ್ಲಿಯೇ ಇದೆ. ಕೇಸರಿ ಕಂಡರೆ ಏಕೆ ಸಿಟ್ಟು? ಸ್ವಾಮಿ ವಿವೇಕಾನಂದರು ತೊಟ್ಟಿದ್ದು ಕೇಸರಿ ಬಣ್ಣದ ಕಾವಿ. ಕೇಸರಿ ಎಂದರೆ ಕೆಲವರ ಕಣ್ಣು ಕೆಂಪಗಾಗುತ್ತದೆ. ವಿವೇಕ ಎಂದರೆ ಎಲ್ಲರಿಗೂ ಜ್ಞಾನ. ಅದನ್ನು ಕಲಿಯಲಿ’ ಎಂದರು.

‘ಇತ್ತೀಚಿನ ದಿನಗಳಲ್ಲಿ ಏನೇ ಪ್ರಗತಿ ಮಾಡಿದರೂ ವಿವಾದ ಸೃಷ್ಟಿ ಮಾಡುವ ಚಟ ಬಿದ್ದಿದೆ. ಪ್ರಗತಿ ಆಗಲು ಅವರಿಗೆ (ವಿರೋಧ ಪಕ್ಷಗಳು) ಆಸಕ್ತಿ ಇಲ್ಲ. ಇದರಲ್ಲೂ ರಾಜಕಾರಣ ಮಾಡುತ್ತಿದ್ದಾರೆ. ಶಿಕ್ಷಣದ ಕೇಸರೀಕರಣ ಆಗುತ್ತಿಲ್ಲ. ಬದಲಾಗಿ ಮಕ್ಕಳಲ್ಲಿ ವಿವೇಕ ಮೂಡಿಸುವುದಾಗಿದೆ. ವಿವೇಕರ ಹೆಸರಿನಲ್ಲಿ ಕೊಠಡಿ ನಿರ್ಮಾಣ ಮಾಡುವುದು ಕೇಸರೀಕರಣವಾಗುವುದಿಲ್ಲ’ ಎಂದೂ ಹೇಳಿದರು.

‘ಕೇಸರೀಕರಣದ ಹುನ್ನಾರ’

‘ಶಾಲೆಗಳಲ್ಲಿ ಕೊಠಡಿಗಳಿಲ್ಲ ಇಲ್ಲ. ಪಠ್ಯಪುಸ್ತಕ ನೀಡಿಲ್ಲ. ಮಧ್ಯಾಹ್ನದ ಬಿಸಿಯೂಟವಿಲ್ಲ. ಶಿಕ್ಷಕರೂ ಇಲ್ಲ. ಆ ಬಗ್ಗೆ ಗಮನಹರಿಸುವ ಬದಲು ಶಾಲೆಗಳಿಗೆ ಬಿಜೆಪಿ ಕೇಸರಿ ಬಣ್ಣ ಬಳಿಯಲು ಹೊರಟಿದೆ. ಆ ಮೂಲಕ, ಶಾಲೆಗಳನ್ನೂ ಕೇಸರೀಕರಣ ಮಾಡಲು ಮುಂದಾಗಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಟೀಕಿಸಿದರು.

‘ಕೇಸರಿ ಬಣ್ಣದ ಬಗ್ಗೆ ಕಾಂಗ್ರೆಸ್‌ಗೆ ಭಯ ಇಲ್ಲ, ಗೌರವ ಇದೆ. ಆದರೆ, ಮಕ್ಕಳ ಮನಸ್ಸಿನಲ್ಲಿ ಕೇಸರೀಕರಣ ತುಂಬುವ ಹುನ್ನಾರಕ್ಕೆ ಮಾತ್ರ ನಮ್ಮ ಆಕ್ಷೇಪ. ಕಳೆದ ಮೂರು ವರ್ಷಗಳಿಂದ ಬಿಜೆಪಿ ಇದೇ ಕೆಲಸ ಮಾಡುತ್ತಿದೆ. ಜವಾಬ್ದಾರಿಯುತವಾಗಿ ಮಕ್ಕಳಿಗೆ ಶಿಕ್ಷಣ ನೀಡುವುದು ಬಿಟ್ಟು, ಈ ಕೆಲಸಕ್ಕೆ ಹೊರಟಿರುವ ಸರ್ಕಾರಕ್ಕೆ ನಾಚಿಕೆಯಾಗಬೇಕು’ ಎಂದರು.

‘ವಿವೇಕ ಅಲ್ಲ, ಅವಿವೇಕ’

‘ಶಿಕ್ಷಣದ ವಿಚಾರದಲ್ಲಿ ಸರ್ಕಾರದ ಆದ್ಯತೆ ನೋಡಿದರೆ ಮಕ್ಕಳ ಭವಿಷ್ಯವನ್ನು ನಾಶ ಮಾಡಲು ಹೊರಟಂತಿದೆ. ಇದು, ವಿವೇಕ ಅಲ್ಲ, ಅವಿವೇಕದ ಪರಮಾವಧಿ’ ಎಂದು ಟೀಕಿಸಿದ ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ, ‘ಸ್ವಾಮಿ ವಿವೇಕಾನಂದರ ಯೋಚನಾ ದೃಷ್ಟಿ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ. ಕೇಸರಿಯೇ ಯಾಕೆ ಬೇಕು? ಬೇಕಿದ್ದರೆ ತ್ರಿವರ್ಣಗಳನ್ನೂ ಕೊಠಡಿಗಳ ಗೋಡೆಗೆ ಬಳಿಯಿರಿ’ ಎಂದರು.

‘ಇದು ಬಣ್ಣದ ಪ್ರಶ್ನೆ ಅಲ್ಲ, ಮಕ್ಕಳ ಭವಿಷ್ಯದ ಪ್ರಶ್ನೆ. ಶಾಲೆಗಳಿಗೆ ಎಷ್ಟು ಮೂಲಸೌಕರ್ಯ ಒದಗಿಸಿದ್ದಾರೆ ಎನ್ನುವುದು ಮುಖ್ಯ. ಮಕ್ಕಳ ಭವಿಷ್ಯ ರೂಪಿಸುವುದರಲ್ಲಿ ಸರ್ಕಾರ ಯಾಕೆ ಆಸಕ್ತಿ ತೋರಿಸುತ್ತಿಲ್ಲ’ ಎಂದರು.

ಇವರು (ಬಿಜೆಪಿ) ಬಂದಿದ್ದಾರೆ ಕೇಸರಿ ಬಣ್ಣ ಹಚ್ಚುತ್ತಿದ್ದಾರೆ. ಮುಂದೆ ಬರುವವರು ಇನ್ನೊಂದು ಬಣ್ಣ ಹಚ್ಚುತ್ತಾರೆ. ಒಬ್ಬೊಬ್ಬರು ಒಂದೊಂದು ಬಣ್ಣ ಹಚ್ಚುತ್ತಾರೆ. ಅದನ್ನೆಲ್ಲ ಬಿಟ್ಟು ಕಲಿಕೆಗೆ ಪ್ರಾಮುಖ್ಯತೆ ಕೊಡಬೇಕಾಗಿದೆ

ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

‘ಕೇಸರಿ ಬಿಜೆಪಿಯವರ ಗುತ್ತಿಗೆ ಅಲ್ಲ’

‘ಕೇಸರಿ ಬಣ್ಣಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಅದು ಅವರ (ಬಿಜೆಪಿಯವರ) ಗುತ್ತಿಗೆ ಅಲ್ಲ’ ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಹೇಳಿದರು.

‘ದೇಶಕ್ಕೆ ಶಿಕ್ಷಣ ವ್ಯವಸ್ಥೆಗೆ ನೆಹರೂ ಹಾಕಿದ್ದ ವೈಜ್ಞಾನಿಕ ತಳಹದಿಯನ್ನು ಬಿಜೆಪಿಯವರು ಬುಡಮೇಲು ಮಾಡುತ್ತಿದ್ದಾರೆ. ನೆಹರೂ ಅವರ ಡಿಸ್ಕವರಿ ಆಫ್ ಇಂಡಿಯಾ’ವನ್ನು ನಮ್ಮ ಶಿಕ್ಷಣ ಸಚಿವರು ಓದಬೇಕು. ಶೇ 14ರಷ್ಟಿದ್ದ ಸಾಕ್ಷರತೆಯನ್ನು ಶೇ 72ಕ್ಕೆ ತರಲು ನೆಹರೂ ಅವರು ಕಾರಣ’ ಎಂದರು.

4A ಪುಟ ನೋಡಿ



ಶೌರ್ಯ ಪ್ರಶಸ್ತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ ಮಕ್ಕಳ ದಿನಾಚರಣೆಯಲ್ಲಿ ರಾಜ್ಯಮಟ್ಟದ ‘ಹೊಯ್ಸಳ ಹಾಗೂ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ’ ಸ್ವೀಕರಿಸಿದ (ಎಡದಿಂದ) ನಮ್ರತಾ, ಕಾವ್ಯ, ಎಂ.ಕೀರ್ತಿ ವಿವೇಕ್ ಸಾಹುಕಾರ್, ಕೌಶಲ್ಯ ಹಾಗೂ ಪ್ರಾರ್ಥನಾ ಅವರ ಖುಷಿಯ ಕ್ಷಣ – ಪ್ರಜಾವಾಣಿ ಚಿತ್ರ

ಸುದ್ದಿ 4B

ಬಲವಂತದ ಮತಾಂತರ ಅತ್ಯಂತ ಗಂಭೀರ: ‘ಸುಪ್ರೀಂ’

ನವದೆಹಲಿ (ಪಿಟಿಐ): ಬಲವಂತದ ಮತಾಂತರವು ಅತ್ಯಂತ ಗಂಭೀರ ವಿಚಾರ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಮೋಸ, ಆಮಿಷ ಮತ್ತು ಬೆದರಿಕೆಯ ಮೂಲಕ ಮತಾಂತರ ನಡೆಸುವುದನ್ನು ತಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ.

ಮತಾಂತರವನ್ನು ತಡೆಯದೇ ಇದ್ದರೆ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿ ನಿರ್ಮಾಣವಾಗಲಿದೆ ಮತ್ತು ಅದು ರಾಷ್ಟ್ರೀಯ ಭದ್ರತೆಗೂ ಅಪಾಯ ತಂದೊಡ್ಡಬಹುದು. ಪೌರರ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೂ ಅಪಾಯ ಉಂಟಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠ ಹೇಳಿದೆ. ಆಮಿಷದ ಮೂಲಕ ನಡೆಯುವ ಮತಾಂತರ ತಡೆಯಲು ಕೈಗೊಂಡ ಕ್ರಮಗಳೇನು ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸುವಂತೆ ಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿದೆ.

ಮುಖ್ಯಾಂಶಗಳು

- ಕೇಂದ್ರವು ಪ್ರತಿಕ್ರಿಯೆ ಸಲ್ಲಿಸಲು ಇದೇ 22ರವರೆಗೆ ಅವಕಾಶ
- ಇದೇ 28ರಂದು ಮುಂದಿನ ವಿಚಾರಣೆ ನಿಗದಿ

ಬಲವಂತದ ಮತಾಂತರದ ವಿಚಾರವು ಸಂವಿಧಾನ ರಚನಾ ಸಭೆಯಲ್ಲಿಯೂ ಚರ್ಚೆ ಆಗಿತ್ತು ಎಂಬುದನ್ನು ತುಷಾರ್ ಮೆಹ್ತಾ ಅವರು ಪೀಠದ ಗಮನಕ್ಕೆ ತಂದರು.

‘ಎರಡು ಕಾಯ್ದೆಗಳು ಇವೆ. ಮೋಸ, ಸುಳ್ಳು ಅಥವಾ ವಂಚನೆ, ಹಣದ ಆಮಿಷ ಒಡ್ಡಿ ಮತಾಂತರ ನಡೆಸುವುದನ್ನು ತಡೆಯಲು ಒಡಿಶಾ ಮತ್ತು ಮಧ್ಯ ಪ್ರದೇಶ ಸರ್ಕಾರಗಳು ಈ ಕಾಯ್ದೆಗಳನ್ನು ಜಾರಿಗೆ ತಂದಿವೆ. ಈ ಕಾಯ್ದೆಗಳ ವಿಚಾರವು ಈ ನ್ಯಾಯಾಲಯದ ಮುಂದೆಯೂ ಬಂದಿತ್ತು ಮತ್ತು ನ್ಯಾಯಾಲಯವು ಕಾಯ್ದೆಗಳನ್ನು ಎತ್ತಿ ಹಿಡಿದಿತ್ತು’ ಎಂದು ತುಷಾರ್ ಮೆಹ್ತಾ ವಿವರಿಸಿದರು.

ಧಾರ್ಮಿಕ ಸ್ವಾತಂತ್ರ್ಯ ಇರಬಹುದು. ಆದರೆ, ಬಲವಂತದ ಮತಾಂತರದ ಸ್ವಾತಂತ್ರ್ಯ ಇರುವುದಕ್ಕೆ ಸಾಧ್ಯವೇ ಇಲ್ಲ

ಸುಪ್ರೀಂ ಕೋರ್ಟ್

ಬುಡಕಟ್ಟು ಪ್ರದೇಶಗಳಲ್ಲಿ ಮತಾಂತರ ಹೆಚ್ಚು ವ್ಯಾಪಕವಾಗಿದೆ. ತಮಗೆ ಅನ್ಯಾಯ ಮಾಡಲಾಗುತ್ತಿದೆ ಎಂಬುದು ಬಹಳಷ್ಟು ಸಂದರ್ಭ ಗಳಲ್ಲಿ ಸಂತ್ರಸ್ತರಿಗೆ ತಿಳಿಯುವುದೇ ಇಲ್ಲ. ತಮಗೆ ನೆರವು ನೀಡಲಾಗುತ್ತಿದೆ ಎಂದೇ ಅವರು ಭಾವಿಸುತ್ತಾರೆ ಎಂದು ಮೆಹ್ತಾ ವಿವರಿಸಿದರು.

ಬೆದರಿಕೆ, ವಂಚನೆ, ಆಮಿಷದ ಮೂಲಕ ಬಲವಂತದ ಮತಾಂತರ ವನ್ನು ತಡೆಯಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರಕ್ಕೆ ಸೂಚಿಸಬೇಕು ಎಂದು ಕೋರಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಬಲವಂತದ ಮತಾಂತರದ ಕುರಿತು ಕಳವಳ ವ್ಯಕ್ತಪಡಿಸಿತು.

ಅಮೆಜಾನ್: 10 ಸಾವಿರ ನೌಕರರ ವಜಾಕ್ಕೆ ಚಿಂತನೆ

ಬೆಂಗಳೂರು (ರಾಯಿಟರ್ಸ್): ಅಮೆಜಾನ್ ಕಂಪನಿಯು ಅಂದಾಜು 10 ಸಾವಿರ ನೌಕರರನ್ನು ಕೆಲಸದಿಂದ ತೆಗೆಯಲು ಚಿಂತನೆ ನಡೆಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಹೇಳಿದೆ.

ಉದ್ಯೋಗ ಕಡಿತವು ರಿಟೇಲ್ ಮಾರಾಟ, ಮಾನವ ಸಂಪನ್ಮೂಲ ಹಾಗೂ ಉಪಕರಣಗಳ ವಿಭಾಗವನ್ನು ಕೇಂದ್ರೀಕರಿಸಲಿದೆ ಎಂದು ಅದು ಹೇಳಿದೆ. ಈ ಕುರಿತು ಅಮೆಜಾನ್ ಕಡೆಯಿಂದ ರಾಯಿಟರ್ಸ್‌ಗೆ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಹಿಂದಿನ ವರ್ಷದ ಡಿಸೆಂಬರ್ 31ಕ್ಕೆ ಅಮೆಜಾನ್‌ನಲ್ಲಿ ಜಾಗತಿಕವಾಗಿ ಒಟ್ಟು 16 ಲಕ್ಷ ನೌಕರರು ಇದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಂಗಳವಾರದಿಂದಲೇ ಪ್ರತಿ ಲೀಟರ್‌ಗೆ ₹ 3 ಏರಿಕೆ ಮಾಡಿದ್ದ ಕೆಎಂಎಫ್

ಹಾಲಿನ ದರ ಹೆಚ್ಚಳಕ್ಕೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಬ್ರ್ಯಾಂಡ್‌ನ ಎಲ್ಲ ಮಾದರಿಯ ಹಾಲು ಮತ್ತು ಮೊಸರಿನ ದರವನ್ನು ಮಂಗಳವಾರದಿಂದಲೇ ಪ್ರತಿ ಲೀಟರ್‌ಗೆ ₹ 3ರಷ್ಟು ಹೆಚ್ಚಳ ಮಾಡಲು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ಕೈಗೊಂಡಿದ್ದ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆಯಂತೆ ತಡೆ ಹಿಡಿಯಲಾಗಿದೆ.

ಹಾಲಿನ ದರ ಹೆಚ್ಚಿಸುವ ಪ್ರಸ್ತಾವಕ್ಕೆ ಕೆಎಂಎಫ್ ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ನೀಡಲಾಗಿತ್ತು. ಮಂಗಳವಾರದಿಂದಲೇ ಪರಿಷ್ಕೃತ ದರ ಜಾರಿಗೆ ಬರಲಿದೆ ಎಂದು ಮಂಡಳಿ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸೋಮವಾರ ಪ್ರಕಟಿಸಿದ್ದರು. ಹೆಚ್ಚಳದ ಪೂರ್ಣ ಮೊತ್ತವನ್ನು ರೈತರಿಗೆ ವರ್ಗಾಯಿಸುವ ಘೋಷಣೆಯನ್ನೂ ಮಾಡಿದ್ದರು.

ಕಲಬುರಗಿ ಜಿಲ್ಲಾ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ, ಹಾಲಿನ ದರ ಏರಿಕೆ ಕುರಿತು ಇದೇ 20ರಂದು ಕೆಎಂಎಫ್ ಅಧ್ಯಕ್ಷರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಸೋಮವಾರ ಸಂಜೆ ಮಾಧ್ಯಮಗಳಿಗೆ ಹೇಳಿಕೆ ನೀಡಿದರು. ಆ ಬಳಿಕ ಮಂಡಳಿ ಅಧ್ಯಕ್ಷರ ಜತೆಗೂ ದೂರವಾಣಿ ಮೂಲಕ ಚರ್ಚೆ ನಡೆಸಿದರು. ಮುಖ್ಯಮಂತ್ರಿಯವರ ಮಧ್ಯ ಪ್ರವೇಶದ ನಂತರ ದರ ಹೆಚ್ಚಳದ ತೀರ್ಮಾನವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ.

ಎರಡು ವರ್ಷ ಹತ್ತು ತಿಂಗಳ ಹಿಂದೆ ನಂದಿನಿ ಹಾಲಿನ ಕನಿಷ್ಠ ಮಾರಾಟ ದರವನ್ನು ಪ್ರತಿ ಲೀ.ಗೆ ₹ 35 ರಿಂದ ₹ 37ಕ್ಕೆ ಹೆಚ್ಚಿಸಲಾಗಿತ್ತು. ಆ ಬಳಿಕ ಈವರೆಗೂ ದರ ಹೆಚ್ಚಳ ಮಾಡಿಲ್ಲ. ಹೈನುಗಾರರ ಸಂಕಷ್ಟ ಹಾಗೂ ಎಲ್ಲ ಹಾಲು ಒಕ್ಕೂಟಗಳ ಮನವಿಗಳ ಕುರಿತು ಕೆಎಂಎಫ್ ಆಡಳಿತ ಮಂಡಳಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಆ ಬಳಿಕವೇ ದರ ಹೆಚ್ಚಳದ ನಿರ್ಧಾರ ಮಾಡಲಾಗಿದೆ ಎಂದು ಜಾರಕಿಹೊಳಿ ಹೇಳಿಕೆಯಲ್ಲಿ ತಿಳಿಸಿದ್ದರು.

4A ಪುಟ ನೋಡಿ



ಸುರತ್ಕಲ್ ಟೋಲ್‌ಗೇಟ್

ಸುರತ್ಕಲ್ ಟೋಲ್‌ಗೇಟ್ ರದ್ದು: ನಳಿನ್ ಟ್ವೀಟ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಸುರತ್ಕಲ್ ಟೋಲ್ ಸಂಗ್ರಹ ಕೇಂದ್ರ ರದ್ದಾಗಿದೆ’ ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಸೋಮವಾರ ಟ್ವೀಟ್ ಮಾಡಿದ್ದಾರೆ.

‘ಟೋಲ್ ರದ್ದುಮಾಡುವ ಭರವಸೆಯನ್ನು ಈ ಮೊದಲೇ ಕೇಂದ್ರ ಸಚಿವರು ನೀಡಿದ್ದು, ಈಗ ತಾಂತ್ರಿಕ ಅಂಶವನ್ನು ಪೂರೈಸಲಾಗಿದೆ. ನಮ್ಮ ಮನವಿಗೆ ಸ್ಪಂದಿಸಿದ ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಪ್ರಧಾನಿ ಮೋದಿ ಅವರಿಗೆ ನಾಗರಿಕರ ಪರವಾಗಿ ಧನ್ಯವಾದಗಳು’ ಎಂದೂ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಸುರತ್ಕಲ್ ಟೋಲ್ ಸಂಗ್ರಹ ಕೇಂದ್ರದ ರದ್ದತಿಗೆ ಒತ್ತಾಯಿಸಿ ‘ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ’ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ. ವಿವಿಧ ಸಂಘಟನೆಗಳವರು ಅ.18ರಂದು ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿದ್ದರು. ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದ್ದರು. ಬಳಿಕ ಸಮಿತಿ ನೇತೃತ್ವದಲ್ಲಿ 18 ದಿನಗಳಿಂದ ಅಹೋರಾತ್ರಿ ಧರಣಿ ನಡೆಯುತ್ತಿದೆ. ವಿವಿಧ ತಾಲ್ಲೂಕುಗಳವರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ.

ಮಾಹಿತಿ ಇಲ್ಲ: ಸಂಸದರ ಟ್ವೀಟ್ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿರುವ ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ, ‘ಟೋಲ್‌ಗೇಟ್ ರದ್ದತಿ ಬಗ್ಗೆ ನಮಗೆ ಅಧಿಕೃತವಾಗಿ ಮಾಹಿತಿ ತಲುಪಿಲ್ಲ. ಟೋಲ್ ಸಂಗ್ರಹ ಮುಂದುವರಿದಿದೆ. ಇದು, ಸ್ಥಗಿತವಾದ ಬಳಿಕವೇ ನಾವು ಧರಣಿ ಅಂತ್ಯಗೊಳಿಸುತ್ತೇವೆ’ ಎಂದು ಸ್ಪಷ್ಟಪಡಿಸಿದರು.

‘ಸಂಸದರು ಹೇಳಿದ ಹಾಗೆಯೇ ಟೋಲ್ ಗೇಟ್ ರದ್ದಾದರೆ ಸಂತೋಷ. ಅವರು ಟ್ವೀಟ್‌ನಲ್ಲಿ ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ರದ್ದಾದಲ್ಲಿ ಅದರ ಶ್ರೇಯ ಸಲ್ಲಬೇಕಾಗಿರುವುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಹಾಗೂ ತುಳುನಾಡಿನ ಹೋರಾಟಗಾರರಿಗೆ’ ಎಂದರು.

‘ಸತತ ಏಳು ವರ್ಷ ಟೋಲ್‌ನಲ್ಲಿ ಹಣ ಸುಲಿಗೆ ಮಾಡಲಾಗಿದೆ. ಈ ಬಗ್ಗೆ ಸಂಸದರು ಜಿಲ್ಲೆಯ ಜನರ ಕ್ಷಮೆ ಕೋರಬೇಕಾಗಿತ್ತು. ಕನಿಷ್ಠ ವಿಷಾದ ವ್ಯಕ್ತಪಡಿಸುವ ಸೌಜನ್ಯವನ್ನಾದರೂ ತೋರಿಸಬೇಕಿತ್ತು’ ಎಂದರು.

ಓಲಾ, ಉಬರ್ ಆಟೊ ದರ ನಿಗದಿ: ಇಂದು ಸಭೆ

ಬೆಂಗಳೂರು: ಓಲಾ, ಉಬರ್ ಆಟೊಗಳ ಪ್ರಯಾಣ ದರ ನಿಗದಿ ಸಂಬಂಧ ನಾಗರಿಕ ಸಂಘಗಳೊಂದಿಗೆ ಮಂಗಳವಾರ ಸಭೆ ನಡೆಸಲಾಗುತ್ತದೆ ಎಂದು ಸಾರಿಗೆ ಇಲಾಖೆ ಆಯುಕ್ತ ಸಿದ್ದರಾಮಪ್ಪ ಹೇಳಿದ್ದಾರೆ.

ಓಲಾ, ಉಬರ್, ಆಟೊ ಸಂಘಟನೆಗಳ ಜೊತೆ ಸೋಮವಾರ ನಡೆದ ಸಭೆಯ ನಂತರ ಅವರು ಮಾತನಾಡಿದರು.

'ಓಲಾ, ಉಬರ್ ಪ್ರಯಾಣ ದರ ವಿಚಾರವಾಗಿ ಹೈಕೋರ್ಟ್‌ನಲ್ಲಿ ಪ್ರಕರಣ ಇದೆ. ನ್ಯಾಯಾಲಯದ ಸೂಚನೆ ಮೇರೆಗೆ ಸಭೆ ನಡೆಸಿದ್ದೇವೆ. ಸಾರ್ವಜನಿಕರ ಅಭಿಪ್ರಾಯವನ್ನೂ ಪಡೆದು ಎಲ್ಲವನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ. ಸಾರ್ವಜನಿಕವಾಗಿ ಯಾವುದೇ ನಿರ್ಧಾರ ತಿಳಿಸುವುದಿಲ್ಲ' ಎಂದರು.


'ಕನಿಷ್ಠ ದರವನ್ನು ₹30ರಿಂದ ₹40ಕ್ಕೆ ಏರಿಕೆ ಮಾಡಿ. ಓಲಾ, ಉಬರ್ ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನಮಗೆ ನ್ಯಾಯಯುತ ದರ ನಿಗದಿ ಮಾಡಿ' ಎಂದು ಆಟೊ ಚಾಲಕರ ಸಂಘದ ಸದಸ್ಯರು ಸಭೆಯಲ್ಲಿ ಮನವಿ ಮಾಡಿದರು.

'ಓಲಾ, ಉಬರ್ ತಂತ್ರಜ್ಞಾನ ಸೇವೆಗೆ ಸೀಮಿತವಾಗಿರಬೇಕು. ಶೇ 10 ಮಾತ್ರ ಹೆಚ್ಚು ದರ ತೆಗೆದುಕೊಳ್ಳುವಂತೆ ಮಾಡಿ. ನಿಮಗೆ ಪೂರ್ಣ ಪ್ರಮಾಣದ ಅಧಿಕಾರ ಇದೆ' ಎಂದರು.

ಸರ್ವಜ್ಞ ನಗರ ಕ್ಷೇತ್ರದ ಸಕ್ರಿಯ 'ಕೈ' ಕಾರ್ಯಕರ್ತರಿಗೆ ಶಾಸಕರಿಂದ ಇನ್ಶೂರೆನ್ಸ್

ಜಾರ್ಜ್ ₹ 3 ಲಕ್ಷದ 'ಹೆಲ್ತ್ ವಿಮೆ' ಕೊಡುಗೆ!

• ರಾಜೇಶ್ ರೈ ಚಟ್ಲ



ಬೆಂಗಳೂರು: ವಿಧಾನಸಭೆ ಚುನಾವಣೆಗೆ ಇನ್ನೇನು ಆರು ತಿಂಗಳಷ್ಟೆ ಬಾಕಿ ಇದೆ. ಆಗಲೇ ಮತದಾರರನ್ನು ಓಲೈಸಲು ರಾಜ್ಯದ ವಿವಿಧೆಡೆ ಸೀರೆ, ಕಂಬಳಿ, ಕುಕ್ಕರ್, ಸ್ಟೌವ್ ಮತ್ತಿತರ ವಸ್ತುಗಳನ್ನು 'ಉಡುಗೊರೆ'ಯಾಗಿ ತಮ್ಮ ಬೆಂಬಲಿಗರು, ಆಪ್ತರ ಮೂಲಕ ಬಾಗಿಲಿಗೆ ಭಾವಿ ಅಭ್ಯರ್ಥಿಗಳು ತಲುಪಿಸುತ್ತಿದ್ದಾರೆ. ಈ ಮಧ್ಯೆ, ಕಾಂಗ್ರೆಸ್ ನಾಯಕರೂ ಆಗಿರುವ ಸರ್ವಜ್ಞನಗರ ಶಾಸಕ ಕೆ.ಜೆ. ಜಾರ್ಜ್, ತಮ್ಮ ಕ್ಷೇತ್ರದಲ್ಲಿರುವ ಪಕ್ಷದ ಸಕ್ರಿಯ ಕಾರ್ಯಕರ್ತರಿಗೆ ₹ 3 ಲಕ್ಷ ಮೊತ್ತದ 'ಆರೋಗ್ಯ ವಿಮೆ' ಮಾಡಿಸುತ್ತಿದ್ದಾರೆ!

ಸಕ್ರಿಯ ಕಾರ್ಯಕರ್ತರೇ ಪಕ್ಷಕ್ಕೆ ಜೀವಾಳ. ಅವರು ನನ್ನ ಪಾಲಿಗೆ ಕುಟುಂಬದ ಸದಸ್ಯರಂತೆ. ಆರೋಗ್ಯ ಸಂಬಂಧಿ ಸಮಸ್ಯೆ ಎದುರಾದರೆ ಮಾನಸಿಕವಾಗಿ ಅವರು ಕುಗ್ಗಬಾರದೆಂದು ಚಿಕಿತ್ಸೆಯ ನೆರವಿಗೆ ಆರೋಗ್ಯ ವಿಮೆ ಮಾಡಿಸುತ್ತಿದ್ದೇನೆ

ಕೆ.ಜೆ. ಜಾರ್ಜ್, ಶಾಸಕ, ಸರ್ವಜ್ಞನಗರ

ಪ್ರಜಾವಾಣಿ ವಿಶೇಷ

2008ರಲ್ಲಿ ಅಸ್ತಿತ್ವಕ್ಕೆ ಬಂದ ಸರ್ವಜ್ಞನಗರ ಕ್ಷೇತ್ರದಿಂದ 2008, 2013 ಹಾಗೂ 2018ರಲ್ಲಿ ಸತತ ಗೆಲುವು ಸಾಧಿಸಿರುವ ಜಾರ್ಜ್, ಈ ಬಾರಿಯೂ ಅಲ್ಲಿಂದ ಸ್ಪರ್ಧೆ ಬಯಸಿರುವ ಅವರು ಪಕ್ಷಕ್ಕಾಗಿ, ತಮ್ಮ ಗೆಲುವಿಗಾಗಿ ದುಡಿಯುತ್ತಿರುವ ಕಾರ್ಯಕರ್ತರಿಗೆ, ಇಡೀ ರಾಜ್ಯದಲ್ಲಿಯೇ ಮೊದಲ ಬಾರಿಗೆ ಉಚಿತವಾಗಿ ಹೆಲ್ತ್ ಇನ್ಶೂರೆನ್ಸ್ ಕಾರ್ಡ್ ಮಾಡಿಸುತ್ತಿದ್ದಾರೆ.

'ಪ್ರತಿಯೊಬ್ಬರ ಹೆಸರು, ಜನ್ಮದಿನಾಂಕ ಮತ್ತು ಮೊಬೈಲ್ ನಂಬರ್ ಪಡೆದುಕೊಂಡು 'ಗ್ರೂಪ್ ವಿಮೆ' ಯೋಜನೆಯಡಿ ರಿಲಯನ್ಸ್ ಹೆಲ್ತ್ ಇನ್ಶೂರೆನ್ಸ್ ಕಂಪನಿಗೆ ವಿಮೆ ಮೊತ್ತದ ಪ್ರೀಮಿಯಂ ಅನ್ನು ಜಾರ್ಜ್ ಪಾವತಿಸುತ್ತಾರೆ. ಈ ಆರೋಗ್ಯ ಕಾರ್ಡ್ ಹೊಂದಿದವರು ದೇಶದ ಯಾವುದೇ ಆಸ್ಪತ್ರೆಯಲ್ಲಿ ನಗದು ರಹಿತವಾಗಿ, ಉಚಿತ ವೈದ್ಯಕೀಯ ಸೌಲಭ್ಯ ಪಡೆಯಬಹುದು. ಆರೋಗ್ಯ ಚಿಕಿತ್ಸೆ ವೆಚ್ಚ ಇತ್ತೀಚೆಗೆ ದುಬಾರಿಯಾಗಿದೆ. ಪಕ್ಷಕ್ಕಾಗಿ ಕೆಲಸ ಮಾಡುವವರು ಆಸ್ಪತ್ರೆಗೆ ದಾಖಲಾದರೆ ಚಿಕಿತ್ಸಾ ವೆಚ್ಚ ಹೊಂದಿಸಲು ಪರದಾಡಬಾರದೆಂದು ಶಾಸಕರು ಈ ವ್ಯವಸ್ಥೆ ಮಾಡಿದ್ದಾರೆ' ಎಂದು ಜಾರ್ಜ್ ಆಪ್ತರು ಹೇಳಿದ್ದಾರೆ.

'ಕ್ಷೇತ್ರದ ಎಲ್ಲ ಸಕ್ರಿಯ ಕಾರ್ಯಕರ್ತರಿಗೆ ನಮ್ಮ ಶಾಸಕರು ಆರೋಗ್ಯ ವಿಮೆ ಕಾರ್ಡ್ ಮಾಡಿಸುತ್ತಿದ್ದಾರೆ' ಎಂದು ಕೆ.ಜಿ. ಹಳ್ಳಿ ಬ್ಲಾಕ್ ಘಟಕದ ಅಧ್ಯಕ್ಷರಾದ ಸುಮಿತ್ರಾ ಮುನಿಕೃಷ್ಣ ಹೇಳಿದರು.

'ನಮ್ಮ ಕ್ಷೇತ್ರದಲ್ಲಿ ಬಡ, ಮಧ್ಯಮ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜತೆಗೆ ಎಸ್‌ಸಿ, ಎಸ್‌ಟಿ ಹಾಗೂ ಅಲ್ಪಸಂಖ್ಯಾತರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ರಾಜ್ಯದ ಯಾವುದೇ ಕ್ಷೇತ್ರದ ಶಾಸಕರು ಮಾಡದ ಕೆಲಸವನ್ನು ನಮ್ಮ ಶಾಸಕರು ಮಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಕಾರ್ಯಕರ್ತ ರಾಬರ್ಟ್ ಹೇಳಿದರು.

ಮೊದಲ ಹಂತದಲ್ಲಿ 1,060 ಕಾರ್ಡ್


'ಸರ್ವಜ್ಞ ನಗರ ಕ್ಷೇತ್ರದ ಬೂತ್ ಘಟಕಗಳ ಅಧ್ಯಕ್ಷರು, ಬೂತ್ ಮಟ್ಟದ ಏಜೆಂಟರು (ಬಿಎಲ್‌ಎ), ಪದಾಧಿಕಾರಿಗಳು, ಮುಂಚೂಣಿ ಘಟಕಗಳು, ಬ್ಲಾಕ್, ವಾರ್ಡ್ ಮತ್ತು ಬೂತ್ ಸಮಿತಿ ಸದಸ್ಯರಿಗೆ ಆರೋಗ್ಯ ಕಾರ್ಡ್ ವಿತರಿಸುವ ಕೆಲಸ ಶಾಸಕರ ಕಚೇರಿಯ ಮೂಲಕ ಈಗಾಗಲೇ ಆರಂಭವಾಗಿದೆ. ತಲಾ 330 ಬೂತ್ ಅಧ್ಯಕ್ಷರು ಮತ್ತು ಬಿಎಲ್‌ಎಗಳು ಸೇರಿ 660 ಮಂದಿ ಮತ್ತು ಇತರ ಸಮಿತಿಗಳ 400 ಸೇರಿ ಒಟ್ಟು 1060 ಮಂದಿಗೆ ಮೊದಲ ಹಂತದಲ್ಲಿ ಕಾರ್ಡ್ ನೀಡಲಾಗುತ್ತಿದೆ. ಈಗಾಗಲೇ 400 ಮಂದಿ ಕಾರ್ಡ್ ವಿತರಿಸಲಾಗಿದೆ' ಎಂದು ಜಾರ್ಜ್ ಅವರ ಆಪ್ತ ಮೂಲಗಳು ತಿಳಿಸಿವೆ



ಹೆಲ್ತ್ ಕಾರ್ಡ್

ನಿಷ್ಠಾವಂತ ಕಾಂಗ್ರೆಸ್ಸಿಗರ ಕಡೆಗಣನೆ; ಆರೋಪ

ಕೋಲಾರ: ಸಿದ್ದರಾಮಯ್ಯ ಕೋಲಾರ ಕ್ಷೇತ್ರಕ್ಕೆ ಭೇಟಿ ನೀಡಿ ಹಿಂತಿರುಗಿದ ಬೆನ್ನಲ್ಲೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ನಿಷ್ಠಾವಂತ ಕಾಂಗ್ರೆಸಿಗರನ್ನು ಕಡೆಗಣಿಸಲಾಗಿದೆ ಎಂದು ಕೆ.ಎಚ್.ಮುನಿಯಪ್ಪ ಬಣದ ಊರುಬಾಗಿಲು ಶ್ರೀನಿವಾಸ್ ಆರೋಪಿಸಿದ್ದಾರೆ.



ಬೆಂಗಳೂರಿನಲ್ಲಿ ನೂತನವಾಗಿ ಪ್ರಾರಂಭಿಸಿರುವ ಪ್ರಾದೇಶಿಕ ತಂತ್ರಜ್ಞಾನ ಕೇಂದ್ರವನ್ನು ಸೋಮವಾರ ಉದ್ಘಾಟನೆ ಮಾಡಲಾಯಿತು. (ಎಡದಿಂದ) ಭೂಸೇನಾ ಉಪಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಬಿ.ಎಸ್. ರಾಜು, ಆರೋಗ್ಯ ಸಚಿವ ಕೆ. ಸುಧಾಕರ್, ಮೇಜರ್ ಜನರಲ್ ಸಂದೀಪ್ ಮಹಾಜನ್ ಇದ್ದಾರೆ —ಪ್ರಜಾವಾಣಿ ಚಿತ್ರ

'ಸೇನಾ ಆಧುನೀಕರಣ: ಸ್ಥಳೀಯ ಖಾಸಗಿ ವಲಯಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸೇನೆಯು ಆಧುನೀಕರಣಕ್ಕೆ ಸಿದ್ಧವಾಗಿದ್ದು, ರಕ್ಷಣಾ ಉತ್ಪಾದನೆಯಲ್ಲಿ ಸ್ಥಳೀಯ ಖಾಸಗಿ ವಲಯಕ್ಕೆ ಆದ್ಯತೆ ನೀಡಲಾಗುತ್ತಿದೆ' ಎಂದು ಭೂಸೇನಾ ಉಪಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಬಿ.ಎಸ್. ರಾಜು ತಿಳಿಸಿದರು.

ಬೆಂಗಳೂರಿನ ಎಎಸ್‌ಸಿ ಸೆಂಟರ್ ಆ್ಯಂಡ್ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ ಪ್ರಾದೇಶಿಕ ತಂತ್ರಜ್ಞಾನ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿ ದರು.

'ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿಯ (ಆರ್ ಆ್ಯಂಡ್ ಡಿ) ಬಜೆಟ್‌ನ ಶೇ 25ರಷ್ಟು ಮೊತ್ತ ಸ್ಥಳೀಯ ಉದ್ಯಮಗಳಲ್ಲಿ ತಯಾರಾಗುವ ವಸ್ತುಗಳಿಗೆ ಮೀಸಲಿಡಲಾಗುವುದು. ನಮ್ಮ ವ್ಯವಹಾರ ಸಂಪೂರ್ಣ ಪಾರದರ್ಶಕವಾಗಿರುತ್ತದೆ. ನಾವು ಉತ್ಪನ್ನಗಳ ವಿವರಗಳು ಮತ್ತು ತಯಾರಿಸುವ ಗಡುವು ಸಹ ನೀಡುತ್ತೇವೆ. ರಕ್ಷಣಾ ಇಲಾಖೆಯ 400 ಉತ್ಪನ್ನಗಳನ್ನು ಆಮದು ಮಾಡಿಕೊಳ್ಳದಿರಲು ಸರ್ಕಾರ ನಿರ್ಧರಿಸಿದ್ದು, ಅವುಗಳನ್ನು ಸ್ಥಳೀಯವಾಗಿ ಉತ್ಪಾದಿಸಬೇಕು. ಇಲ್ಲಿ ಖಾಸಗಿ ವಲಯಗಳಿಗೆ ವಿಪುಲ ಅವಕಾಶಗಳಿದ್ದು, ಎಲ್ಲರೂ ಭಾಗವಹಿಸಬೇಕು' ಎಂದು ಸಲಹೆ ನೀಡಿದರು.

'ಮುಂಬರುವ ದಶಕಗಳಲ್ಲಿ ಭಾರತೀಯ ಸೇನೆಯು ಆಧುನೀಕರಣಕ್ಕೆ ಸಿದ್ಧವಾಗಿದ್ದು, ಉನ್ನತ ತಂತ್ರಜ್ಞಾನದ ಕ್ಷೇತ್ರದಲ್ಲಿ ಸ್ಥಳೀಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿ ಮಾರುಕಟ್ಟೆಯನ್ನು ಸೃಷ್ಟಿಸಲು ಅವಕಾಶಗಳಿವೆ. ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಸೇನೆಯ ರಕ್ಷಣಾ ಅಗತ್ಯವನ್ನು ಪೂರೈಸುವುದು ಈ ಕಾರ್ಯತಂತ್ರದ ಅವಶ್ಯಕತೆಯಾಗಿದೆ' ಎಂದರು.

'ಆತ್ಮನಿರ್ಭರ ಭಾರತದ ಅಡಿಯಲ್ಲಿ ಸೇನೆಗೆ ಬೇಕಾಗಿರುವ ತಂತ್ರಜ್ಞಾನದ ಅಭಿವೃದ್ಧಿಗಾಗಿ ಉದ್ಯಮ ಮತ್ತು ಶಿಕ್ಷಣದೊಂದಿಗೆ ತೊಡಗಿಸಿಕೊಳ್ಳಲು ದೆಹಲಿಯಲ್ಲಿ ಸ್ಥಾಪನೆ ಮಾಡಿರುವ ಆರ್ಮಿ ಡಿಸೈನ್ ಬ್ಯುರೋ ಈಗ ಫಲ ನೀಡುತ್ತಿದೆ. ರೀಜಿನಲ್ ಟೆಕ್ನಾಲಜಿ ನೋಡ್‌ಗಳು ಅದರ ವ್ಯಾಪ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತಿವೆ' ಎಂದು ಮಾಹಿತಿ ನೀಡಿದರು.

ಆರೋಗ್ಯ ಸಚಿವ ಕೆ. ಸುಧಾಕರ್ ಮಾತನಾಡಿ, 'ರಾಜ್ಯ ಸರ್ಕಾರ ಜಾರಿಗೊಳಿಸುತ್ತಿರುವ 'ವೈಮಾನಿಕ ಮತ್ತು ರಕ್ಷಣಾ ನೀತಿ 2022–2027 ರಕ್ಷಣಾ ವಲಯದಲ್ಲಿ ಸ್ವದೇಶಿ ಉತ್ಪನ್ನಗಳನ್ನು ಹೆಚ್ಚಿಸಿ ಆತ್ಮನಿರ್ಭರತೆ ಸಾಧಿಸಲು ನೆರವಾಗಲಿದೆ. ಆರ್‌ಟಿಎನ್–ಬಿ ಸ್ಥಾಪನೆಯಿಂದ ನವೋದ್ಯಮ ಕಿರು, ಸಣ್ಣ, ಮಧ್ಯಮ ಕೈಗಾರಿಕೆಗಳಿಗೆ ಹೊಸ ಅವಕಾಶಗಳನ್ನು ನೀಡಲಿದೆ' ಎಂದರು.

17ರಿಂದ 'ಸುಸ್ಥಿರ ಅಭಿವೃದ್ಧಿ' ರಾಷ್ಟ್ರೀಯ ವಿಚಾರಸಂಕಿರಣ

ಬೆಂಗಳೂರು: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಬೆಂಗಳೂರು ಕೇಂದ್ರದಿಂದ 'ಭವಿಷ್ಯದಲ್ಲಿ ಸುಸ್ಥಿರ ಅಭಿವೃದ್ಧಿ' ವಿಷಯ ಕುರಿತು ನ.17 ಹಾಗೂ 18ರಂದು ರಾಷ್ಟ್ರೀಯ ವಿಚಾರಸಂಕಿರಣ ಆಯೋಜಿಸಲಾಗಿದೆ. ನಿಮ್ಹಾನ್ಸ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ.

ವಿಚಾರಸಂಕಿರಣದಲ್ಲಿ ನೂತನ ಆವಿಷ್ಕಾರ, ಸುಸ್ಥಿರ ಮೌಲಸೌಕರ್ಯದ ಮೌಲ್ಯಗಳು, ಹಸಿರು ನಗರ ಹಾಗೂ ಕಟ್ಟಡ ಸೇರಿ ವಿವಿಧ ವಿಷಯಗಳ ಕುರಿತು ತಜ್ಞರು ವಿಷಯ ಮಂಡಿಸಲಿದ್ದಾರೆ. ಐಎಎಸ್ ಅಧಿಕಾರಿಗಳಾದ ಡಾ.ಶಾಲಿನಿ ರಜನೀಶ್, ಡಾ.ಎಸ್. ಸೆಲ್ವಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಸಮರ್ಪಣ–2022: ಅತಿಥಿಗಳು: ಎ.ಎಸ್. ಕಿರಣಕುಮಾರ್, ಎಂ.ಆರ್. ದೊರೆಸ್ವಾಮಿ, ಡಿ. ಜವಾಹರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬೆಳಿಗ್ಗೆ 10

ಮೆಂಟಲ್ ಹೆಲ್ತ್ ಇನಿಷಿಯೇಟಿವ್: ಅತಿಥಿಗಳು: ಕೆ. ಪಿ. ನಾಗೇಶ, ಡಾ. ಚಂದ್ರಶೇಖರನ್, ಜೀತೇಂದ್ರ ಅನೆಜಾ, ಆಯೋಜನೆ: ರೋಟರಿ, ಸ್ಥಳ: ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಮಹಾರಾಜ ಹಾಲ್, ಚಾಮರಾಜಪೇಟೆ, ಬೆಳಿಗ್ಗೆ 11.30

ಪೌರಾಣಿಕ ನಾಟಕೋತ್ಸವ: 'ಕೃಷ್ಣ ಸಂಧಾನ' ಪ್ರದರ್ಶನ: ಬೆಳಿಗ್ಗೆ 11, ಸತ್ಯ ಹರಿಶ್ಚಂದ್ರ ಪ್ರದರ್ಶನ: ಸಂಜೆ 5, ಉದ್ಘಾಟನೆ: ಬಿ. ನೀಲಮ್ಮ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಪಟೇಲ್ ಪಾಂಡು, ಕಲ್ಲೂರು ಶ್ರೀನಿವಾಸ್, ಹರಿನಾಥ್. ಎಂ.ಎಸ್., ಆಯೋಜನೆ: ಪರಸ್ಪರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ವೇದಿಕೆ ಕಾರ್ಯಕ್ರಮ ಸಂಜೆ 4.30



'ಶ್ರೀಕೃಷ್ಣ ಸಂಧಾನ' ನಾಟಕದ ದೃಶ್ಯ (ಸಂಗ್ರಹ ಚಿತ್ರ)

'ದ್ರೌಪತಿ ಹೇಳ್ತವ್ಳೆ' ನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ರಂಗಾಸ್ಥೆ, ಸ್ಥಳ: ರಂಗಶಂಕರ, ಸಂಜೆ 7.30

ಸಸ್ಯಕಾಶಿಯಲ್ಲಿನ ಸಮೀಕ್ಷೆ ಒಳಿತಿನ ನಿರೀಕ್ಷೆ



ಹೂತೋಟ... ಸಮಸ್ಯೆಗಳ ನೋಟ

ಲಾಲ್‌ಬಾಗ್ ಪ್ರವಾಸಿಗರಿಗೆ ಅಷ್ಟೇ ಅಲ್ಲದೆ ನಗರ ನಾಗರಿಕರಿಗೂ ಹೆಮ್ಮೆಯ ತಾಣ. ಅಸಂಖ್ಯ ಜನ ಇಲ್ಲಿ ಹಸಿರಿನ ಉಸಿರು ಪಡೆದುಕೊಂಡು ಹೋಗಲು ಬರುತ್ತಾರೆ. 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಇಲ್ಲಿಗೆ ಬರುವ ವಾಯುವಿಹಾರಿಗಳು ಹಾಗೂ ಪ್ರವಾಸಿಗರಲ್ಲಿ 500ಕ್ಕೂ ಹೆಚ್ಚು ಮಂದಿಯನ್ನು ಸಮೀಕ್ಷೆಗೆ ಒಳಪಡಿಸಿತು. ಅಲ್ಲಿ ಜನರೇ ತೋಡಿಕೊಂಡ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಿ 'ಜನಸ್ಪಂದನ' ನಡೆಸಲು ಯತ್ನಿಸಿತು. ಆದರೆ, ಅದಕ್ಕೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಸಮೀಕ್ಷೆಯಲ್ಲಿ ವ್ಯಕ್ತವಾದ, ಹಾಸಿ ಹೊದೆಯುವಷ್ಟು ಇರುವ ಸಮಸ್ಯೆಗಳು ಇದೋ ನಿಮ್ಮ ಓದಿಗೆ....

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುರಿದ ಬೆಂಚ್‌ಗಳು, ಹಾಳಾದ ನಡಿಗೆ ಪಥಗಳು, ಎಲ್ಲೆಂದರಲ್ಲಿ ಬೀಳುವ ಪ್ಲಾಸ್ಟಿಕ್ ರಾಶಿ, ಅಪಾಯಕ್ಕೆ ತೆರೆದುಕೊಂಡಿರುವ ವಿದ್ಯುತ್ ಪೆಟ್ಟಿಗೆಗಳು, ಮಾಯವಾದ ದಾಸವಾಳ ಹೂತೋಟ, ಪಾಳು ಬಿದ್ದ ನಂಜಪ್ಪ ಸ್ಮಾರಕ ಭವನ...

ಹಲವು ಇಲ್ಲಗಳ ನಡುವೆ ನಿರ್ವಹಣೆ ಕೊರತೆಯಿಂದ ಬಳಲುತ್ತಿರುವ ಲಾಲ್‌ಬಾಗ್‌ನ ಸದ್ಯದ ಚಿತ್ರಣ ಇದು. ಒಂದು ಕಾಲದಲ್ಲಿ ಸಸ್ಯಕಾಶಿ, ಚಂದವಳ್ಳಿ ಹೂದೋಟ ಎಂದೆಲ್ಲಾ ಕರೆಸಿಕೊಳ್ಳು-ತ್ತಿದ್ದ ಲಾಲ್‌ಬಾಗ್ ಈಗ ಕಳೆಗುಂದಿದೆ.

ಸದ್ಯದ ಸ್ಥಿತಿಯ ಬಗ್ಗೆ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಮೀಕ್ಷೆ ನಡೆಸಿದ್ದು, ಅಭಿವೃದ್ಧಿಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂಬುದರ ಕುರಿತು ಸಾರ್ವಜನಿ-ಕರಿಂದ ಅಭಿಪ್ರಾಯ ಸಂಗ್ರಹಿಸಿದೆ. 500ಕ್ಕೂ ಹೆಚ್ಚು ಜನರಿಂದ ಅಭಿಪ್ರಾಯ ಸಂಗ್ರಹಿಸಿ ಸಮೀಕ್ಷಾ ವರದಿ ಸಿದ್ಧಪಡಿಸಲಾಗಿದೆ. ವಾಯುವಿಹಾರಿಗಳು, ಪಕೃತಿ ಪ್ರೇಮಿಗಳು, ಪಕ್ಷಿ ವೀಕ್ಷಕರನ್ನೂ ಸಮೀಕ್ಷೆಯಲ್ಲಿ ಒಳಗೊಳ್ಳಲಾಗಿದೆ.

ಇದೆಲ್ಲದರ ನಡುವೆ ಲಾಲ್‌ಬಾಗ್‌ನಲ್ಲೇ ಜನಸ್ಪಂದನ ಕಾರ್ಯಕ್ರಮವನ್ನು 2018ರ ನವೆಂಬರ್ 25ರಂದು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ತಂಡ ಆಯೋಜಿಸಿತ್ತು.

ಅಲ್ಲಿನ ಜ್ವಲಂತ ಸಮಸ್ಯೆಗಳ ಬಗ್ಗೆ ಜನರಿಂದಲೇ ಅಧಿಕಾರಿಗಳಿಗೆ ತಿಳಿಸುವ ಪ್ರಯತ್ನವನ್ನು ಮಾಡಿತ್ತು. ಅದರ ಪರಿಣಾಮ ಕೆಲ ಸುಧಾರಣೆಗಳೂ ಆಗಿದ್ದವು. ಸರ್ಕಾರಿ ವಾಹನಗಳು ಉದ್ಯಾನದ ಒಳಗೆ ಬರುವುದು ನಿಂತಿತ್ತು. ಕಸ ನಿರ್ವಹಣೆ, ಬೆಳಕಿನ ಸೌಲಭ್ಯ, ಸುರಕ್ಷತಾ ಕ್ರಮಗಳು, ಶೌಚಾಲಯಗಳ ಸ್ಥಿತಿಯಲ್ಲಿ ಕೊಂಚ ಸುಧಾರಣೆ ಆಗಿತ್ತು.

'ಪ್ರಜಾವಾಣಿ' ತಂಡ ಶನಿವಾರ (ನ.12ರಂದು) ಮತ್ತೊಮ್ಮೆ ಲಾಲ್‌ಬಾಗ್‌ನಲ್ಲಿ ಸುತ್ತಾಡಿ ಸಮಸ್ಯೆಗಳು ಸುಧಾರಣೆ ಆಗಿದೆಯೇ ಎಂದು ಪರಿಶೀಲಿಸಿತು. ಆದರೆ, ಉದ್ಯಾನ ಇನ್ನಷ್ಟು ಹಾಳಾಗಿರುವುದು ಗೋಚರಿಸಿತು. ಜನ ಕೂಡ ಅವ್ಯವಸ್ಥೆಯ ಆಗರ ಆಗಿರುವುದರ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಅಭಿವೃದ್ಧಿಗೆ ಜನರ ಸಲಹೆಗಳು

- ಪಶ್ಚಿಮ ಮತ್ತು ಮುಖ್ಯ ದ್ವಾರದಲ್ಲಿನ ವಾಹನ ನಿಲುಗಡೆ ಸಮಸ್ಯೆ ಪರಿಹರಿಸಬೇಕು.
- ವಾಹನ ನಿಲುಗಡೆ ಪ್ರದೇಶ ವ್ಯಾಪಾರ ಕೇಂದ್ರವಾಗಿದ್ದು, ಅದನ್ನು ತಪ್ಪಿಸಬೇಕು.
- ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆ, ಮೈಸೂರಿನ ಮಾದರಿಯಲ್ಲಿ ಸಂಗೀತ ಕಾರಂಜಿ ಪರಿಚಯಿಸಬೇಕು.
- ಪ್ರವಾಸಿಗರ ಅನುಕೂಲಕ್ಕಾಗಿ ಲಾಲ್‌ಬಾಗ್ ಆ್ಯಪ್ ಅಭಿವೃದ್ಧಿಪಡಿಸಬೇಕು.
- ಮಳೆ ಬಂದಾಗ ಪಾದಚಾರಿಗಳು ನಿಲ್ಲಲು ಅಲ್ಲಲ್ಲಿ ಶೆಲ್ಟರ್‌ಗಳ ನಿರ್ಮಾಣವಾಗಬೇಕು.
- ಪ್ರವಾಸಿಗರ ಅನುಕೂಲಕ್ಕಾಗಿ ನಾಮಫಲಕಗಳನ್ನು ಅಳವಡಿಸಬೇಕು.
- ಹಣ್ಣುಗಳು ಕೊಳೆತು ತ್ಯಾಜ್ಯವಾಗುತ್ತಿದ್ದು, ಉದ್ಯಾನದೊಳಗೆ ಆಹಾರ ಮತ್ತು ಸಿಹಿ ತಿಂಡಿ ಮಾರಾಟ ನಿಷೇಧಿಸಬೇಕು.
- ಮಕ್ಕಳಿಗೆ ಮೀಸಲಾದ ಪ್ರತ್ಯೇಕ ಆಟದ ಪ್ರದೇಶ ನಿರ್ಮಿಸಬೇಕು.
- ಕಾಫಿ–ಕುರುಕಲು ತಿಂಡಿಗಳನ್ನು ಸೇವಿಸಲು ಪ್ರತ್ಯೇಕ ಕೆಫೆಟೇರಿಯಾ ಸೌಲಭ್ಯ.
- ಓಟಕ್ಕೆ ಪ್ರತ್ಯೇಕ ಪಥ, ಕೆರೆಯ ಉದ್ದಕ್ಕೂ ಜಾಗಿಂಗ್ ಟ್ರ್ಯಾಕ್ ನಿರ್ಮಾಣ.
- ಗುಡ್ಡದ ಸುತ್ತಲಿನ ಪ್ರದೇಶವನ್ನು ಅಭಿವೃದ್ಧಿಪಡಿಸಿ, ಉದ್ಯಾನವಾಗಿ ಪರಿವರ್ತಿಸುವ ಅವಕಾಶ ಪರಿಗಣಿಸಬೇಕು.
- ಪ್ರಾಣಿ ಮತ್ತು ಮೀನು ಸಂಗ್ರಹಾಲಯ ತೆರೆಯಬೇಕು.
- ಸಂಗೀತ ಪ್ರದರ್ಶನಕ್ಕೆ ಪ್ರತ್ಯೇಕ ಬ್ಯಾಂಡ್‌ಸ್ಟ್ಯಾಂಡ್ ಪ್ರದೇಶ ನಿರ್ಮಿಸಬೇಕು.
- ಗಾಜಿನಮನೆ ಉನ್ನತೀಕರಿಸಬೇಕು. ನಾಲ್ಕೂ ಗೇಟ್‌ಗಳಲ್ಲಿ ಸ್ಕೈವಾಕ್ ನಿರ್ಮಿಸಬೇಕು.
- ವಾಯುವಿಹಾರದ ಸಮಯ ವಿಸ್ತರಿಸಬೇಕು. ಪೊಲೀಸ್ ಭದ್ರತೆ ಹೆಚ್ಚಿಸಿ, ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು.


ಕಲೆ: ಗುರು ನಾವಳ್ಳಿ

'ಬರಕೊಳ್ಳಪ್ಪಾ. . ಇದು ಮುನಿರತ್ನನ ಆದೇಶ'

ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಲ್ಲಿ ಸರ್ಕಾರ ಬಿಟ್ಟು ಯಾವುದೇ ಖಾಸಗಿ ಸಂಸ್ಥೆಗೆ ಅವಕಾಶ ಕೊಡುವುದಿಲ್ಲ. ಫಲಪುಷ್ಪ ಪ್ರದರ್ಶನ, ಮಾವು–ಹಲಸು ಮೇಳದಂತಹ ಸರ್ಕಾರ ನಡೆಸುವ ಕಾರ್ಯಕ್ರಮಗಳಿಗೆ ಬಿಟ್ಟು ಬೇರಾರೂ ಮಾಡುವಂತಿಲ್ಲ. ಇದು ಈ ಮುನಿರತ್ನನ ಆದೇಶ ಅಂತ 'ಪ್ರಜಾವಾಣಿ'ಯವರ ಪತ್ರದ ಮೇಲೆ ಬರೆದು ಆದೇಶ ಹೊರಡಿಸಪ್ಪ. . . ಹೀಗೆಂದು ತಮ್ಮ ಆಪ್ತ ಸಹಾಯಕರಿಗೆ ಹೇಳಿದವರು ತೋಟಗಾರಿಕೆ ಸಚಿವ ಮುನಿರತ್ನ. ಲಾಲ್‌ಬಾಗ್‌ನಲ್ಲಿ ಜನಸ್ಪಂದನ ಮಾಡಲು ಅವಕಾಶ ಕೋರಿ ಬರೆದ ಪತ್ರ ನೋಡಿದ ಕೂಡಲೇ, 'ಅದು ಸರಿ ಇಲ್ಲ, ಇದು ಸರಿ ಇಲ್ಲ ಎಂದು ಈಗಲೇ ಟ್ವಿಟರ್‌ನಲ್ಲಿ, ಫೇಸ್‌ಬುಕ್‌ನಲ್ಲಿ ಬರೆದು ದಿನಾ ಕಾಟ ಕೊಡ್ತಾ ಇದ್ದಾರೆ. ಇನ್ನಷ್ಟು ಬೈಯಿಸಿಕೊಳ್ಳಲು ಜನಸ್ಪಂದನಕ್ಕೆ ಅವಕಾಶ ಕೊಡಬೇಕಾ? ನಿಮ್ಮ ಮನವಿಯನ್ನೇ ಆಧಾರವಾಗಿಟ್ಟುಕೊಂಡು ಈ ಮುನಿರತ್ನ ಒಂದು ಐತಿಹಾಸಿಕ ಆದೇಶ ಹೊರಡಿಸುತ್ತಾನೆ. ಯಾರಿಗೂ ಅವಕಾಶ ಕೊಡುವುದಿಲ್ಲ. ನಾಳೆ ಬೆಳಿಗ್ಗೆಯೇ ಆದೇಶ ಹೊರಡಿಸಿ ನನ್ನ ಮುಂದೆ ಇಡಬೇಕು. ಲಾಲ್‌ಬಾಗ್‌ನ ಸಮಸ್ಯೆಯನ್ನು ಪರಿಹರಿಸುವುದಕ್ಕೆ 'ಜನಸ್ಪಂದನ' ಯಾಕೆ? ಅಲ್ಲಿ ಬಂದಿರುವ ಸಮಸ್ಯೆಯನ್ನು ನನ್ನ ಬಳಿಯೇ ಕೊಡಿ. ತಕ್ಷಣವೇ ಬದಲಿಸುತ್ತೇನೆ' ಹೀಗೆಂದು ಅಬ್ಬರಿಸಿ ಬೊಬ್ಬರಿದರು ಮುನಿರತ್ನ.

ಜನರ ಪ್ರತಿಕ್ರಿಯೆಗಳು


ಗಿಡಗಳ ಎಲೆಗಳು ಪಾದಚಾರಿ ಮಾರ್ಗದಲ್ಲಿ ಬಿದ್ದು, ಕೊಳೆಯುತ್ತಿವೆ. ಅವುಗಳನ್ನು ತೆರವು ಮಾಡಿ, ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸುಸಜ್ಜಿತ ಪಾದಚಾರಿ ಮಾರ್ಗವನ್ನು ನಿರ್ಮಿಸಬೇಕು. ಶೌಚಾಲಯ ಸೇರಿ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು. ವಿವಿಧ ಬಗೆಯ ಹೂಗಿಡಗಳನ್ನು ಬೆಳೆಸಬೇಕು.

ಪ್ರಕಾಶ್ ಶಿಗ್ಲಿ, ಕಾಟನ್ ಪೇಟೆ


ಸಸ್ಯಕಾಶಿ ಎಂದೇ ಹೆಸರಾದ ಲಾಲ್‌ಬಾಗ್ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಬೀದಿ ದೀಪಗಳು ಹಾಳಾದರೂ ಕೂಡಲೇ ಸರಿಪಡಿಸುತ್ತಿಲ್ಲ. ಕೆರೆಗೆ ಕೊಳಚೆ ನೀರು ಸೇರುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ವ್ಯಾಪಾರಿಗಳಿಗೆ ಲಾಲ್‌ಬಾಗ್ ಒಳಗಡೆ ಅವಕಾಶ ನೀಡಬಾರದು.

ನೇತ್ರಾ, ನಾಗಸಂದ್ರ


ಮಳೆ ಬಂದಲ್ಲಿ ಲಾಲ್‌ಬಾಗ್‌ನಲ್ಲಿ ಓಡಾಡುವುದು ಕಷ್ಟ. ಆದ್ದರಿಂದ ಸುಸಜ್ಜಿತ ಪಥ ನಿರ್ಮಿಸಬೇಕು. ಮುರಿದು ಬಿದ್ದ ಮರದ ರೆಂಬೆಗಳನ್ನು ವಿಲೇವಾರಿ ಮಾಡಬೇಕು. ಎಲ್ಲ ಪ್ರವೇಶದ್ವಾರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು. ಲಾಲ್‌ಬಾಗ್‌ನಲ್ಲಿ ಬ್ಯಾಡ್ಮಿಂಟನ್ ಸೇರಿ ವಿವಿಧ ಆಟಗಳಿಗೆ ನಿರ್ಬಂಧ ವಿಧಿಸಬೇಕು.

ಅನಿಲ್, ಜಯನಗರ


ಲಾಲ್‌ಬಾಗ್‌ನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ಕೆರೆಯನ್ನು ಅಭಿವೃದ್ಧಿಪಡಿಸಿ, ಸುತ್ತಲೂ ಇನ್ನಷ್ಟು ಗಿಡಗಳನ್ನು ಬೆಳೆಸಬೇಕು. ಮಳೆ ಬಂದಾಗ ರಕ್ಷಿಸಿಕೊಳ್ಳಲು ಕುಟೀರಗಳನ್ನು ನಿರ್ಮಿಸಬೇಕು. ಶಿಥಿಲಾವಸ್ಥೆ ತಲುಪಿರುವ ಕಟ್ಟಡಗಳನ್ನು ಪುನರುಜ್ಜೀವನ ಮಾಡಬೇಕು.

ಮಂಜುನಾಥ್, ಬಿಟಿಎಂ ಲೇಔಟ್


ಲಾಲ್‌ಬಾಗ್‌ನಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಎಲ್ಲೆಡೆ ಕಸದ ತೊಟ್ಟಿಗಳನ್ನು ಇರಿಸುವ ಜತೆಗೆ ಪ್ರತಿನಿತ್ಯ ಕಸವನ್ನು ವಿಲೇವಾರಿ ಮಾಡಬೇಕು. ಕುಡಿಯುವ ನೀರಿನ ಘಟಕಗಳನ್ನು ಇನ್ನಷ್ಟು ಕಡೆ ನಿರ್ಮಿಸಬೇಕು. ಕೆಲವೆಡೆ ಹುಲ್ಲು ಹಾಗೂ ಗಿಡಗಂಟಿಗಳು ಬೆಳೆದುಕೊಂಡಿವೆ. ಅವನ್ನು ತೆರವು ಮಾಡಬೇಕು.

ಮಾಲತಿ, ಜಯನಗರ 4ನೇ ಹಂತ

ಪಾದಚಾರಿ ಮಾರ್ಗವೇ ಜಾರುಬಂಡಿ

ಲಾಲ್‌ಬಾಗ್ ಉದ್ಯಾನದ ಕೆಲವೆಡೆ ವಿಶೇಷವಾಗಿ ಕೆರೆಯ ಸುತ್ತಲೂ ಪಾದಚಾರಿಗಳ ಮಾರ್ಗಗಳು ಸುಧಾರಣೆಯಾಗಬೇಕಿದೆ ಎಂಬ ಅಭಿಪ್ರಾಯಗಳು ಸಮೀಕ್ಷೆ ಸಂದರ್ಭದಲ್ಲಿ ಸಾರ್ವಜನಿಕರಿಂದ ವ್ಯಕ್ತವಾಗಿವೆ.

ಪಾದಚಾರಿ ಮಾರ್ಗಗಳು ಸಮತಟ್ಟಾಗಿಲ್ಲದ ಕಾರಣ ವಾಯುವಿಹಾರಿಗಳು ಬೀಳುವ ಆತಂಕದಲ್ಲೇ ನಡೆಯಬೇಕಾದ ಸ್ಥಿತಿ ಇದೆ. ಮಳೆಗಾಲದಲ್ಲಂತೂ ಪಾದಚಾರಿ ಮಾರ್ಗಗಳೇ ಜಾರು ಬಂಡಿಗಳಾಗುತ್ತಿವೆ.



'ಪ್ಲಾಸ್ಟಿಕ್ ಮುಕ್ತವಾಗಬೇಕು, ಶುದ್ಧ ನೀರು ಬೇಕು'

ಪ್ಲಾಸ್ಟಿಕ್ ಬಾಟಲಿಗಳನ್ನು ಬಿಸಾಡಿ ಪರಿಸರವನ್ನು ಹಾಳು ಮಾಡಲಾಗುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ ಎಲ್ಲೆಂದರಲ್ಲಿ ಬಿದ್ದಿರುವುದು ಸಾಮಾನ್ಯವಾಗಿದೆ. ಇದನ್ನು ತಪ್ಪಿಸಲು ಭದ್ರತೆ ಬಿಗಿಗೊಳಿಸಬೇಕು ಮತ್ತು ಪ್ಲಾಸ್ಟಿಕ್ ಬಿಸಾಡುವವರನ್ನು ಗುರುತಿಸಿ ದಂಡ ವಿಧಿಸಬೇಕು. ಆ ಮೂಲಕ ಲಾಲ್‌ಬಾಗ್ ಅನ್ನು ಪ್ಲಾಸ್ಟಿಕ್ ಮುಕ್ತಗೊಳಿಸಬೇಕು ಎಂಬುದು ಜನರ ಸಲಹೆ.

ಉದ್ಯಾನಕ್ಕೆ ಭೇಟಿ ನೀಡುವವರಿಗೆ ಕುಡಿಯಲು ಶುದ್ಧ ನೀರು ಒದಗಿಸುವುದು ನಿರ್ವಹಣೆ ಮಾಡುವವರ ಆದ್ಯ ಕರ್ತವ್ಯ. ಆದರೆ, ಉದ್ಯಾನದಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿ ಅದೆಷ್ಟೋ ಕಾಲವಾಗಿದೆ. ಹಲವೆಡೆ ಕುಡಿಯುವ ನೀರೇ ಸಿಗದ ಸ್ಥಿತಿ ಇದೆ. ಕೆಂಪೇಗೌಡ ಗೋಪುರದ ಬಳಿ ಟ್ಯಾಂಕ್ ಸ್ವಚ್ಛತೆಯನ್ನೇ ಕಂಡಿಲ್ಲ. ಅವುಗಳನ್ನು ಸ್ವಚ್ಛಗೊಳಿಸುವ ಜತೆಗೆ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸುವುದು ಸೂಕ್ತ ಎಂಬುದು ಜನರ ಸಲಹೆ.

ಉದ್ಯಾನದಲ್ಲಿ ಬೀದಿ ದೀಪದ ವ್ಯವಸ್ಥೆಗಳು ಸಮರ್ಪಕವಾಗಿಲ್ಲ. ಶೌಚಾಲಯಗಳ ನಿರ್ವಹಣೆ ಇಲ್ಲದೆ ಅವುಗಳ ಒಳ ಹೋಗಲು ಜನ ಹೆದರುವ ಸ್ಥಿತಿ ಇದೆ. ಇವುಗಳ ಸುಧಾರಣೆ ಆಗಬೇಕಿದೆ. ಹಿರಿಯ ನಾಗರಿಕರಿಗಾಗಿ ಪಾಶ್ಚಿಮಾತ್ಯ ಶೈಲಿಯ ಶೌಚಾಲಯಗಳನ್ನು ನಿರ್ಮಿಸಬೇಕು, ಬೀಗ ಬಿದ್ದಿರುವ ಶೌಚಾಲಯಗಳನ್ನು ತೆರೆದು ಸ್ವಚ್ಛಗೊಳಿಸಬೇಕು ಎಂಬುದು ಪಾದಚಾರಿಗಳ ಮನವಿ.

ಪಕ್ಷಿಗಳಿಗೆ ಆಹಾರ ಹಾಕುವುದರಿಂದ ಅದನ್ನು ತಿನ್ನಲು ಬರುವ ಬೀದಿ ನಾಯಿಗಳಿಂದ ಉಪಟಳ ಹೆಚ್ಚಾಗಿದೆ. ಹಕ್ಕಿಗಳಿಗೆ ಆಹಾರ ಹಾಕುವುದನ್ನು ನಿಷೇಧಿಸಬೇಕು ಎಂಬುದನ್ನು ಸಮೀಕ್ಷೆಯಲ್ಲಿ ಜನ ಹೇಳಿದ್ದಾರೆ.

ಪ್ರತ್ಯೇಕ ಸೈಕಲ್ ಪಥಕ್ಕೆ ಮನವಿ

ವಾಯುವಿಹಾರಿಗಳಿಗೆ ಪ್ರತ್ಯೇಕ ಟ್ರ್ಯಾಕ್ ನಿರ್ಮಿಸಬೇಕು. ರಸ್ತೆಯಲ್ಲಿ ಯೋಗಾಭ್ಯಾಸ ಮಾಡುತ್ತಿದ್ದು, ಅದನ್ನು ತಪ್ಪಿಸಬೇಕು. ಯೋಗಕ್ಕೆ ಪ್ರತ್ಯೇಕ ಸ್ಥಳ ನಿಗದಿ ಪಡಿಸಬೇಕು. ಉದ್ಯಾನದೊಳಗೆ ಸೈಕ್ಲಿಂಗ್ ಟ್ರ್ಯಾಕ್, ಹಿಂದಿನಂತೆಯೇ ಸೈಕಲ್ ನಿಲುಗಡೆಗೆ ಅವಕಾಶ ಕಲ್ಪಿಸಬೇಕು ಎಂದು ಜನ ಮನವಿ ಮಾಡಿದ್ದಾರೆ.

ಅಂಗವಿಕಲರ ಅನುಕೂಲಕ್ಕೆ ಬೆಳಿಗ್ಗೆ 7ರ ಒಳಗೆ ಹಾಗೂ ಸಂಜೆ 7ರ ನಂತರ ಗಾಲಿಕುರ್ಚಿ ವ್ಯವಸ್ಥೆ ಮಾಡಬೇಕು. ಫಲಪುಷ್ಪ ಪ್ರದರ್ಶನದ ಬಳಿಕ ತಕ್ಷಣವೇ ಉದ್ಯಾನ ಸ್ವಚ್ಛಗೊಳಿಸಬೇಕು. ಜನಪದ ಮೇಳವನ್ನು ಪುನರ್ ಆರಂಭಿಸಬೇಕು. ಆಕ್ಯುಪ್ರೆಶರ್ ಕಲ್ಲಿನ ನಡಿಗೆಗೆ ವ್ಯವಸ್ಥೆ ಮಾಡಬೇಕು. ಉದ್ಯಾನದ ಒಳಗೆ ಲಭಿಸುತ್ತಿರುವ ಆಹಾರ, ಹಣ್ಣು, ಜ್ಯೂಸ್‌ಗೆ ಹೆಚ್ಚಿನ ದರವಿದೆ. ಅದನ್ನು ತಪ್ಪಿಸಬೇಕು. ಫುಡ್ ಕೋರ್ಟ್ ನಿರ್ಮಿಸಬೇಕು ಎಂಬ ಆಗ್ರಹಗಳು ಸಮೀಕ್ಷೆಯಲ್ಲಿ ಬಂದಿವೆ.

ನಗರದ ಮಾಲಿನ್ಯದ ನೀರು ಕೆರೆಯ ಒಡಲು ಸೇರುತ್ತಿದೆ. ಅದನ್ನು ತಪ್ಪಿಸಬೇಕು, ಎಲ್‌ಇಡಿ ಲೈಟ್ ವ್ಯವಸ್ಥೆ ಮಾಡಬೇಕು ಎಂದೂ ಜನ ಮನವಿ ಮಾಡಿದ್ದಾರೆ.

ಲಾಲ್‌ಬಾಗ್ ಅಭಿವೃದ್ಧಿಗೆ ಕ್ರಮ: ಕುಸುಮಾ

'ಲಾಲ್‌ಬಾಗ್‌ನಲ್ಲಿ ಹೊಸದಾಗಿ ಕುಡಿಯುವ ನೀರಿನ ಘಟಕಗಳು, ಮಳೆಯಿಂದ ರಕ್ಷಿಸುವ ಪರಿಸರ ಸ್ನೇಹಿ ಕುಟೀರ ನಿರ್ಮಿಸಲು ಮತ್ತು ರಸ್ತೆಗಳ ಅಭಿವೃದ್ಧಿ ಪಡಿಸಲು ಪ್ರಸ್ತಾವ ಸಲ್ಲಿಸಲಾಗಿದೆ. ಬಜೆಟ್ ಇಲ್ಲದ ಕಾರಣ ಕಾಮಗಾರಿ ಪ್ರಾರಂಭವಾಗಿಲ್ಲ. ಲಾಲ್‌ಬಾಗ್‌ನಲ್ಲಿರುವ ವಾಕಿಂಗ್ ಪಥ 20 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಈಗ ಎಲ್ಲಾ ಹಾಳಾಗಿವೆ. ಮುಂದಿನ ದಿನಗಳಲ್ಲಿ ಇವುಗಳ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ತಿಳಿಸಿದರು.

'ಲಾಲ್‌ಬಾಗ್ ಉದ್ಯಾನದಲ್ಲಿ ನಾಯಿಗಳಿದ್ದು, ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಇವುಗಳನ್ನು ಬೇರೆ ಕಡೆ ಸ್ಥಳಾಂತರ ಮಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ, ಎಲ್ಲಾ ನಾಯಿಗಳಿಗೂ ಲಸಿಕೆಯ ಜೊತೆಗೆ ಶೇ 80ರಷ್ಟು ನಾಯಿಗಳಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಲಾಗಿದೆ. ಇದುವರೆಗೂ ಯಾವುದೇ ನಾಯಿ ಕಚ್ಚಿರುವ ಪ್ರಕರಣಗಳಿಲ್ಲ' ಎಂದು ಮಾಹಿತಿ ನೀಡಿದರು.

'ಉದ್ಯಾನದ ಕೆಲ ಭಾಗಗಳಲ್ಲಿ ವಿದ್ಯುತ್ ಜಂಕ್ಷನ್ ಬಾಕ್ಸ್‌ನ ತುಂಬಾ ಹಳೆದಾಗಿವೆ. ಅವುಗಳ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರ ಜಾಗೃತಿಗಾಗಿ ಫಲಕಗಳನ್ನು ಅಳವಡಿಸಲಾಗಿದೆ. ಕೆರೆ ಮೇಲಿನ ಪಾದಚಾರಿ ಮಾರ್ಗಕ್ಕೆ ಹೊಸಕೋಟೆ ಮಣ್ಣು ಹಾಕಿಸಲು ಯೋಜನೆ ರೂಪಿಸಲಾಗಿದೆ' ಎಂದರು.

'ಸತತವಾಗಿ ಸುರಿದ ಮಳೆಯ ಕಾರಣ ಬ್ಯಾಂಡ್ ಸ್ಟ್ಯಾಂಡ್ ಹತ್ತಿರದ ತಗ್ಗು ಪ್ರದೇಶದಲ್ಲಿ ಕೊಳಚೆ ನೀರು ತುಂಬಿಕೊಂಡಿದ್ದು, ದುರಸ್ತಿಗೊಳಿಸಲು ಪ್ರಸ್ತಾವ ಸಲ್ಲಿಸಲಾಗಿದೆ. ಇದನ್ನು ಸರಿಪಡಿಸಲು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ತಜ್ಞರೊಂದಿಗೆ ಈಗಾಗಲೇ ಚರ್ಚಿಸಲಾಗಿದೆ' ಎಂದು ತಿಳಿಸಿದರು.

'ಬೆಳಿಗ್ಗೆ 5.30ಕ್ಕೆ ಲಾಲ್‌ಬಾಗ್ ಬಾಗಿಲು ತೆರೆಯಲಾಗುತ್ತಿದೆ. ಉದ್ಯಾನವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ನಾಲ್ಕು ಪ್ರವೇಶ ದ್ವಾರಗಳಲ್ಲಿ ಪ್ಲಾಸ್ಟಿಕ್ ಬಾಟಲ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮುರಿದಿರುವ ಬೆಂಚ್‌ಗಳನ್ನು ದುರಸ್ತಿ ಮಾಡಲಾಗುವುದು. ಲಾಲ್‌ಬಾಗ್ ಉದ್ಯಾನದಲ್ಲಿ ಈಗಾಗಲೇ ಒಬ್ಬರು ಶುಶ್ರೂಷಕಿ ಇದ್ದಾರೆ. ಅಲ್ಲಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಅಳವಡಿಸಲಾಗುವುದು' ಎಂದರು

'ಇದು ಜೈವಿಕ ಉದ್ಯಾನವಾಗಿರುವುದರಿಂದ ಇಲ್ಲಿ ಯಾವುದೇ ವಾಣಿಜ್ಯ ವಹಿವಾಟಿಗೆ ಅವಕಾಶವಿಲ್ಲ. ದ್ವಿಪಥ ಇರುವ ಪ್ರವೇಶ ದ್ವಾರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದೆ. ನಾಲ್ಕು ಪ್ರವೇಶ ದ್ವಾರಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಜಾಗದ ಸಮಸ್ಯೆ ಇದೆ' ಎಂದು ಹೇಳಿದರು.

ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಎಂ ಜಗದೀಶ್ ದೂರವಾಣಿ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.




ಮಲಗಿರುವ ಬೆಂಚ್‌ಗಳು: ಮಾಯವಾದ ದಾಸವಾಳ ತೋಟ

ಉದ್ಯಾನದಲ್ಲಿ ನಾಗರಿಕರು ಕೂರಲು ಹಾಕಿರುವ ಬೆಂಚ್‌ಗಳು ಅಲ್ಲಲ್ಲೇ ಮಲಗಿವೆ. ಬಹುತೇಕ ಬೆಂಚ್‌ಗಳು ಮುರಿದು ಬಿದ್ದಿವೆ. ಮುರಿದು ಅದೆಷ್ಟೋ ವರ್ಷಗಳಾಗಿದ್ದು, ಅಲ್ಲಲ್ಲಿ ರಾಶಿಯೂ ಬಿದ್ದಿವೆ. ಅವುಗಳನ್ನು ಸರಿಪಡಿಸಬೇಕು. ಕೆರೆಯ ಸುತ್ತಲೂ ಇನ್ನಷ್ಟು ಬೆಂಚ್‌ಗಳನ್ನು ಹಾಕಬೇಕು ಎಂಬುದು ಜನರ ಮನವಿ. ವಯಸ್ಕರಿಗಾಗಿ ತೆರೆದ ಜಿಮ್ ನಿರ್ಮಿಸಿ ಅಗತ್ಯ ಉಪಕರಣಗಳನ್ನು ಒದಗಿಸಬೇಕು ಎಂದೂ ಕೆಲವರು ಕೇಳಿದ್ದಾರೆ.

ದಾಸವಾಳ ಹೂದೋಟ ಇತ್ತು ಎಂದು ಕೆಲವರು ಹೇಳುತ್ತಾರೆ. ಆದರೆ, ಅದಕ್ಕೆ ಯಾವ ಕುರುಹುಗಳೂ ಇಲ್ಲ. ಈ ವನವನ್ನು ಪುನರ್ ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂಬುದನ್ನು ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಬಹುತೇಕರ ಅಭಿಪ್ರಾಯ. ಪ್ರಥಮ ಚಿಕಿತ್ಸೆ ಕಿಟ್‌ಗಳು ತಕ್ಷಣ ಲಭ್ಯವಾಗುವ ಸ್ಥಿತಿ ಇಲ್ಲ. ಕೆಲವು ಪೆಟ್ಟಿಗೆಗಳಲ್ಲಿ ಗುಬ್ಬಚ್ಚಿಗಳು ಗೂಡು ಕಟ್ಟಿವೆ. ಹಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಹಾವು ಕಡಿದವರನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸಬೇಕಾಗುತ್ತದೆ. ಆಂಬುಲೆನ್ಸ್ ಸೌಲಭ್ಯದ ಜತೆಗೆ ವೈದ್ಯಕೀಯ ನೆರವಿನ ಅಗತ್ಯವಿದೆ ಎಂಬುದು ಪಾದಚಾರಿಗಳ ಮನವಿ.


ನಂಜಪ್ಪ ಸ್ಮಾರಕ ಭವನದ ಪಕ್ಕದಲ್ಲಿರುವ ಹಳೆಯ ವಿದ್ಯುತ್ ಪೆಟ್ಟಿಗೆ ಅಪಾಯಕ್ಕೆ ಆಹ್ವಾನ ನೀಡುತ್ತಿರುವುದು



ಹಿರಿಯರು ನಮ್ಮ ಮಾತನ್ನು ಏಕೆ ಕೇಳುವುದಿಲ್ಲ?

ಡಾ. ಕೆ. ಎಸ್. ಪವಿತ್ರ

‘ಅರೆರೆ ಮಕ್ಕಳು ನಮ್ಮ ಮಾತು ಏಕೆ ಕೇಳಲ್ಲ?’ ಎಂದು ನಾವು ಯೋಚನೆ ಮಾಡುತ್ತೇವೆ ಅಲ್ಲವೇ!

ಸುತ್ತಮುತ್ತಲೂ ಸ್ವಲ್ಪ ನೋಡಿ. ಇಡೀ ಜಗತ್ತಿಗೇ ವಯಸ್ಸು ಹೆಚ್ಚಾಗುತ್ತಾ ಇದೆ. ಮೊದಲು 60 ವರ್ಷವಾದರೆ ‘ಮುದುಕರು, ವೃದ್ಧರು’ ಎಂದುಕೊಳ್ಳುತ್ತಾ ಇದ್ದ ಜನ ಈಗ 80 ವರ್ಷಕ್ಕೂ ತಮಗೆ ವಯಸ್ಸಾಗಿದೆ ಎನ್ನುವುದನ್ನು ಬಡಪೆಟ್ಟಿಗೆ ಒಪ್ಪಿಕೊಳ್ಳದ ಸ್ಥಿತಿ ತಲುಪಿದ್ದಾರೆ. ಸುಧಾರಿತ ಜೀವನದ ಗುಣಮಟ್ಟ, ಆಧುನಿಕ ವೈದ್ಯಕೀಯ ಸೌಲಭ್ಯಗಳು ಆಯುಷ್ಯವನ್ನು ಹೆಚ್ಚಿಸಿರುವಂತೆಯೇ, ನಮ್ಮ ನಡುವೆ ವೃದ್ಧರ ಸಂಖ್ಯೆಯನ್ನೂ ಹೆಚ್ಚಿಸಿದೆ. ವೃದ್ಧರ ಮನೋಭಾವ-ಧೋರಣೆಗಳನ್ನು ಕಾಲಕ್ಕೆ ತಕ್ಕ ಹಾಗೆ ಬದಲಿಸಿದೆ. ಅವರೀಗ ತಮ್ಮನ್ನು ಯಾರೂ ‘ವೃದ್ಧರು’, ‘ಮುದುಕರು’ ಎಂದು ಕರೆಯುವುದನ್ನು ಒಪ್ಪುವುದಿಲ್ಲ! ತಮ್ಮ ಮೊಮ್ಮಕ್ಕಳ ಹತ್ತಿರ ‘ಅಜ್ಜ-ಅಜ್ಜಿ’ ಎಂದು ಕರೆಸಿಕೊಳ್ಳಬಹುದೇ ಹೊರತು, ಇತರರು ತಮ್ಮನ್ನು ‘ಅಜ್ಜ /ಅಜ್ಜಿ ಸ್ವಲ್ಪ ಈ ಕಡೆ ಸರೀತೀರಾ’ ಎಂದರೆ ಮುಖದ ಮೇಲೆ ಇರಿಸು ಮುರಿಸು ಮೂಡಿಸುತ್ತಾರೆ. ಅವರನ್ನು ಗೌರವದಿಂದ ‘ಹಿರಿಯ ನಾಗರಿಕರು’ ಎನ್ನುವುದೇ ಅವರ ಮುಖದ ಮೇಲೆ ತುಸು ಹೆಮ್ಮೆ ಮಿಶ್ರಿತ ಮುಗುಳ್ನಗು ತರಿಸುತ್ತದೆ.

ಇಂತಹ ಹಿರಿಯರು, ಜೀವನಾನುಭವ ಹೊಂದಿರುವವರು ಬೆಳೆದ ಮಕ್ಕಳ (ಈಗ ತಾವೂ ಹಿರಿಯರಾಗಿರುವವರು) ಮಾತು ಕೇಳುವುದಿಲ್ಲ ಎಂಬ ದೂರು ಸಾಮಾನ್ಯ. ಸಮಾಜ ಒಂದೆಡೆ ನಿಂತು ಮಕ್ಕಳಿಗೆ ಬುದ್ಧಿ ಹೇಳುವಾಗ ಮಕ್ಕಳು ನಿಸ್ಸಹಾಯಕರಾಗಿ ನಿಲ್ಲುವುದುಂಟು. ತಮ್ಮ ಚಿಕ್ಕ ಮಕ್ಕಳಂತೆಯೇ ತಮ್ಮ ಅಪ್ಪ-ಅಮ್ಮಂದಿರೂ ಹಠಮಾರಿಗಳು ಎಂದು ಬೈದುಕೊಳ್ಳುವುದೂ ಇದೆ. ಏಕೆ ಹೀಗೆ?? ತಮ್ಮ ಆರೋಗ್ಯದ ಬಗೆಗೆ ಕಾಳಜಿಯಿಂದಲೇ ಮಕ್ಕಳು ಹೇಳಿ, ಕೆಲವು ಕೆಲಸಗಳನ್ನು/ಚಟುವಟಿಕೆಗಳನ್ನು ಮಾಡಬೇಡಿ ಎಂದು ನಿರ್ಬಂಧಿಸಿದಾಗ ಹಿರಿಯರು ಅದನ್ನು ತಮ್ಮ ಕೈ-ಕಾಲು ಕಟ್ಟಿ ಹಾಕಿದಂತೆ ಎಂದು ಭಾವಿಸುವುದು ಏಕೆ?

> ದೇಹಕ್ಕೆ ವಯಸ್ಸಾದಂತೆ, ಮನಸ್ಸಿಗೂ, ಮೆದುಳಿಗೂ ವಯಸ್ಸಾಗುತ್ತದೆ. ಆದರೆ ‘ಹಠ’ಕ್ಕೆ ವಯಸ್ಸಾಗುವುದಿಲ್ಲ!

ದೇಹಕ್ಕೆ ವಯಸ್ಸಾದಂತೆ, ಮನಸ್ಸಿಗೂ, ಮೆದುಳಿಗೂ ವಯಸ್ಸಾಗುತ್ತದೆ. ಆದರೆ ‘ಹಠ’ಕ್ಕೆ ವಯಸ್ಸಾಗುವುದಿಲ್ಲ! ವಯಸ್ಸಿನ ಜೊತೆ ಕುಂದುವ ದೇಹದ ಶಕ್ತಿ ಒಂದು ರೀತಿಯ ‘ಕಳೆದುಕೊಳ್ಳುವ ಭಯ’ವನ್ನು ಮೂಡಿಸುತ್ತದೆ. ಸ್ವಂತ ಉದ್ಯಮಗಳಲ್ಲಿರುವ, ನಿವೃತ್ತಿಯಿಲ್ಲದ ಉದ್ಯೋಗಗಳಲ್ಲಿರುವವರ ಮನಸ್ಸಿನಲ್ಲಿ ತನ್ನ ಅಧಿಕಾರವನ್ನು ಕಸಿದುಕೊಂಡಾರು, ತನ್ನ ಮಹತ್ವ ಕಡಿಮೆಯಾಯಿತು ಎಂಬ ಭಾವವನ್ನು ಸಹಜವಾಗಿ ತರುತ್ತದೆ.

ಇಂತಹ ಸಂದರ್ಭಗಳಲ್ಲಿ ಈ ‘ಕಳೆದುಕೊಳ್ಳುವ ಭಯ’ ಮಕ್ಕಳ ಮಾತು ಕೇಳದಿರುವ ಛಲವನ್ನು ಮತ್ತಷ್ಟು ಹೆಚ್ಚಿಸಬಹುದು. ಒಂದೆಡೆ ಮಕ್ಕಳು ತಮ್ಮನ್ನು ಸರಿಯಾಗಿ ನೋಡುವುದಿಲ್ಲ, ತಮಗೆ ಬೇಕಾದಂತೆ ಇರಲು ಬಿಡುವುದಿಲ್ಲ ಎನ್ನುವ ಅಪ್ಪ-ಅಮ್ಮ; ಇನ್ನೊಂದೆಡೆ ‘ವಯಸ್ಸಾಗಿದೆ, ಆರಾಮಾಗಿ ಇರುವಂತೆ ಎಲ್ಲ ಸೌಲಭ್ಯ ಮಾಡಿಕೊಟ್ಟರೂ ಇವರು ನಾವು ಹೇಳಿದಂತಿರುವುದಿಲ್ಲ. ನಮ್ಮ ಮಾತು ಕೇಳದೆ ಅಲ್ಲಿ ಇಲ್ಲಿ ತಿರುಗುತ್ತಾರೆ. ಯಾವುದಾದರೊಂದು ಆರೋಗ್ಯದ ತೊಂದರೆ ಬಂದಾಕ್ಷಣ ‘ನಾವು ನಿಮಗೆ ಭಾರ’ ಎಂದು ಅಲವತ್ತುಕೊಳ್ಳುತ್ತಾರೆ’ – ಎನ್ನುವ ಮಕ್ಕಳು; ಇದು ಇಂದಿನ ದಿನಗಳಲ್ಲಿ ಆಗಾಗ್ಗೆ ಕಂಡುಬರುವ ಇಬ್ಬಗೆಯ ಸಂದರ್ಭ. ಯಾರು ಸರಿ? ಯಾರು ತಪ್ಪು? ಯಾರು ಯಾರ ಮಾತು ಕೇಳಬೇಕು?!

ಮನೋವೈದ್ಯೆಯಾಗಿ ದಿನನಿತ್ಯ ಇಂಥ ಹಿರಿಯ ನಾಗರಿಕರು, ಅವರ ಮಕ್ಕಳನ್ನು ನೋಡುವಾಗ ಇಬ್ಬರದೂ ‘ಸರಿಯೇ’, ‘ಅವರವರ ವಯಸ್ಸಿಗೆ ಅವರವರದು ಸರಿಯಾದ ಮನೋಭಾವವೇ’ ಅನ್ನಿಸುತ್ತದೆ. ಮಕ್ಕಳು ತಮ್ಮ ಕೆಲಸ ಬಿಟ್ಟು, ಮಕ್ಕಳ ವಿದ್ಯಾಭ್ಯಾಸ ಬದಿಗಿರಿಸಿ ಹಳ್ಳಿಗೆ ಬಂದು ಅಪ್ಪ-ಅಮ್ಮಂದಿರಿಗಾಗಿ ನೆಲೆಸುವುದು ಎಷ್ಟೋ ಕುಟುಂಬಗಳಲ್ಲಿ ಸಾಧ್ಯವಿರುವುದಿಲ್ಲ. ಹಾಗಾದರೆ ಅಪ್ಪ-ಅಮ್ಮಂದಿರಿಗೆ ‘ನೀವೇ ಬನ್ನಿ, ನಮ್ಮೊಂದಿಗಿರಿ, ಇಲ್ಲಿ ಏನಾದರೂ ವ್ಯವಸ್ಥೆ ನಾನು ಮಾಡುತ್ತೇನೆ’ ಎಂದು ಮಗ /ಮಗಳು ಹೇಳಿದರೆ ಅವರು ತಮ್ಮ ‘ಬಹುದಿನ ಬಾಳಿದ ಮನೆ’ ಬಿಡುವುದಕ್ಕೆ ಅಪ್ಪ-ಅಮ್ಮ ಸಿದ್ಧರಿಲ್ಲ. ಇಂತಹ ಹಠದಲ್ಲಿ ಪುರುಷರದ್ದು ಮತ್ತಷ್ಟು ಮೇಲುಗೈ! ಅದರೊಂದಿಗೆ ಅವರು ಮತ್ತೆ ಮತ್ತೆ ‘ಅಚ್ಚರಿ’ಯ ಸಂಗತಿಯೊಂದರ ಬಗ್ಗೆ ಪ್ರಶ್ನಿಸುತ್ತಾರೆ: ‘ನನಗೆ ಇಷ್ಟು ವರ್ಷ ಈ ಸುಸ್ತು ಇರಲಿಲ್ಲ ಡಾಕ್ಟ್ರೇ. ಒಂದು ದಿವಸ ಆಸ್ಪತ್ರೆ ಮೆಟ್ಟಿಲು ಹತ್ತಿದವನಲ್ಲ, ಇಡೀ ತೋಟ ನಾಲ್ಕು ಸಲ ಹೋಗಿ ಬರುತ್ತಿದ್ದೆ. ಈಗ ಯಾಕೋ ಸುಸ್ತು’. ಅವರ ನಿರೀಕ್ಷೆ ‘ಸುಸ್ತಿಗೆ ಒಂದು ಮಾತ್ರೆ ಕೊಡಬೇಕು, ಅದರಿಂದ ಹಿಂದಿದ್ದಂತೆ ಮತ್ತೆ ಮೊದಲಿನ ಸ್ಥಿತಿಗೆ ಅವರಾಗಿ, ಇಡೀ ತೋಟ, ಬೀಸುಗಾಲಿನಿಂದ ನಾಲ್ಕು ಸಲ ಹೋಗಿ ಬರಬೇಕು’! ಆದರೆ ಈಗ ಅವರಿಗಿರುವುದು ಕಾಯಿಲೆಯಲ್ಲ, ‘ಇಳಿವಯಸ್ಸು’ ಎಂಬ ಸಹಜ ಹಂತ ಎನ್ನುವುದನ್ನು ಒಪ್ಪಿಕೊಳ್ಳುವುದು ಅವರಿಗೆ ಸುಲಭಸಾಧ್ಯವಲ್ಲ. ಅವರ ಮಕ್ಕಳಿಗೆ ಈ ಸತ್ಯ ಗೊತ್ತು. ಆದರೆ ಅವರಿಗೆ ಅದನ್ನು ಹಿರಿಯರಿಗೆ ಅರ್ಥ ಮಾಡಿಸುವ ಬಗೆ ಹೇಗೆಂಬುದು ತಿಳಿಯದು. ಪರಿಣಾಮ ಹಿರಿಯರು-ಮಕ್ಕಳ ಮಧ್ಯೆ ಹಲವು ಘರ್ಷಣೆಗಳು. ❖

ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ?

ಹಿರಿಯರು ಗಮನಿಸಬೇಕಾದ ಸಂಗತಿಗಳು

- ನೀವು ಪ್ರಬುದ್ಧರು; ಜೀವನಾನುಭವ ಉಳ್ಳವರು. ನೀವು ಯೌವನದಲ್ಲಿದ್ದಾಗ ಹಿರಿಯ ವಯಸ್ಸಿನವರ ನಡವಳಿಕೆಗಳು ತಂದ ಸಮಸ್ಯೆ/ಅವರು ಧನಾತ್ಮಕವಾಗಿ ನಡೆದ ಮಾದರಿಗಳನ್ನು ಒಮ್ಮೆ ನೆನೆಸಿಕೊಳ್ಳಿ.
- ಸಮಾಜದ ಇತರರು ನಿಮಗೆ ಗೌರವ ಕೊಡಬಹುದು; ಆದರೆ ನಿಮ್ಮ ಜವಾಬ್ದಾರಿ ಹೊರಲು ಸಾಧ್ಯವಿಲ್ಲ. ಮಕ್ಕಳ ಶ್ರಮ-ಕಾಳಜಿಗಳನ್ನು ಗೌರವಿಸಿ, ಒಳ್ಳೆಯ ಮಾತು ಹೇಳಿ.
- ‘ಮಕ್ಕಳಿಗೆ ನೀವು ಹೊರೆ’ ಎಂಬ ಮಾತು ಬೇಡವೇ ಬೇಡ. ಮತ್ತೆ ಮತ್ತೆ ಹಾಗೆ ಹೇಳುವುದು ಮಕ್ಕಳಿಗೂ ಬೇಸರವನ್ನೇ ತರಿಸಬಹುದು. ನಿಮ್ಮ ಆರೋಗ್ಯವನ್ನು ನೀವು ಕಾಪಾಡಿಕೊಳ್ಳಲು ನೀವೇ ಕೆಲವು ನಿರ್ಬಂಧಗಳನ್ನು ಹಾಕಿಕೊಳ್ಳುವುದು ಸೂಕ್ತ. ಸಾಮಾಜಿಕ-ಕೌಟುಂಬಿಕವಾಗಿ ಒಂದು ಮಿತಿಯಲ್ಲಿ ಚಟುವಟಿಕೆಯಿಂದಿರಿ.

ಹಿರಿಯರ ಮಕ್ಕಳು ಗಮನಿಸಬೇಕಾದ ಸಂಗತಿಗಳು

- ಅಪ್ಪ-ಅಮ್ಮಂದಿರನ್ನು ನೋಡಿಕೊಳ್ಳುವುದು ಕರ್ತವ್ಯ. ಧನ್ಯತೆಯನ್ನೂ ಅದು ತರಬಲ್ಲದು. ನಿಮ್ಮ ಮಕ್ಕಳಿಗೆ ಅದೊಂದು ಮಾದರಿ ಎನ್ನುವುದನ್ನು ಮರೆಯಬೇಡಿ.
- ಸಮಾಜ ‘ನೀವು ಹೀಗೆ ಮಾಡಬೇಕಿತ್ತು, ಈ ರೀತಿ ನೋಡಬೇಕಿತ್ತು’ ಎಂದ ತಕ್ಷಣ ಪ್ರತಿಕ್ರಿಯಿಸಬೇಡಿ. ನೀವು ಪ್ರಾಮಾಣಿಕವಾಗಿ ನಿಮ್ಮ ಕೆಲಸ ನಿರ್ವಹಿಸಿದ್ದರೆ, ಸುಮ್ಮನಿದ್ದುಬಿಡಿ. ಗೊಂದಲವಿದ್ದರೆ ವೃತ್ತಿಪರ ಸಲಹೆ ಪಡೆದುಕೊಳ್ಳಿ.

ಇನ್ನು ಸಮಾಜದ ನಾವು-ನೀವು!

- ಸಾರ್ವಜನಿಕವಾಗಿ ಹಿರಿಯರಿಗೆ ನೀವು ಸಹಾಯ ಮಾಡುವ ಪರಿಸ್ಥಿತಿ ಬಂದಾಕ್ಷಣ, ಅವರ ಮಕ್ಕಳು ಅವರನ್ನು ಸರಿಯಾಗಿ ನೋಡುತ್ತಿಲ್ಲ ಎಂಬ ಪೂರ್ವಗ್ರಹ ಬೇಡ.
- ಹಿರಿಯರನ್ನು ಅವರ ಮಕ್ಕಳನ್ನು ಕೇಳದೆ/ಒಪ್ಪಿಗೆ ಪಡೆಯದೆ ಸಾರ್ವಜನಿಕ ಸಂಘ-ಸಂಸ್ಥೆಗಳ ಕೆಲಸಕ್ಕೆ ಪ್ರೋತ್ಸಾಹಿಸಬೇಡಿ/ತೊಡಗಿಸಬೇಡಿ.
- ಪುಕ್ಕಟೆ ಸಲಹೆಗಳನ್ನು ನೀಡಿ, ಆ ಕ್ಷಣದ ವೀರರಾಗುವುದರಿಂದ ದೂರವಿರಿ.

ಹಿರಿಯರ ಬದುಕನ್ನು ಹಸನು ಮಾಡುವತ್ತ, ‘ಇಳಿ ವಯಸ್ಸಿನಲ್ಲಿ ತಿಳಿ ಮನಸ್ಸು’ ಅವರದಾಗುವಂತೆ ಮಾಡುವತ್ತ ಎಲ್ಲರೂ ಈ ಸಲಹೆಗಳನ್ನು ಪಾಲಿಸೋಣ.



ಕ್ಷಮಿಸುವುದು ನಮ್ಮ ನೆಮ್ಮದಿಗಾಗಿ

> ಯಾರೋ ನಮಗೆ ಕಸ ತುಂಬಿದ ಚೀಲವನ್ನು ಕೊಟ್ಟರೆ ನಾವೇನು ಮಾಡುತ್ತೇವೆ? ಸುಮ್ಮನೆ ಬಿಸಾಕಿ ಮುಂದೆಹೋಗುವುದಿಲ್ಲವೇ? ಹಾಗಿದ್ದ ಮೇಲೆ ಬೇರೆಯವರು ಕೊಟ್ಟ ನೋವನ್ನು ಯಾಕೆ ಹೊತ್ತುಕೊಂಡಿರಬೇಕು?

ರಮ್ಯಾ ಶ್ರೀಹರಿ

ನಮ್ಮ ತಪ್ಪಿದ್ದಾಗ ಅದನ್ನು ಅರಿತುಕೊಂಡು ‘ಕ್ಷಮಿಸು’ ಎಂದು ಕೇಳುವುದಕ್ಕಿಂತಲೂ ಕಠಿಣ ನಾವು ಬೇರೆಯವರನ್ನು ಕ್ಷಮಿಸುವುದು. ಯಾರೋ ಎಂದೋ ಆಡಿದ ಮಾತು, ನೋಡಿದ, ನಡೆಸಿಕೊಂಡ ರೀತಿಯನ್ನು ಮತ್ತೆ ಮತ್ತೆ ನೆನಪಿಸಿಕೊಂಡು ಕೋಪಿಸಿಕೊಳ್ಳುವಾಗ ಅಥವಾ ದುಃಖಿಸುವಾಗ ನಮಗೆ ನಾವೇ ನೋವು ಕೊಟ್ಟುಕೊಳ್ಳುತ್ತೇವೆ. ಇದರಿಂದ ನಮ್ಮ ನೆಮ್ಮದಿ, ಆರೋಗ್ಯ, ನಿದ್ದೆ, ಸಮಯ, ಸಂಬಂಧಗಳು ಎಲ್ಲವೂ ಹಾಳಾಗುತ್ತದೆ. ಹಾಗಾಗಿ ಕ್ಷಮಿಸುವುದು ನಮ್ಮನ್ನು ನಾವೇ ಪ್ರೀತಿಸಿಕೊಳ್ಳುವುದರ, ಗೌರವಿಸಿಕೊಳ್ಳುವುದರ ಪ್ರತೀಕ.

ಕಾನೂನಿನ ಚೌಕಟ್ಟಿನಲ್ಲಿ ತಪ್ಪು-ಸರಿಗಳನ್ನು ನಿರ್ಧರಿಸುವ ರೀತಿಯೇ ಬೇರೆ, ಸಂಬಂಧಗಳಲ್ಲಿನ ವ್ಯಕ್ತಿನಿಷ್ಠ ತಪ್ಪು-ಸರಿಗಳನ್ನು ನಿರ್ಧರಿಸುವ ರೀತಿಯೇ ಬೇರೆ. ಸಂಬಂಧಗಳ ನೆಲೆಯಲ್ಲಿ ಘಟನೆಗಿಂತ ಹೆಚ್ಚಾಗಿ ನಾವು ಆ ಘಟನೆಯ ಜೊತೆ ಹೇಗೆ ಗುರುತಿಸಿಕೊಳ್ಳುತ್ತೇವೆ ಎನ್ನುವುದು ಮುಖ್ಯವಾಗುತ್ತದೆ.

ಕ್ಷಮಿಸುವವರು ಮೇಲು, ಕ್ಷಮೆ ಕೇಳುವವರು ಕೀಳು; ಕ್ಷಮಿಸುವವರು ಕ್ಷಮಿಸುವುದರ ಮೂಲಕ (ಅವರ ಪ್ರಕಾರ) ತಪ್ಪು ಮಾಡಿದವರಿಗೆ ಯಾವುದೋ ಔದಾರ್ಯ ತೋರುತ್ತಾ ಮೇಲ್ಮಟ್ಟದಲ್ಲಿದ್ದಾರೆ ಎಂದೇನಲ್ಲ. ನಾವು ಯಾರನ್ನಾದರೂ ಕ್ಷಮಿಸುವುದು ನಮ್ಮ ನೆಮ್ಮದಿಗಾಗಿ ಹೊರತು ಅವರ ಉದ್ಧಾರಕ್ಕಾಗಿ ಅಲ್ಲ.

ಸಣ್ಣಪುಟ್ಟ ಮೋಸ, ವಂಚನೆ, ಕೆಟ್ಟ ಮಾತುಗಳನ್ನು ಹೇಗಾದರೂ ಕ್ಷಮಿಸಬಹುದು. ಆದರೆ ಯಾವುದು ನಮ್ಮ ಮನಸ್ಸಿಗೆ ಆಳವಾದ ಗಾಯ ಮಾಡುವ ಮೂಲಕ ನಮ್ಮ ಬದುಕಿನಲ್ಲಿ ಈಗಲೂ ನೋವು ಕೊಡುತ್ತಿದೆಯೋ ಅದಕ್ಕೆ ಕಾರಣರಾದವರನ್ನು ಕ್ಷಮಿಸುವುದು ಹೇಗೆ? ಉದಾಹರಣೆಗೆ ಬಾಲ್ಯದಲ್ಲಿ ನಡೆದ ದೈಹಿಕ, ಮಾನಸಿಕ ದೌರ್ಜನ್ಯಗಳಿಗೆ ಕಾರಣರಾದವರನ್ನು ಕ್ಷಮಿಸುವುದೆಂದರೆ ಸಾಮಾನ್ಯ ವಿಷಯವಲ್ಲ; ಅದು ಒಂದಿಡೀ ಜೀವಮಾನದ ಪಯಣ. ಬಾಲ್ಯದಲ್ಲಿ ಶಿಕ್ಷಣದಿಂದ, ಬೆಳೆಯುವ ಅವಕಾಶಗಳಿಂದ ವಂಚಿತರಾದವರು, ಚಿಕ್ಕ ವಯಸ್ಸಿನಲ್ಲೇ ಜವಾಬ್ದಾರಿಗಳನ್ನು ಹೊತ್ತವರು, ಅತಿ ಶಿಸ್ತಿನ, ಒರಟುತನದ ಮನೆಗಳಲ್ಲಿ ಬೆಳೆದವರು, ಜೀವನದ ಸಂಭ್ರಮದ ಕ್ಷಣಗಳನ್ನು ಯಾರ ಅಡೆತಡೆಯಿಲ್ಲದೆ ಅನುಭವಿಸಲಾರದವರು, ಅದಕ್ಕೆ ಯಾರು ಕಾರಣರು ಎಂದೆಣಿಸುತ್ತಾರೋ ಅವರ ಮೇಲೆ ಹಾಗೂ ಕೊನೆಗೆ ತಮ್ಮ ಮೇಲೆಯೇ ಕೋಪಗೊಂಡು ವರ್ತಮಾನದ ಬದುಕನ್ನೂ ಆಸ್ವಾದಿಸದೆ ಕೊರಗುವುದನ್ನು ನಮ್ಮ ಸುತ್ತಲೂ ಅನೇಕ ಜನರಲ್ಲಿ ಕಾಣುತ್ತೇವೆ.

ಕ್ಷಮಿಸುವುದು ಉದಾತ್ತ ಚಿಂತನೆಯ, ಶ್ರೇಷ್ಠ ಬದುಕಿನ ಸಂಕೇತವೇ ಹೌದಾದರೂ ನಮಗೆ ದುಃಖವನ್ನುಂಟುಮಾಡಿದವರನ್ನು ಆ ಕ್ಷಣದಲ್ಲಿಯೇ ಕ್ಷಮಿಸಿಬಿಡುವುದು ವಾಸ್ತವಕ್ಕೆ ದೂರವಾದುದು. ಹಲವು ಬಾರಿ ನಾವೆಷ್ಟೇ ‘ಕ್ಷಮಿಸಿಬಿಡಬೇಕು’ ಎಂದುಕೊಂಡರೂ ಕ್ಷಮಿಸುವುದಕ್ಕೆ ಮನಸ್ಸು ಒಪ್ಪುವುದೇ ಇಲ್ಲ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಎಲ್ಲಿಯವರೆಗೆ ನಾವು ನಮಗಾದ ನೋವು, ಸಂಕಟ, ಅನ್ಯಾಯವನ್ನು ಒಪ್ಪಿಕೊಂಡು ನಮ್ಮನ್ನು ನಾವೇ ಸಂತೈಸಿಕೊಳ್ಳುವಷ್ಟು ಪ್ರಬುದ್ಧತೆ ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಬೇರೆಯವರನ್ನು ಕ್ಷಮಿಸುವುದಕ್ಕಾಗುವುದಿಲ್ಲ. ಕ್ಷಮೆ ಎನ್ನುವುದು ಒಂದು ದೀರ್ಘ ಪ್ರಕ್ರಿಯೆ; ಅದಕ್ಕೆ ಸಾಕಷ್ಟು ಸಮಯಬೇಕು.

ನಮ್ಮ ಒಳಿತಿಗೆ, ಕೆಡುಕಿಗೆ ಯಾರೋ ನೇರ ಕಾರಣ ಎನ್ನುವುದು ನಮ್ಮ ಸೀಮಿತ ಗ್ರಹಿಕೆ. ಎಲ್ಲ ಘಟನೆಗಳನ್ನು ಸಂಕುಚಿತ ಕಾರ್ಯ-ಕಾರಣ ಸಂಬಂಧದ ದೃಷ್ಟಿಯಿಂದ ನೋಡದೆ ಪ್ರಪಂಚದ ಆಗುಹೋಗುಗಳು, ಪ್ರಕೃತಿಯಲ್ಲಿನ ವಿದ್ಯಮಾನಗಳು, ಮನುಷ್ಯ ಸಂಬಂಧಗಳ ಮೂಲಸ್ವಭಾವ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವುದನ್ನು ಅರ್ಥಮಾಡಿಕೊಂಡಾಗ ಜೀವನದ ವಿಶಾಲ ಭಿತ್ತಿಯ ಮೇಲೆ ವೈಯಕ್ತಿಕ ಲಾಭ ನಷ್ಟಗಳನ್ನು ಬೇರೆಯದೇ ದೃಷ್ಟಿಕೋನದಿಂದ ನೋಡಬಹುದು. ಅನ್ಯರು ನಮಗೇನೋ ಕೆಡುಕು ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ, ನಾವು ಕೇವಲ ಅವರು ಕೊಟ್ಟಿದ್ದನ್ನು ಅನ್ಯೋಪಾಯವಿಲ್ಲದೆ ಅನುಭವಿಸುತ್ತಿದ್ದೇವೆ – ಎನ್ನುವ ನಿಷ್ಕ್ರಿಯ ಮನಃಸ್ಥಿತಿಯನ್ನು ವಿಮರ್ಶೆಗೊಳಪಡಿಸಬೇಕು. ಯಾರೋ ನಮಗೆ ಕಸ ತುಂಬಿದ ಚೀಲವನ್ನು ಕೊಟ್ಟರೆ ನಾವೇನು ಮಾಡುತ್ತೇವೆ? ಸುಮ್ಮನೆ ಬಿಸಾಕಿ ಮುಂದೆಹೋಗುವುದಿಲ್ಲವೇ? ಹಾಗಿದ್ದ ಮೇಲೆ ಬೇರೆಯವರು ಕೊಟ್ಟ ನೋವನ್ನು ಯಾಕೆ ಹೊತ್ತುಕೊಂಡಿರಬೇಕು?

ಕ್ಷಮಿಸುವ ದಾರಿಯಲ್ಲಿ ಎರಡು ತೀಕ್ಷ್ಣ ಭಾವಗಳು ನಮಗೆ ಎದುರಾಗುತ್ತವೆ. ಒಂದು ಸೇಡು; ಮತ್ತೊಂದು ಕೋಪ. ನಮಗೆ ಅನ್ಯಾಯ ಮಾಡಿದ್ದಾರೆ ಎಂದು ಯಾರ ಮೇಲೆ ನಮಗೆ ಕೋಪವಿರುತ್ತದೆಯೋ ಅವರ ಮೇಲೆ ಸೇಡು ತೀರಿಸಿಕೊಳ್ಳುವ ಮನೋಭಾವವೂ ಇರುತ್ತದೆ; ‘ನಾನು ಅನುಭವಿಸಿದ ನೋವನ್ನು ಅವರೂ ಅನುಭವಿಸಲಿ’ ಎಂಬ ಉದ್ದೇಶದಿಂದ. ಆದರೆ ಹಾಗೆ ಸೇಡು ತೀರಿಸಿಕೊಳ್ಳುವ ಮನೋಭಾವ ಏನನ್ನು ತೋರಿಸುತ್ತದೆ? ನಮಗೆ ಕಷ್ಟ ಕೊಟ್ಟವರು ಇನ್ನೂ ನಮ್ಮ ಮನಸ್ಸಿನಲ್ಲಿದ್ದಾರೆ, ನಮ್ಮ ಜೀವನವನ್ನು ಈಗಲೂ ಪ್ರಭಾವಿಸುತ್ತಿದ್ದಾರೆ, ನಾವಿನ್ನೂ ಅವರ ಹಿಡಿತದಲ್ಲೇ ಇದ್ದೇವೆ – ಎಂದಂತಾಗುವುದಿಲ್ಲವೇ?


ಕೋಪ ಎನ್ನುವುದು ಒಂದು ಪ್ರಬಲ ಸೂಚನೆ. ಎಲ್ಲಿ ನಮಗೆ ಅನ್ಯಾಯವಾಗಿದೆಯೋ, ಸಹಜವಾಗಿ ಸಿಗಬೇಕಾದ್ದು ಸಿಗಲಿಲ್ಲವೋ, ನಮ್ಮನ್ನು ನಾವಾಗಿರಲು ಬಿಡದ ನಿರ್ಬಂಧಗಳ ಒತ್ತಡ ಹೆಚ್ಚಾಗಿದೆಯೋ ಅಲ್ಲಿ ಅತಿಯಾದ ಕೋಪವಿರುತ್ತದೆ. ‘ನಾನೇನೋ ಕಳೆದುಕೊಂಡಿದ್ದೇನೆ’ ಎಂಬ ಕೊರಗಿರುತ್ತದೆ. ಮೊದಲಿಗೆ ನಮ್ಮ ಕೋಪ ನ್ಯಾಯಬದ್ಧವಾದದ್ದೇ ಎಂದೆಣಿಸಿ ಅದಕ್ಕೆ ಅವಕಾಶವನ್ನು ಕೊಡಬೇಕು. ಕೋಪದ ಬಗ್ಗೆಯೇ ಅಸಹನೆ ಸಲ್ಲದು. ನಮ್ಮ ಕೋಪ ಏನು ಹೇಳುತ್ತಿದೆ, ಯಾವುದರ ಕಡೆಗೆ ನಮ್ಮ ಗಮನ ಸೆಳೆಯುತ್ತಿದೆ ಎನ್ನುವುದನ್ನು ತಿಳಿಯಬೇಕು. ‘ನಾನು ಏನನ್ನು ಕಳೆದುಕೊಂಡಿರುವುದಕ್ಕಾಗಿ ಕೋಪದಲ್ಲಿದ್ದೇನೆ’ ಎನ್ನುವುದನ್ನು ಪದಗಳ ಮೂಲಕ ಅಭಿವ್ಯಕ್ತಿಸಬೇಕು. ನಾವು ಕಳೆದುಕೊಂಡಿದ್ದರ ಬಗ್ಗೆ ಆಗುವ ದುಃಖಕ್ಕೂ ಅವಕಾಶ ಕೊಡಬೇಕು. ಪ್ರಪಂಚ ನಮಗೆ ಏನು ಕೊಡಬೇಕೆಂದು ಬಯಸುತ್ತೇವೋ, ಏನು ಪ್ರಪಂಚದಿಂದ ಸಿಗಲಿಲ್ಲವೆಂದು ಕೊರಗುತ್ತೇವೋ ಅದನ್ನು ನಮಗೆ ನಾವೇ ಕೊಟ್ಟುಕೊಳ್ಳುವಷ್ಟು ಭಾವನಾತ್ಮಕ ಸ್ವಾವಲಂಬನೆಯನ್ನು ಬೆಳೆಸಿಕೊಂಡಾಗ ಮಾತ್ರ ಕ್ಷಮಿಸುವುದು ಸುಲಭವಾಗುತ್ತದೆ

ನಾವೇನನ್ನೋ ಕಳೆದುಕೊಂಡಿದ್ದೇವೆ; ಅದು ಏನು – ಎಂದು ಪ್ರಶ್ನೆ ಹಾಕಿಕೊಂಡಾಗ ನಾವು ಕಳೆದುಕೊಂಡಿರುವುದು ನಮ್ಮ ಹೃದಯದಲ್ಲಿ ಭದ್ರವಾಗಿ ಕುಳಿತುಕೊಂಡು ನಮ್ಮ ಜೀವನವನ್ನೆಲ್ಲಾ ವ್ಯಾಪಿಸಿಕೊಂಡಿರುವುದನ್ನು ಕಾಣುತ್ತೇವೆ. ನಾವು ಏನನ್ನೋ ಕಳೆದುಕೊಂಡಿದ್ದರಿಂದಲೇ ಅದರ ಮೌಲ್ಯವನ್ನು ಅರಿತಿರುತ್ತೇವೆ. ಅದನ್ನು ಹುಡುಕುವ ನೆಪದಲ್ಲಿ ಜೀವನಕ್ಕೆ ಹೊಸ ದಿಕ್ಕು ದೊರೆತಿರುತ್ತದೆ. ನಿಜವಾಗಿ ನೋಡಿದರೆ, ಯಾರೂ ನಮ್ಮಿಂದ ಏನನ್ನೂ ಕಸಿದುಕೊಳ್ಳಲಾಗುವುದಿಲ್ಲ. ’ನಾವು ಕಳೆದುಕೊಂಡಿದ್ದು ಕಳೆದೇ ಹೋಯ್ತು ಅಂತಾಗಬೇಕಿಲ್ಲ; ಅದು ಅನೇಕ ರೂಪಾಂತರಗಳನ್ನು ಹೊಂದಿ ಅನೇಕ ಹೆಸರುಗಳೊಂದಿಗೆ ಸದಾ ನಮ್ಮ ಹಿಂದೆ ಮುಂದೆ ಸುಳಿಯುತ್ತಲೇ ಇರುತ್ತದೆ’ ಎಂಬ ನಂಬಿಕೆ ಗಟ್ಟಿಯಾಗಬೇಕಷ್ಟೇ. ನಿಜವಾದ ಪ್ರತೀಕಾರ ಎಂದರೆ ಪ್ರತೀಕಾರ ತೆಗೆದುಕೊಳ್ಳಬೇಕೆಂಬ ಬಯಕೆಯೇ ಉಂಟಾಗದಷ್ಟು ಬೆಳೆಯುವುದು; ಆತ್ಮವಿಕಾಸ ಹೊಂದುವುದು. ಆಗ ಕ್ಷಮಿಸುವುದೂ ಸಹಜವಾಗಿಬಿಡುತ್ತದೆ. ❖



ಮಧುಮೇಹ: ಇರಲಿ ಎಚ್ಚರ

ಡಾ. ವಿ. ಲಕ್ಷ್ಮೀನಾರಾಯಣ್



ಪ್ರತಿ ವರ್ಷ ನವೆಂಬರ್ 14ರಂದು ವಿಶ್ವ ಮಧುಮೇಹ ದಿನವನ್ನಾಗಿ ವಿಶ್ವಾದ್ಯಂತ ಆಚರಿಸುತ್ತೇವೆ. ಈ ದಿನವನ್ನು ಹೀಗೆ ಆಚರಿಸಲು ಒಂದು ಕಾರಣವೂ ಇದೆ. ಇನ್ಸುಲಿನ್ ಅನ್ನು ಕಂಡುಹಿಡಿದ ಪ್ರಾತಃಸ್ಮರಣೀಯ ಡಾ. ಫ್ರೆಡರಿಕ್ ಬ್ಯಾಂಟಿಂಗ್ ಅವರ ಜನ್ಮದಿನ ನವೆಂಬರ್ 14.

ಜನವರಿ 11, 1922 – ಇನ್ಸುಲಿನನ್ನು ಅನ್ವೇಷಿಸಿದ ಮಹಾದಿನ. ಆ ಮಹಾದಿನದಂದು ಟೋರಾಂಟೋದಲ್ಲಿ ಸಾವಿನ ದವಡೆಯಲ್ಲಿ ನರಳುತ್ತಿದ್ದ 14 ವರ್ಷ ವಯಸ್ಸಿನ ಲಿಯೋನಾರ್ಡ್ ಥಾಮ್‌ಸನ್ ಎಂಬ ಹದಿಹರೆಯದ ಹುಡುಗನಿಗೆ ಚುಚ್ಚುಮದ್ದಿನ ಮುಖಾಂತರ ಇನ್ಸುಲಿನ್ ಪ್ರಯೋಗ ಮಾಡಿದರು. ಇನ್ಸುಲಿನ್ ಚುಚ್ಚುಮದ್ದಿನಿಂದ ಥಾಮ್ಸನ್ ಮುಂದೆ 13 ವರ್ಷ ಬದುಕಿದ್ದ. ಆದರೆ ಮಧುಮೇಹದಿಂದ ಆಗುವ ತೊಡಕುಗಳ ಪರಿಣಾಮದಿಂದ ತನ್ನ 27ನೇ ವಯಸ್ಸಿನಲ್ಲಿ ಮೃತನಾದ. ಅಂದಿನಿಂದ ಇನ್ಸುಲಿನನ್ನು ‘ಜೀವರಕ್ಷಕ ಔಷಧಿ’ ಎಂದು ವಿಶ್ವದಾದ್ಯಂತ ಪರಿಗಣಿಸಲಾಯಿತು. ಈ ಮಹತ್ತರವಾದ ಸಂಶೋಧನೆಯ ವಾರ್ತೆ 1923ರ ಆಗಸ್ಟ್ 27ರಂದು ಜಗತ್ತಿನಾದ್ಯಂತ ಪ್ರಸಾರವಾಯಿತು. ಫ್ರೆಡರಿಕ್ ಬ್ಯಾಂಟಿಂಗ್‌ಗೆ ನೊಬೆಲ್ ಪ್ರಶಸ್ತಿಯನ್ನು ಅದೇ ವರ್ಷ ಪ್ರದಾನ ಮಾಡಲಾಯಿತು. ಬ್ಯಾಂಟಿಂಗ್ ಮಧುಮೇಹಕ್ಕೆ ಚಿಕಿತ್ಸೆಯನ್ನು ಕಂಡುಹಿಡಿಯಲು ತನ್ನ ವಿದ್ಯಾರ್ಥಿ ಚಾರ್ಲ್ಸ್ ಬೆಸ್ಟ್ ಎಂಬುವವರ ಸಹಾಯ ತೆಗೆದುಕೊಂಡರು. ಜೊತೆಗೆ ಜಾನ್ ಮೆಕ್ಲಾಯ್ಡ್ ಮೇಲ್ವಿಚಾರಣೆಯಲ್ಲಿ ಕೆನಡಾದ ಆಸ್ಪತ್ರೆಯಲ್ಲಿ ಸಂಶೋಧನೆಗಳನ್ನು ನಡೆಸಿದರು.

ಮಧುಮೇಹಿಗಳಲ್ಲಿ ಶೇ 30ರಷ್ಟು ಜನರಿಗೆ ಇನ್ಸುಲಿನ್ ಒಂದಲ್ಲಾ ಒಂದು ಸಮಯದಲ್ಲಿ ಬೇಕಾಗುತ್ತದೆ.

ಭಾರತ ದೇಶ ಮಧುಮೇಹಿಗಳ ರಾಜಧಾನಿ ಎಂಬ ಕುಖ್ಯಾತಿಯನ್ನು ಪಡೆದಿದೆ. ಮಾನವನು ಇಂದು ಕೃತಕ ಆಹಾರ ಪದಾರ್ಥಗಳನ್ನು ತಿನ್ನುತ್ತಿದ್ದಾನೆ. ಯಾವುದೇ ಪ್ರಾಣಿ ಅಥವಾ ಮನುಷ್ಯನಾಗಲಿ ಪ್ರಕೃತಿ ಜನ್ಯವಾದ ಆಹಾರಗಳನ್ನೇ ತಿಂದು, ವ್ಯಾಯಾಮದಿಂದ ಬೆವರು ಸುರಿಸಿ, ಆಹಾರವನ್ನು ಅರಗಿಸಿಕೊಂಡರೆ ರೋಗಗಳ ಹಾವಳಿ ತಾನಾಗಿ ಕಡಿಮೆಯಾಗುತ್ತದೆ. ಆದರೆ ಈಗ ಸಕ್ಕರೆ ಮುಂತಾದ ಕೃತಕ ಆಹಾರಾಂಶಗಳನ್ನು ಬಳಸುವುದು ಹೆಚ್ಚಾಗಿದೆ. ಹಿಂದೆ ಆಹಾರಪದಾರ್ಥಗಳ ಅನ್ವೇಷಣೆಗಾಗಿ ಪ್ರಾಣಿಗಳಂತೆ ಮನುಷ್ಯರೂ ಓಡಾಡುತ್ತಿದ್ದರು. ನಾಗರಿಕತೆ ಬೆಳೆದ ಮೇಲೆ ಕೃತಕವಾಗಿ ಸಿದ್ಧವಾದ ಆಹಾರ ಸುಲಭವಾಗಿ ದೊರಕುತ್ತಿರುವುದರಿಂದ ಶರೀರಕ್ಕೆ ಶ್ರಮವಿಲ್ಲದೆ ಊಟ ಮಾಡುವ ಸ್ಥಿತಿಗೆ ಮನುಷ್ಯರು ತಲುಪಿದ್ದಾರೆ. ಈ ಶ್ರಮರಹಿತ ಜೀವನಶೈಲಿಯ ಕೆಟ್ಟ ಪರಿಣಾಮಗಳಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ ಇತ್ಯಾದಿಗಳು ಸೇರಿವೆ. ನಾಲಿಗೆಯ ಚಾಪಲ್ಯದಿಂದ ಹೆಚ್ಚು ಸಕ್ಕರೆ, ಉಪ್ಪು, ಎಣ್ಣೆ ಸೇರಿರುವ ಆಹಾರವನ್ನು ತಿನ್ನುವುದು, ತಿಂದ ಆಹಾರವನ್ನು ಅರಗಿಸಲು ಬೇಕಾದಷ್ಟು ಓಡಾಟವನ್ನೂ ವ್ಯಾಯಾಮವನ್ನೂ ಮಾಡದಿರುವುದು, ಒಂದೇ ಕಡೆ ಕುಳಿತು ಕಾಲ ಕಳೆಯುವುದು, ನಡಿಗೆ ಇಲ್ಲದೆ ಸದಾ ವಾಹನವನ್ನು ಬಳಸುವುದು ಮೇದೋಜೀರಕಾಂಗದ ಇನ್ಸುಲಿನ್ ಉತ್ಪಾದನೆಯ ಶಕ್ತಿಯನ್ನು ಕುಗ್ಗಿಸುತ್ತಿದೆ. ಜೀವನಶೈಲಿಯನ್ನು ಬದಲಾಯಿಸಿಕೊಂಡರೆ, ಕೃತಕ ಆಹಾರಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡಿದರೆ ಮಧುಮೇಹದ ಆಗಮನವನ್ನು ಮುಂದೂಡಬಹುದು.

ಅನೇಕರಲ್ಲಿ ಚಿಕಿತ್ಸೆ ಬೇಕೆ ಅಥವಾ ಬೇಡವೆ ಎಂಬ ಜಿಜ್ಞಾಸೆ ಇರುತ್ತದೆ. ಮಧುಮೇಹಕ್ಕೆ ಏಕೆ ಚಿಕಿತ್ಸೆ ಬೇಕು ಎಂದರೆ ದೇಹದಲ್ಲಿ ಮಿತಿಮೀರಿದ ಸಕ್ಕರೆ ಅಂಶ ದೇಹದಲ್ಲಿರುವ ಸಮಸ್ತ ಅಂಗಾಂಗಗಳಿಗೆ ಹಾನಿ ಮಾಡುವುದರಿಂದ ಮಾನವನಲ್ಲಿ ಹತ್ತು ಹಲವು ವ್ಯಾಧಿಗಳು ಹುಟ್ಟುತ್ತವೆ. ಆದ್ದರಿಂದ ಮಧುಮೇಹ ಪ್ರಾರಂಭವಾದಲ್ಲೇ ಚಿಕಿತ್ಸೆ ತೆಗೆದುಕೊಳ್ಳುವುದು ಲಾಭದಾಯಕ. ಸರಿಯಾದ ಮಟ್ಟದಲ್ಲಿ ರಕ್ತದಲ್ಲಿ ಗ್ಲೂಕೋಸ್ ಅಂಶವನ್ನೂ ರಕ್ತದೊತ್ತಡವನ್ನೂ ಜಿಡ್ಡಿನಂಶವನ್ನೂ ಇಟ್ಟುಕೊಂಡಿದ್ದರೆ, ಮಧುಮೇಹದಿಂದ ಆಗಬಹುದಾದ ಹತ್ತು ಹಲವು ತೊಡಕುಗಳನ್ನು ನಿವಾರಿಸಿಕೊಳ್ಳಬಹುದು. ಮಧುಮೇಹಿಗಳು ಜೀವನಶೈಲಿಯ ಕಡೆಗೆ ಗಮನ ಕೊಡುವುದು ಮುಖ್ಯ. ❖

ಔಷಧವಿಲ್ಲದೆ ಡಯಾಬಿಟಿಸ್ ರಿವರ್ಸ್ ಸಾಧ್ಯವೇ?



ಡಾ. ಸಿದ್ಲಿಂಗೇಶ ಸಾಲಿಮಠ

ಸರಿಯಾದ ಆಹಾರ ಪದ್ಧತಿ ಹಾಗೂ ವ್ಯಾಯಾಮದಿಂದ ಔಷಧಗಳಿಲ್ಲದೆ ಡಯಾಬಿಟಿಸ್ ಅನ್ನು ರಿವರ್ಸ್ ಮಾಡಬಹುದು. ಭಾರತ ಸರ್ಕಾರದ ವೈದ್ಯಕೀಯ ಸಂಸ್ಥೆ (ಐಸಿಎಂಆರ್) 18 ಸಾವಿರ ರೋಗಿಗಳ ಮೇಲೆ ಸಂಶೋಧನೆ ಮಾಡಿ ಔಷಧಗಳಿಲ್ಲದೆ ಮಧುಮೇಹವನ್ನು ಗುಣಪಡಿಸಿದ್ದಾರೆ. ಅಮೆರಿಕದ ಗ್ಲಾಸ್ ಗೋವ್ ಯುನಿವರ್ಸಿಟಿ ವೈದ್ಯರು, ವರ್ಮೊಂಟ್ ಯುನಿವರ್ಸಿಟಿ ವೈದ್ಯರು ಹಾಗೂ ಹುಬ್ಬಳ್ಳಿಯ ಜೀವಿನಿ ಅರೋಗ್ಯ ಪ್ರತಿಷ್ಠಾನ ವೈದ್ಯರು ಮಧುಮೇಹ ರೋಗಿಗಳಿಗೆ ಔಷಧವನ್ನು ನಿಲ್ಲಿಸಿ ಡಯಾಬಿಟಿಸ್ ರಿವರ್ಸ್ ಮಾಡಿಸಿದ್ದಾರೆ.

- **ಹಾಗಾದರೆ ಔಷಧಗಳಿಲ್ಲದೆ ಡಯಾಬಿಟಿಸ್ ಅನ್ನು ಹೇಗೆ ರಿವರ್ಸ್ ಪಡಿಸಬಹುದು?**

ಸರಿಯಾದ ಆಹಾರಪದ್ಧತಿ ಹಾಗೂ ವ್ಯಾಯಾಮದ ಮೂಲಕ ಡಯಾಬಿಟಿಸ್ ಅನ್ನು ರಿವರ್ಸ್ ಮಾಡಬಹುದು. ಆದರೆ ಈ ಮೂರು ಕ್ರಮಗಳನ್ನು ಪಾಲಿಸಲೇಬೇಕು.ಮೊದಲನೇಯದಾಗಿ ಮಧುಮೇಹಿ ಇನ್ಸುಲಿನ್ ಔಷಧಗಳನ್ನು (Insulin Secretagogues), ಅಂದರೆ ಹಸಿವು ಹೆಚ್ಚಿಸುವ ಮಧುಮೇಹದ ಔಷಧಗಳನ್ನು ನಿಲ್ಲಿಸಬೇಕು.

ಸ್ಯಾನ್ ಫ್ರಾನ್ಸಿಸ್ಕೊ ಹಾಗೂ ಬೋಸ್ಟನ್ ಯುನಿವರ್ಸಿಟಿ ವೈದ್ಯರ ಪ್ರಕಾರ ಈಗಿನ ಮಧುಮೇಹ ಔಷಧಗಳು ಇನ್ಸುಲಿನ್ ಉತ್ಪತ್ತಿ ಮಾಡುವ ಬೇಟಾ ಸೆಲ್ಸ್ ಅನ್ನು ಕೊಲ್ಲುತ್ತದೆ ಹಾಗೂ ಮಧುಮೇಹವನ್ನು ಕಾಲ ಕ್ರಮೇಣ ಹೆಚ್ಚಿಗೆ ಮಾಡುತ್ತವೆ. ಆದ್ದರಿಂದ ಮಧುಮೇಹಿಗಳು ಕಾಲ ಕ್ರಮೇಣ ಹೆಚ್ಚು ಹೆಚ್ಚು ಔಷಧಗಳನ್ನು ಸೇವಿಸುತ್ತಾರೆ.

ಎರಡನೆಯದಾಗಿ, ಸರಿಯಾದ ಆಹಾರ ಕ್ರಮವನ್ನು ಪಾಲಿಸಬೇಕು. ಹೆಚ್ಚು ಸಕ್ಕರೆ ಅಂಶ ಇರುವ ಆಹಾರಗಳಾದ (High glycemic foods) ಬೀಟ್ ರೂಟ್, ಆಲೂಗಡ್ಡೆ, ರಾಗಿ, ಅನ್ನ, ಮೈದಾ, ಜಂಕ್ ಫುಡ್ ಸೇವಿಸಲೇಬಾರದು. ನಿಮ್ಮ ರಕ್ತದಲ್ಲಿರುವ ಸಕ್ಕರೆ ಪ್ರಮಾಣಕ್ಕನುಗುಣವಾಗಿ (Blood Sugar) ಊಟ ಮಾಡಬೇಕು.

ಮೂರನೆಯದಾಗಿ, ಬೆಳಗಿನ ನಡಿಗೆಯನ್ನು (ಮಾರ್ನಿಂಗ್ ವಾಕ್) ನಿಲ್ಲಿಸಿ ಊಟದ ಒಂದು ತಾಸಿನ ನಂತರ Anti gravity exercise (ಆ್ಯಂಟಿ ಗ್ರ್ಯಾವಿಟಿ ಎಕ್ಸರ್‌ಸೈಜ್) ಮಾಡಬೇಕು. Anti gravity muscles ನಿಮ್ಮ ಆಹಾರದಲ್ಲಿನ ಸಕ್ಕರೆ ಅಂಶವನ್ನು ಉಪಯೋಗಿಸಿ ನಿಮ್ಮ PPBS (ಊಟದ ನಂತರದ ಸಕ್ಕರೆ ಪ್ರಮಾಣ) ಕಡಿಮೆ ಮಾಡುತ್ತದೆ.

- **ಡಯಾಬಿಟಿಸನ್ನು ಔಷಧಿಗಳಿಲ್ಲದೆ ಗುಣಪಡಿಸುವ ವಿಧಾನಗಳನ್ನು ಹೇಗೆ ಪಾಲಿಸಬೇಕು?**

ಡಯಾಬಿಟಿಸ್ ರಿಸರ್ವ್ ಪದ್ಧತಿಯ ನುರಿತ ವೈದ್ಯರ ಮೇಲ್ವಿಚಾರಣೆಯಲ್ಲಿ ಈ ವಿಧಾನಗಳನ್ನು ಪಾಲಿಸಬೇಕು. ನಿಯಮಿತವಾಗಿ ತಮ್ಮ ರಕ್ತದಲ್ಲಿನ ಸಕ್ಕರೆ ಪರೀಕ್ಷೆಯ ವರದಿಗೆ (Blood sugar test report) ಅನುಗುಣವಾಗಿ ಔಷಧಗಳಿಲ್ಲದೆ ತಮ್ಮ ಮಧುಮೇಹವನ್ನು ವೈದ್ಯರು ಸರಿಪಡಿಸುತ್ತಾರೆ.

- **ಡಯಾಬಿಟಿಸ್ ರಿವರ್ಸ್ ಮಾಡಲು ಎಷ್ಟು ಸಮಯ ಬೇಕಾಗುತ್ತದೆ?**

ತಮ್ಮ ಮಧುಮೇಹ ಯಾವ ಹಂತದಲ್ಲಿದೆ ಎಂಬುದರ ಮೇಲೆ ಮೂರರಿಂದ ಆರು ತಿಂಗಳ ಸಮಯ ಬೇಕಾಗುತ್ತದೆ.

- **ಡಯಾಬಿಟಿಸ್ ರಿವರ್ಸ್ ಪದ್ಧತಿ ಯಾರಿಗೆ ಸೂಕ್ತ?**

ಡಯಾಬಿಟಿಸ್ ರಿವರ್ಸ್ ಪದ್ಧತಿ ಪಾಲಿಸಲು 60 ವರ್ಷಗಳ ಒಳಗಿರಬೇಕು. ಮೂತ್ರಪಿಂಡ ಮತ್ತು ಯಕೃತ್ತಿನ ಸಮಸ್ಯೆಗಳು ಇರಬಾರದು. ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸಲು ಆಸಕ್ತಿ ಇರಬೇಕು. ಟೈಪ್ 1 ಡಯಾಬಿಟಿಸ್‌ನವರಿಗೂ ಸೂಕ್ತವಲ್ಲ. ❖

ಹಿಂದೂ ಪದ ಕುರಿತ ಹೇಳಿಕೆ: ಸತೀಶ ಜಾರಕಿಹೊಳಿ ಪರ ಶಕ್ತಿ ಪ್ರದರ್ಶನ

‘ಸತ್ಯ ಒಪ್ಪದವರು ನಕಲಿ ಹಿಂದೂಗಳು’

ಪ್ರಜಾವಾಣಿ ವಾರ್ತೆ



‘ಹಿಂದೂ’ ಪದದ ಬಗ್ಗೆ ಸತೀಶ ಜಾರಕಿಹೊಳಿ ಅವರ ನಿಲುವನ್ನು ಬೆಂಬಲಿಸಿ ಬೆಳಗಾವಿಯಲ್ಲಿ ಸೋಮವಾರ ವಿವಿಧ ಸಂಘಟನೆಗಳು ಶಕ್ತಿ ಪ್ರದರ್ಶಿಸಿದವು –ಪ್ರಜಾವಾಣಿ ಚಿತ್ರ

ಬೆಳಗಾವಿ: ‘ಹಿಂದೂ’ ಪದದ ಬಗ್ಗೆ ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ ಜಾರಕಿಹೊಳಿ ಅವರ ನಿಲುವನ್ನು ಬೆಂಬಲಿಸಿ ನಗರದಲ್ಲಿ ಸೋಮವಾರ ವಿವಿಧ ಸಂಘಟನೆಗಳಿಂದ ಶಕ್ತಿ ಪ್ರದರ್ಶನ ಮಾಡಲಾಯಿತು. ‘ಬಹುತ್ವಕ್ಕೆ ಜಯವಾಗಲಿ, ಸತೀಶ ಜಾರಕಿಹೊಳಿ ನಿಮ್ಮೊಂದಿಗೆ ನಾವಿದ್ದೇವೆ’ ಎಂದು ನಿರಂತರ ಘೋಷಣೆ ಮೊಳಗಿಸಲಾಯಿತು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಬೆಂಬಲಿಗರು ನಗರದ ಸಿ.ಪಿ.ಇಡಿ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿದರು. ರಾಣಿ ಚನ್ನಮ್ಮನ ವೃತ್ತದಲ್ಲಿ ಎರಡು ತಾಸು ಧರಣಿ ನಡೆಸಿ ಸಂಚಾರ ಬಂದ್ ಮಾಡಿದರು.

ಸಚಿವೆ ಶಶಿಕಲಾ ಜೊಲ್ಲೆ, ಶಾಸಕರಾದ ಅಭಯ ಪಾಟೀಲ, ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಭಾವಚಿತ್ರ ಅಂಟಿಸಿದ ಪ್ರತಿಕೃತಿಗಳಿಗೆ ಚಪ್ಪಲಿಯಿಂದ ಹೊಡೆದು, ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಕೇಸರಿ, ನೀಲಿ, ಕೆಂಪು–ಹಳದಿ ಬಣ್ಣದ ಬಾವುಟಗಳನ್ನು ಹಿಡಿದು, ಬಸವಣ್ಣ, ಅಂಬೇಡ್ಕರ್, ಬುದ್ಧ, ನಾರಾಯಣ ಗುರು, ಮಹರ್ಷಿ ವಾಲ್ಮೀಕಿ, ಸಂಗೊಳ್ಳಿ ರಾಯಣ್ಣನ ಚಿತ್ರಗಳಿದ್ದ ಧ್ವಜಗಳನ್ನು ಮಾರ್ಗದುದ್ದಕ್ಕೂ ಹಾರಾಡಿಸಿದರು.

‘ಪಕ್ಷಕ್ಕೆ ಧಕ್ಕೆ ಆಗಬಾರದೆಂದು ಸತೀಶ ಅವರು ಹೇಳಿಕೆ ಹಿಂಪಡೆದಿರಬಹುದು. ಆದರೆ, ಅವರು ಸತ್ಯ ನುಡಿದಿದ್ದಾರೆ. ಸತ್ಯ ಒಪ್ಪಿಕೊಳ್ಳದವರೆಲ್ಲ ನಕಲಿ ಹಿಂದೂಗಳು. ಬುದ್ಧನನ್ನು ದೇಶದಿಂದ ಓಡಿಸಿದವರು, ಬಸವಾದಿ ಶರಣರ ಕ್ರಾಂತಿ ಹಾಳು ಮಾಡಿದವರು, ಅಂಬೇಡ್ಕರ್‌ಗೆ ಕಿರುಕುಳ ಕೊಟ್ಟವರು ನೀವು. ಈಗ ಬಹುಜನರು ಒಂದಾಗಿದ್ದೇವೆ’ ಎಂದು ಫಲಕ ಪ್ರದರ್ಶಿಸಿದರು.

ಮಾನವ ಬಂಧುತ್ವ ವೇದಿಕೆ, ಕರ್ನಾಟಕ ರಕ್ಷಣಾ ವೇದಿಕೆ, ಭಾರತೀಯ ಕೃಷಿಕ ಸಮಾಜ (ಸಂಯುಕ್ತ) ರೈತ ಸಂಘಟನೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಅಖಿಲ ಕರ್ನಾಟಕ ವಾಲ್ಮೀಕಿ ಯುವ ವೇದಿಕೆ, ಅಂಬೇಡ್ಕರ್ ಶಕ್ತಿ ಸಂಘ, ಛತ್ರಪತಿ ಶಿವಾಜಿ ಮಹಾರಾಜ ಅಶ್ವಾರೂಢ ಮೂರ್ತಿ ಪ್ರತಿಷ್ಠಾಪನಾ ಸಮಿತಿ, ಬೆಳಗಾವಿ ವಾಲ್ಮೀಕಿ ಸಮಾಜ, ಬಸವ ಫೌಂಡೇಷನ್ ಮತ್ತಿತರ ಸಂಘಟನೆಗಳ ಮುಖಂಡರು, ಕಾರ್ಯಕರ್ತರೂ ಪಾಲ್ಗೊಂಡರು.

‘ಟಿಕೆಟ್‌ಗೆ ನೀಡುವ ಹಣ ಬಡ ಯುವತಿ ಮದುವೆಗೆ’

ಪಕ್ಷದ ಒಪ್ಪಿಗೆ ಕೋರಿದ ಚನ್ನಗಿರಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ತೇಜಸ್ವಿ ಪಟೇಲ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಚನ್ನಗಿರಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಕೋರಿ ಅರ್ಜಿ ಸಲ್ಲಿಸಲಿರುವ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ತೇಜಸ್ವಿ ಪಟೇಲ್, ಕೆಪಿಸಿಸಿಗೆ ನೀಡಬೇಕಿರುವ ₹ 2 ಲಕ್ಷ ಹಣವನ್ನು ಕ್ಷೇತ್ರ ವ್ಯಾಪ್ತಿಯ ಬಡ ಕುಟುಂಬದ, ಅಂಗವಿಕಲ ಯುವತಿಯ ಮದುವೆಗೆ ನೀಡಲು ಮುಂದಾಗಿದ್ದಾರೆ. ಕೆಪಿಸಿಸಿ ಸಹಮತ ನೀಡಬೇಕು ಎಂದೂ ಕೋರಿದ್ದಾರೆ.

ಚನ್ನಗಿರಿ ತಾಲ್ಲೂಕು ಬೆಳಲಗೆರೆ ಗ್ರಾಮದ ಅಕಾಡದರ ರಂಗಪ್ಪ– ಯಲ್ಲಮ್ಮ ದಂಪತಿಯ ಏಳು ಜನ ಹೆಣ್ಣು ಮಕ್ಕಳಲ್ಲಿ ಐದು ಮಂದಿಗೆ ವಾಕ್ ಮತ್ತು ಶ್ರವಣದೋಷ ಇದೆ. ಅವರ ಮಕ್ಕಳ ಪೈಕಿ ನಾಲ್ವರು ಹೆಣ್ಣುಮಕ್ಕಳಿಗೆ ಮದುವೆಯಾಗಿದೆ. ಕುಟುಂಬ ನಿರ್ವಹಿಸುತ್ತಿದ್ದ ರಂಗಪ್ಪ ಇತ್ತೀಚೆಗೆ ನಿಧನರಾಗಿದ್ದು, ಕುಟುಂಬಕ್ಕೆ ನೆರವಿಗೆ ಪಟೇಲ್ ಧಾವಿಸಿದ್ದಾರೆ.

ರಂಗಪ್ಪ ಅವರ ಇನ್ನೊಬ್ಬ ಪುತ್ರಿ, ವಾಕ್ ಮತ್ತು ಶ್ರವಣ ದೋಷವಿರುವ ಕೆಂಚಮ್ಮ ಅವರ ಮದುವೆಯು ಹರಪನಹಳ್ಳಿ ತಾಲ್ಲೂಕು ವಡ್ಡಳ್ಳಿಯ ವಾಕ್ ದೋಷ ಇರುವ ಮಂಜುನಾಥ್ ಜತೆ ನಿಶ್ಚಯವಾಗಿದೆ. ಈ ಬಡ ಕುಟುಂಬ ಹಣ ಹೊಂದಿಸಲಾರದೇ ಮದುವೆಯನ್ನು ಮುಂದೂಡುತ್ತ ಬಂದಿರುವ ವಿಷಯ ತಿಳಿದ ಪಟೇಲ್, ಕೆಪಿಸಿಸಿಗೆ ಅರ್ಜಿಯೊಂದಿಗೆ ಸಲ್ಲಿಸಬೇಕಿರುವ ಹಣವನ್ನು ಈ ಕುಟುಂಬಕ್ಕೆ ನೀಡುವ ಆಲೋಚನೆ ಮಾಡಿದ್ದಾರೆ.

‘ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಕೋರಿ ₹ 2 ಲಕ್ಷದ ಡಿ.ಡಿ ಜತೆಗೆ ಕೆಪಿಸಿಸಿಗೆ ಅರ್ಜಿ ಸಲ್ಲಿಸಬೇಕಿದೆ. ಅದನ್ನೇ ಕುಟುಂಬಕ್ಕೆ ನೀಡಲು ಬಯಸಿದ್ದೇನೆ. ಇಂದು ಕೆಂಚಮ್ಮನ ಹೆಸರಿಗೆ ಡಿಡಿ ನೀಡಿದ್ದೇನೆ’ ಎಂದು ಅವರು ತಿಳಿಸಿದರು.

‘ಇದಕ್ಕೆ ಕೆಪಿಸಿಸಿ ಸಹಮತ ವ್ಯಕ್ತಪಡಿಸುವ ವಿಶ್ವಾಸ ಇದೆ. ಒಪ್ಪಿದರೆ, ಶಾಸಕ ಶಾಮನೂರು ಶಿವಶಂಕರಪ್ಪ ಅವರಿಂದ ಅಧಿಕೃತವಾಗಿ ಮತ್ತೊಮ್ಮೆ ಕೆಂಚಮ್ಮ ಅವರ ಕುಟುಂಬಕ್ಕೆ ಡಿ.ಡಿ. ಹಸ್ತಾಂತರಿಸಲಾಗುವುದು. ಒಪ್ಪದಿದ್ದರೆ, ಮದುವೆಗೆ ತೊಂದರೆ ಆಗದಂತೆ ಸ್ನೇಹ ಬಳಗದಿಂದ ₹ 2 ಲಕ್ಷ ಸಂಗ್ರಹಿಸಲಾಗುವುದು’ ಎಂದು ವಿವರಿಸಿದರು.

ಪಿಎಸ್‌ಐ ನೇಮಕಾತಿ ಹಗರಣ: ದೈಹಿಕ ಶಿಕ್ಷಣ ಶಿಕ್ಷಕನ ಸೆರೆ



ಶಂಕ್ರಪ್ಪ ಹನಮಗೊಂಡ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ತುಮಕೂರಿನಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗೆ ಉತ್ತರಗಳನ್ನು ಬ್ಲೂಟೂತ್ ಮೂಲಕ ಹೇಳಿದ್ದ ಆರೋಪದಡಿ ಸಿಐಡಿ ಅಧಿಕಾರಿಗಳು ದೈಹಿಕ ಶಿಕ್ಷಣ ಶಿಕ್ಷಕ ಶಂಕ್ರಪ್ಪ ಬಸಪ್ಪ ಹನಮಗೊಂಡ (32) ಎಂಬುವವನನ್ನು ಬಂಧಿಸಿ, ತುಮಕೂರು ಸಿಐಡಿ ತಂಡಕ್ಕೆ ಒಪ್ಪಿಸಿದ್ದಾರೆ.

ಚಿತ್ತಾಪುರ ತಾಲ್ಲೂಕಿನ ಕರದಾಳ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ಶಿಕ್ಷಕರಾಗಿದ್ದ ಶಂಕ್ರಪ್ಪ ಪ್ರಕರಣದ ಪ್ರಮುಖ ಆರೋಪಿ ಆರ್. ಡಿ.ಪಾಟೀಲ ನಿಕಟವರ್ತಿಯಾಗಿದ್ದ. ಈತ ಅಭ್ಯರ್ಥಿಗಳನ್ನು ಹುಡುಕಿ ಹಣದ ವ್ಯವಹಾರ ಮಾಡುತ್ತಿದ್ದ. ಅಲ್ಲದೇ, ತುಮಕೂರಿನ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿ, ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಶ್ರೀಶೈಲ ಬಿರಾದಾರ ಎಂಬಾತನಿಗೆ ಉತ್ತರಗಳನ್ನು ಬ್ಲೂಟೂತ್ ಮೂಲಕ ಒದಗಿಸಿದ್ದ ಆರೋಪದ ಮೇರೆಗೆ ಸಿಐಡಿ ಡಿವೈಎಸ್ಪಿ ಶಂಕರಗೌಡ ಪಾಟೀಲ, ಸಿಐಡಿ ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ ಆನಂದ, ಸಿಬ್ಬಂದಿ ಕುಮಾರವ್ಯಾಸ ಮತ್ತು ಚಿತ್ತಾಪುರ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

‘ಜೇವರ್ಗಿ ತಾಲ್ಲೂಕಿನ ಕುರನಳ್ಳಿ ಗ್ರಾಮದ ಶಂಕ್ರಪ್ಪ 2017ರಲ್ಲಿ ಸೇವೆಗೆ ನೇಮಕವಾಗಿದ್ದ. ಅಭ್ಯರ್ಥಿಯಿಂದ ₹ 30 ಲಕ್ಷದ ಪೈಕಿ ₹ 20 ಲಕ್ಷ ಪಡೆದಿದ್ದ’ ಎಂದು ಮೂಲಗಳು ತಿಳಿಸಿವೆ.

ಸಿಐಡಿ ಅಧಿಕಾರಿಗಳ ಕಾರ್ಯಾಚರಣೆ ಬಗ್ಗೆ ಸುಳಿವು ಪಡೆದ ಶಂಕ್ರಪ್ಪ ಒಂದೂವರೆ ತಿಂಗಳಿನಿಂದ ಶಾಲೆಗೆ ಗೈರು ಹಾಜರಾಗಿದ್ದ.

ಪ್ರಿಯಾಂಕ್‌ಗೆ ಜೀವ ಬೆದರಿಕೆ ಮಣಿಕಂಠ ಬಂಧನ, ಬಿಡುಗಡೆ



ಮಣಿಕಂಠ ರಾಠೋಡ

ಕಲಬುರಗಿ: ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಜೀವ ಬೆದರಿಕೆ ಹಾಕಿದ ಆರೋಪದಡಿ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರನ್ನು ನಗರದ ಬ್ರಹ್ಮಪುರ ಠಾಣೆಯ ಪೊಲೀಸರು ಹೈದರಾಬಾದ್‌ನಲ್ಲಿ ಭಾನುವಾರ ರಾತ್ರಿ ಬಂಧಿಸಿದರು. ಬಳಿಕ ಠಾಣೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

‘ಸಾಯಲು ಸಿದ್ಧ, ಶೂಟ್ ಮಾಡಲು ಸಿದ್ಧ’ ಎಂಬ ಹೇಳಿಕೆ ನೀಡಿ ಪ್ರಿಯಾಂಕ್ ಖರ್ಗೆ ಅವರಿಗೆ ಜೀವಬೆದರಿಕೆ ಒಡ್ಡಲಾಗಿದೆ’ ಎಂದು ಕಾಂಗ್ರೆಸ್ ಮುಖಂಡ ತಿಪ್ಪಣ್ಣಪ್ಪ ದೂರು ನೀಡಿದ್ದರು.

9 ಮಂದಿ ವಿರುದ್ಧ ಪ್ರಕರಣ: ಬಿಜೆಪಿ ಮುಖಂಡರಾದ ವಿಠಲ್ ವಾಲ್ಮೀಕಿ ನಾಯಕ, ಅರವಿಂದ ಚವಾಣ್, ಮಣಿಕಂಠ ರಾಠೋಡ ಸೇರಿ 9 ಮಂದಿ ವಿರುದ್ಧ ಚಿತ್ತಾಪುರ ಠಾಣೆಯಲ್ಲಿ ‘ಮುಂಜಾಗ್ರತಾ ಕ್ರಮದ ವರದಿ’ ಆಧರಿಸಿ ಪ್ರಕರಣ ದಾಖಲಾಗಿದೆ. ಮಣಿಕಂಠ ರಾಠೋಡ್, ಗೋಪಾಲ್ ರಾಠೋಡ್, ರಾಮದಾಸ್ ಚವಾಣ್, ಅಶ್ವಥ್ ರಾಠೋಡ್, ಬಾಲಾಜಿ ಬುರಬುರೆ, ಮಹೇಶ ಬಾಳಿ, ಶಂಭುಲಿಂಗ ಭಂಗಿ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ತಿಳಿಸಿವೆ.

ನವೆಂಬರ್ 11ರಂದು ಶಾಸಕ ಪ್ರಿಯಾಂಕ್ ಖರ್ಗೆ ಚಿತ್ತಾಪುರಕ್ಕೆ ಬಂದಿದ್ದ ವೇಳೆ ವಿಠಲ್ ನಾಯಕ, ಅರವಿಂದ ಚವಾಣ್ ಹಾಗೂ ಮಣಿಕಂಠ ರಾಠೋಡ ಬಿಜೆಪಿಯ ನೂರಾರು ಕಾರ್ಯಕರ್ತರನ್ನು ಸೇರಿಸಿ ಪೊಲೀಸರಿಗೆ ಮತ್ತು ಪಕ್ಷದ ಅಧ್ಯಕ್ಷರಿಗೆ ಮಾಹಿತಿ ನೀಡದೇ ಪಟ್ಟಣದಲ್ಲಿ ‘ಬೂತ್ ಜೀತೆತೊ ಎಲೆಕ್ಷನ್ ಜೀತೇಂಗೆ’ ಬ್ಯಾನರ್‌ನಡಿ ಸಭೆ ನಡೆಸಿದ್ದರು.

ಹಾಲಿನ ದರ ಹೆಚ್ಚಳಕ್ಕೆ ತಾತ್ಕಾಲಿಕ ತಡೆ

ಒಂದನೇ ಪುಟದಿಂದ

‘ರೈತರಿಗೆ ನೆರವಾಗುವ ಉದ್ದೇಶದಿಂದ ಹಾಲು ಮತ್ತು ಮೊಸರಿನ ದರ ಹೆಚ್ಚಿಸಲಾಗಿದೆ. ಹೈನು ರಾಸುಗಳ ನಿರ್ವಹಣಾ ವೆಚ್ಚದಲ್ಲಿ ಎರಡು ವರ್ಷಗಳಿಂದ ನಿರಂತರ ಏರಿಕೆ ಆಗುತ್ತಿದೆ. ಪಶು ಆಹಾರ ಉತ್ಪಾದನೆಗೆ ಬಳಸುವ ಮೆಕ್ಕೆಜೋಳ, ಅಕ್ಕಿತೌಡು, ಹತ್ತಿಕಾಳು ಹಿಂಡಿ, ಖನಿಜ ಪದಾರ್ಥಗಳ ಬೆಲೆಯಲ್ಲಿ ಶೇಕಡ 30ಕ್ಕಿಂತಲೂ ಅಧಿಕ ಏರಿಕೆಯಾಗಿದೆ. ಪ್ರತಿ ಕೆ.ಜಿ. ಪಶು ಆಹಾರ ಉತ್ಪಾದನೆಯ ವೆಚ್ಚವು ಎರಡು ವರ್ಷದ ಹಿಂದೆ ₹ 18 ಇತ್ತು. ಈಗ ₹ 23 ತಲುಪಿದೆ. ಇದು ಕೂಡ ಹಾಲಿನ ದರ ಏರಿಕೆಗೆ ಕಾರಣ’ ಎಂದು ಹೇಳಿದರು.

ಹಾಲಿನ ಮಾರುಕಟ್ಟೆಯಲ್ಲಿ ಪ್ರತಿಸ್ಪರ್ಧಿಗಳಾಗಿರುವ ದೊಡ್ಲ, ಜೆರ್ಸಿ, ಹೆರಿಟೇಜ್, ತಿರುಮಲ, ಗೋವರ್ಧನ್, ಆರೋಗ್ಯ ಬ್ರ್ಯಾಂಡ್ ದರಕ್ಕೆ ಹೋಲಿಸಿದರೆ ನಂದಿನಿ ಹಾಲಿನ ದರ ಕಡಿಮೆ ಇದೆ. ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ದೆಹಲಿ, ಗುಜರಾತ್ ಹಾಲು ಉತ್ಪಾದಕರ ಮಹಾಮಂಡಳಗಳ ಹಾಲಿನ ದರವು ಕೆಎಂಎಫ್ ದರಕ್ಕಿಂತ ಹೆಚ್ಚಾಗಿದೆ ಎಂದು ಹೇಳಿದ್ದರು.

ನಂದಿನಿ ಹಾಲು, ಮೊಸರಿನ ಪ್ರಸ್ತಾವಿತ ದರಪಟ್ಟಿ



ಮಾದರಿ	ಪ್ರಸ್ತುತ ದರ	ಪರಿಷ್ಕೃತ ದರ (₹ಗಳಲ್ಲಿ ಪ್ರತಿ ಲೀ. ಅಥವಾ ಕೆ.ಜಿ.ಗೆ)
ಟೋನ್ಡ್ ಹಾಲು (ಶೇ 3ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	37	40
ಹೋಮೋಜಿನೈಸ್ಡ್ ಟೋನ್ಡ್ ಹಾಲು (ಶೇ 3ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	38	41
ಹೋಮೋಜಿನೈಸ್ಡ್ ಹಸುವಿನ ಹಾಲು (ಶೇ 3.5ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	42	45
ಸ್ಪೆಷಲ್ ಹಾಲು (ಶೇ 4ರಷ್ಟು ಕೊಬ್ಬು ಹಾಗೂ ಶೇ 9ರಷ್ಟು ಎಸ್‌ಎನ್‌ಎಫ್)	43	46
ಶುಭಂ ಹಾಲು (ಶೇ 4.5ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	43	46
ಹೋಮೋಜಿನೈಸ್ಡ್ ಸ್ಟ್ಯಾಂಡರ್ಡೈಸ್ಡ್ ಹಾಲು (ಶೇ 4.5ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	44	47
ಸಮೃದ್ಧಿ ಹಾಲು (ಶೇ 6ರಷ್ಟು ಕೊಬ್ಬು ಹಾಗೂ ಶೇ 9ರಷ್ಟು ಎಸ್‌ಎನ್‌ಎಫ್)	48	51
ಸಂತೃಪ್ತಿ ಹಾಲು (ಶೇ 6ರಷ್ಟು ಕೊಬ್ಬು ಹಾಗೂ ಶೇ 8.5ರಷ್ಟು ಎಸ್‌ಎನ್‌ಎಫ್)	50	53
ಡಬಲ್ ಟೋನ್ಡ್ ಹಾಲು (ಶೇ 1.5ರಷ್ಟು ಕೊಬ್ಬು ಹಾಗೂ ಶೇ 9ರಷ್ಟು ಎಸ್‌ಎನ್‌ಎಫ್)	36	39
ಮೊಸರು ಪ್ರತಿ ಕೆ.ಜಿ.ಗೆ	45	48

ಹಾಲು ಉತ್ಪಾದನೆ ಇಳಿಕೆ: ಬಾಲಚಂದ್ರ ಜಾರಕಿಹೊಳಿ

‘ಪ್ರಸಕ್ತ ವರ್ಷದ ಜೂನ್ ಅಂತ್ಯದಲ್ಲಿ ಕೆಎಂಎಫ್ ಪ್ರತಿದಿನ 94.20 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿತ್ತು. ಚರ್ಮ ಗಂಟು ರೋಗ, ಅತಿವೃಷ್ಟಿ ಮತ್ತಿತರ ಕಾರಣಗಳಿಂದ ಹಾಲು ಉತ್ಪಾದನೆಯಲ್ಲಿ ಕುಸಿತವಾಗಿದೆ. ಈಗ ಹಾಲು ಸಂಗ್ರಹಣೆಯ ಪ್ರಮಾಣ 78.80 ಲಕ್ಷ ಲೀ.ಗೆ ಇಳಿಕೆಯಾಗಿದೆ. ಹೈನುಗಾರಿಕೆಯಲ್ಲಿ ಲಾಭ ದೊರಕುತ್ತಿಲ್ಲ ಎಂಬ ಕಾರಣದಿಂದ ರೈತರು ಹೊರ ರಾಜ್ಯಗಳಿಗೆ ರಾಸುಗಳನ್ನು ಮಾರಾಟ ಮಾಡುತ್ತಿರುವುದೂ ಹೆಚ್ಚುತ್ತಿದೆ’ ಎಂದು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ತಿಳಿಸಿದ್ದಾರೆ.

ಕೇಸರಿ ಬಳಿದರೆ ತಪ್ಪೇನು: ಸಿ.ಎಂ

ಒಂದನೇ ಪುಟದಿಂದ

7,600 ಕೊಠಡಿ ನಿರ್ಮಾಣ: ‘ಈ ಯೋಜನೆಯಡಿ ಪ್ರಸಕ್ತ ವರ್ಷ ಹೊಸತಾಗಿ 7,600 ಕೊಠಡಿಗಳನ್ನು ನಿರ್ಮಿಸಲಾಗುತ್ತಿದ್ದು, ಅದರಲ್ಲಿ 2 ಸಾವಿರ ಕೊಠಡಿಗಳು ಕಲ್ಯಾಣ ಕರ್ನಾಟಕದಲ್ಲೇ ನಿರ್ಮಾಣವಾಗಲಿವೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಮೂರು ವರ್ಷ ನಿರಂತರವಾಗಿ ಕೊಠಡಿಗಳ ನಿರ್ಮಾಣ ಮಾಡಿದರೆ ಮೂಲಸೌಕರ್ಯ ಕೊರತೆ ನೀಗುತ್ತದೆ. ಆ 15ರೊಳಗೆ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಹಾಗೂ ದುರಸ್ತಿಗೆ ತೀರ್ಮಾನಿಸಲಾಗಿದ್ದು, ಇದಕ್ಕಾಗಿ ₹ 250 ಕೋಟಿ ನೀಡಲಾಗಿದೆ. ಶಿಕ್ಷಣದ ಕೊರತೆ ಬಹಳ ದಿನಗಳಿಂದ ಇತ್ತು. 1956ರ ಕರ್ನಾಟಕ ಏಕೀಕರಣವಾದ ಬಳಿಕ ಇದೇ ಮೊದಲ ಬಾರಿಗೆ ಒಂದೇ ವರ್ಷದಲ್ಲಿ ಇಷ್ಟೊಂದು ಪ್ರಮಾಣದ ಶಾಲಾ ಕೊಠಡಿಗಳ ನಿರ್ಮಾಣವಾಗುತ್ತಿವೆ. ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ನಾಲ್ಕು ಸಾವಿರ ಕೊಠಡಿಗಳನ್ನಷ್ಟೇ ನಿರ್ಮಾಣ ಮಾಡಿತ್ತು’ ಎಂದು ಹೇಳಿದರು.

‘ನಮ್ಮ ಸರ್ಕಾರ ಬರೀ ಆದೇಶಗಳನ್ನಷ್ಟೇ ಹೊರಡಿಸಿಲ್ಲ. ಬದಲಾಗಿ, ಅವುಗಳ ಅನುಷ್ಠಾನಕ್ಕೆ ನಿರಂತರ ನಿಗಾ ವಹಿಸಲಾಗಿದ್ದು, ಸಕಾಲಕ್ಕೆ ಹಣವನ್ನೂ ಬಿಡುಗಡೆ ಮಾಡಲಾಗಿದೆ. ಅಧಿಕಾರಿಗಳಿಗೆ ಕೆಲಸ ಹಚ್ಚಿದ್ದೇವೆ’ ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ‘ಮುಂದಿನ ವಾರದಲ್ಲಿ 1–1 ಶಿಕ್ಷಕರ ಆಯ್ಕೆ ಪ್ರಕ್ರಿಯೆ ಜರುಗಲಿದ್ದು, ಡಿಸೆಂಬರ್ ತಿಂಗಳಿಂದ ಹೊಸದಾಗಿ ನೇಮಕಗೊಂಡ ಶಿಕ್ಷಕರು ತರಗತಿಗಳನ್ನು ನಡೆಸಲಿದ್ದಾರೆ. 15 ಸಾವಿರ ಶಿಕ್ಷಕರ ಹುದ್ದೆ ಭರ್ತಿ ಸಂದರ್ಭದಲ್ಲಿ ಅಷ್ಟು ಸಂಖ್ಯೆಯ ಶಿಕ್ಷಕರು ಆಯ್ಕೆಯಾಗದಿದ್ದರೆ, ಮತ್ತೆ ನೇಮಕ ಪ್ರಕ್ರಿಯೆ ನಡೆಸಲಾಗುವುದು’ ಎಂದು ತಿಳಿಸಿದರು.

ಮತ್ತೆ ಕಾಣಿಸಿದ ಪೇಸಿಎಂ ಪೋಸ್ಟರ್: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಗರಕ್ಕೆ ಭೇಟಿ ನೀಡುತ್ತಿದ್ದ ಹಿನ್ನೆಲೆಯಲ್ಲಿ ಕೆಲವರು ಕಲಬುರಗಿಯ ಸಂಗಮೇಶ್ವರ ಕಾಲೊನಿಯಲ್ಲಿ ಪೇಸಿಎಂ ಭಿತ್ತಿಚಿತ್ರಗಳನ್ನು ಅಂಟಿಸಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆ ಮಹಾನಗರ ಪಾಲಿಕೆ ಹಾಗೂ ಪೊಲೀಸರು ಅವುಗಳನ್ನು ತೆರವುಗೊಳಿಸಿದರು.

ಈ ಬಗ್ಗೆ ಬ್ರಹ್ಮಪುರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಡಿಸಿಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ದೇವರ ಹೆಸರಲ್ಲಿ ಮಹಿಳೆಗೆ ಥಳಿತ

ಹುಣಸೂರು (ಮೈಸೂರು ಜಿಲ್ಲೆ): ತಾಲ್ಲೂಕಿನ ಕಿರಂಗೂರು ಗ್ರಾಮದಲ್ಲಿ ಭಾನುವಾರ ಪೂಜಾರಿಯೊಬ್ಬರು ‘ಮೈಮೇಲೆ ದೇವರು ಬಂದಿದೆ’ ಎಂದು ಮಹಿಳೆಗೆ ಬೆತ್ತದಿಂದ ತೀವ್ರವಾಗಿ ಥಳಿಸಿ ಗಾಯಗೊಳಿಸಿದ್ದಾರೆ.

ಪವಿತ್ರಾ ಗಾಯಗೊಂಡ ಮಹಿಳೆ. ಅವರನ್ನು ಇಲ್ಲಿನ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಆ ಗ್ರಾಮದ ಸಿದ್ದಯ್ಯ ಎಂಬುವವರ ಮನೆಯಲ್ಲಿ ಭೈರವೇಶ್ವರ ದೇವರ ಪೂಜೆ ಹಮ್ಮಿಕೊಂಡಿದ್ದರು. ಅಲ್ಲಿಗೆ ಪವಿತ್ರಾ ಪತಿ ನಟರಾಜ್ ಜೊತೆ ತೆರಳಿದ್ದರು. ಹುಣಸೂರು ಗ್ರಾಮಾಂತರ ಠಾಣೆ ಯಲ್ಲಿ ಮೌಢ್ಯ ಪ್ರತಿಬಂಧಕ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ‘ಆರೋಪಿ ತಲೆ ಮರೆಸಿಕೊಂಡಿದ್ದು ಪತ್ತೆಗೆ ಕ್ರಮ ವಹಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಜಿಪಿಎಸ್ ವ್ಯವಸ್ಥೆ ಜಾರಿ: ನಾಲ್ಕು ತಿಂಗಳಲ್ಲಿ 600 ಬಸ್‌ಗಳ ಖರೀದಿ

‘ಸಾರಿಗೆ ಸೌಲಭ್ಯಕ್ಕೆ ನವ ಸ್ಪರ್ಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಂತರ ಸ್ಥಗಿತಗೊಳಿಸಿರುವ ಮಾರ್ಗಗಳಲ್ಲಿ ಬಸ್‌ಗಳನ್ನು ಪುನರಾರಂಭಿಸಿ, ಗ್ರಾಮೀಣ ಪ್ರದೇಶದಲ್ಲಿ ಬಸ್‌ಗಳ ಸೌಲಭ್ಯಗಳಿಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ, ಹಲವು ಮಾರ್ಗಗಳಲ್ಲಿ ಕಡಿಮೆ ಬಸ್‌ಗಳು ಸಂಚರಿಸುತ್ತವೆ, ನೇಮಕಾತಿಗೆ ಕ್ರಮಕೈಗೊಳ್ಳಿ....

ಇಂತಹ ಹಲವಾರು ಪ್ರಶ್ನೆಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(-ಕೆಎಸ್‌ಆರ್‌ಟಿಸಿ) ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಸಮಾಧಾನದಿಂದ ಉತ್ತರಿಸಿದರು.

‘ಪ್ರಜಾವಾಣಿ’ ಕಚೇರಿಯಲ್ಲಿ ಸೋಮವಾರ ನಡೆದ ‘ಫೋನ್ – ಇನ್’ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧೆಡೆಯಿಂದ ದೂರವಾಣಿ ಕರೆ ಮಾಡಿದ ಪ್ರಯಾಣಿಕರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡುವ ಭರವಸೆ ನೀಡಿದರು. ಬಸ್ ಸೌಲಭ್ಯಗಳು ಇಲ್ಲದ ಮಾರ್ಗದಲ್ಲಿ ಶೀಘ್ರದಲ್ಲೇ ಪರಿಹಾರ ಒದಗಿಸುವುದಾಗಿ ತಿಳಿಸಿದರು.

‘ಕೋವಿಡ್‌ನಿಂದ ಆರ್ಥಿಕ ಸಮಸ್ಯೆ ಯಾಯಿತು. ಶೀಘ್ರದಲ್ಲಿ ಹೆಚ್ಚಿನ ಬಸ್ ಸೌಲಭ್ಯ ಕಲ್ಪಿಸುತ್ತೇವೆ. ಡಿಸೇಲ್ ಬಸ್‌ಗಳ ಖರೀದಿಗೆ ₹220 ಕೋಟಿ ಸಾಲ ಪಡೆಯಲು ಸರ್ಕಾರ ಅನುಮೋದನೆ ನೀಡಿದ್ದು, ಮುಂದಿನ ವಾರ ಟೆಂಡರ್ ಕರೆಯಲಾಗುವುದು. ನಾಲ್ಕು ತಿಂಗಳಲ್ಲಿ 600 ಬಸ್‌ಗಳು ದೊರೆಯಲಿವೆ. ಇನ್ನು ಮೂರ್ನಾಲ್ಕು ತಿಂಗಳಲ್ಲಿ ಕೆಎಸ್‌ಆರ್‌ಟಿಸಿಯಲ್ಲಿ ಸಾಕಷ್ಟು ಬದಲಾವಣೆಗಳಲಿದ್ದು, ಪ್ರಯಾಣಿಕರಿಗೆ ಉತ್ತಮ ಸೌಲಭ್ಯಗಳು ದೊರೆಯಲಿವೆ. ಪ್ರಯಾಣಿಕರ ಜತೆ ಸಭೆಗಳನ್ನು ನಡೆಸಿ ಅಗತ್ಯ ಇರುವ ಮಾರ್ಗಗಳಲ್ಲಿ ಬಸ್ ಸೌಲಭ್ಯಗಳನ್ನು ಕಲ್ಪಿಸಲಾಗುವುದು’ ಎಂದು ಅವರು ಹೇಳಿದರು.



‘ಪ್ರಜಾವಾಣಿ’ ಫೋನ್–ಇನ್ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಜತೆ, ಉಪಮುಖ್ಯ ಸಂಚಾರ ವ್ಯವಸ್ಥಾಪಕ ಎಂ. ದೀಪಕ್ ಕುಮಾರ್, ಮುಖ್ಯ ಸಂಚಾರ ವ್ಯವಸ್ಥಾಪಕ ಆ್ಯಂಟನಿ ಜಾರ್ಜ್, ಮುಖ್ಯ ಯಾಂತ್ರಿಕ ಎಂಜಿನಿಯರ್ ಎಂ. ರಮೇಶ್, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಟಿ.ಎಸ್. ಲತಾ, ಸಹಾಯಕ ಸಂಚಾರ ವ್ಯವಸ್ಥಾಪಕ ಜಿ.ಎಸ್. ಅಶ್ವತ್ಥ ರೆಡ್ಡಿ ಇದ್ದರು. – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಫೋನ್–ಇನ್

‘ಎಲೆಕ್ಟ್ರಿಕ್ ಬಸ್’

‘ಹೊಸ ಎಲೆಕ್ಟ್ರಿಕಲ್ ಬಸ್‌ಗಳ ಖರೀದಿ ಆರಂಭವಾಗಿದೆ. ಮೊದಲ ಬಸ್ ಈ ತಿಂಗಳ ಅಂತ್ಯಕ್ಕೆ ದೊರೆಯಲಿದೆ’ ಎಂದು ಅನ್ಬುಕುಮಾರ್ ತಿಳಿಸಿದರು.

‘ಡಿಸೆಂಬರ್ ಅಂತ್ಯಕ್ಕೆ 25 ಎಲೆಕ್ಟ್ರಿಕಲ್ ಬಸ್‌ಗಳು ಸೇರ್ಪಡೆಯಾಗಲಿವೆ. ಜನವರಿ ಅಂತ್ಯಕ್ಕೆ ಮತ್ತೆ 25 ಬಸ್‌ಗಳು ದೊರೆಯಲಿವೆ. ಜನವರಿ 1ಕ್ಕೆ ನಗರಗಳ ನಡುವೆ ಎಲೆಕ್ಟ್ರಿಕಲ್ ಬಸ್‌ಗಳು ಸಂಚರಿಸಲಿವೆ. ದೇಶದಲ್ಲೇ ಸರ್ಕಾರಿ ಸಾರಿಗೆ ನಿಗಮದ ಎಲೆಕ್ಟ್ರಿಕಲ್ ಬಸ್‌ಗಳು ಸಂಚರಿಸುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಪುಣೆ–ಮುಂಬೈ ನಡುವೆ ಖಾಸಗಿ ಸಂಸ್ಥೆಗಳ ಎಲೆಕ್ಟ್ರಿಕಲ್ ಬಸ್‌ಗಳು ಸಂಚರಿಸುತ್ತಿವೆ. ಮಡಿಕೇರಿ, ಚಿತ್ರದುರ್ಗ, ಮೈಸೂರು, ಕೋಲಾರ ನಗರಗಳಿಗೆ ಬಸ್‌ಗಳನ್ನು ಓಡಿಸುವ ಉದ್ದೇಶವಿದೆ’ ಎಂದು ವಿವರಿಸಿದರು.

ಪ್ರಯಾಣಿಕರ ಪ್ರಶ್ನೆಗಳಿಗೆ ವಿ. ಅನ್ಬುಕುಮಾರ್ ನೀಡಿರುವ ಉತ್ತರಗಳ ವಿವರ ಇಲ್ಲಿದೆ:

- ‘ನಿಮ್ಮಲ್ಲಿ ಹೊಸ ಬಸ್‌ಗಳು ಇಲ್ಲ. ಹೇಗೆ ಬಸ್ ಸೌಲಭ್ಯ ಕಲ್ಪಿಸುತ್ತೀರಿ’?

  ತಿಮ್ಮಪ್ಪ, ಹೊಸವನಹಳ್ಳಿ, ನ್ಯಾಮತಿ ತಾಲ್ಲೂಕು

  ನಮ್ಮ ಹತ್ತಿರ ಹೆಚ್ಚುವರಿ ಬಸ್‌ಗಳಿರುತ್ತವೆ. 8200 ಬಸ್‌ಗಳಲ್ಲಿ 7600 ಬಸ್‌ಗಳು ನಿತ್ಯ ಕಾರ್ಯನಿರ್ವಹಿಸುತ್ತವೆ. ಉಳಿದ ಬಸ್‌ಗಳಲ್ಲಿ ಕೆಲವು ದುರಸ್ತಿಯಲ್ಲಿರುತ್ತವೆ. ಇನ್ನುಳಿದ ಬಸ್‌ಗಳನ್ನು ಅಗತ್ಯ ಇರುವ ಮಾರ್ಗಕ್ಕೆ ಬಳಸುತ್ತೇವೆ.

- ವೇತನ ತಾರತಮ್ಯ ಯಾವಾಗ ಸರಿಪಡಿಸಲಾಗುತ್ತದೆ?

  ದಾದಾಪೀರ್, ಧಾರವಾಡ

  ವೇತನ ಪರಿಷ್ಕರಣೆ ಗಮನದಲ್ಲಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆಗಳು ನಡೆಯುತ್ತಿವೆ.

ಕಾರ್ಯಕ್ರಮವನ್ನು ಈ ಲಿಂಕ್‌ಗಳಲ್ಲಿ ವೀಕ್ಷಿಸಿ

https://www.facebook.com/prajavani.net/videos/691244292182830

https://youtu.be/EgjA4N58QUM

- ಅಂತರ್ಜಾಲದಲ್ಲಿ ಬಸ್‌ಗಳ ವೇಳಾಪಟ್ಟಿ ಲಭ್ಯವಾಗಬೇಕು. ಬಸ್‌ಗಳು ಎಲ್ಲಿ ಸಂಚರಿಸುತ್ತಿವೆ ಎನ್ನುವ ವಿವರಗಳು ಪ್ರಯಾಣಿಕರಿಗೆ ಲಭ್ಯವಾಗಬೇಕು

  – **ಅಮೃತಪ್ರಭು,** ಮುಂಬೈ

  ರೈಲುಗಳಲ್ಲಿ ಜಿಪಿಎಸ್ ವ್ಯವಸ್ಥೆ ಇದೆ. ಬಸ್‌ಗಳಲ್ಲಿ ಸದ್ಯ ಜಿಪಿಎಸ್ ನಿಗಾ ವ್ಯವಸ್ಥೆ ಇಲ್ಲ. ಈ ವ್ಯವಸ್ಥೆಯನ್ನು ಅಳವಡಿಸುವ ಪ್ರಯತ್ನದಲ್ಲಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯ ಪ್ರಸ್ತಾವ ಕಳುಹಿಸಿದ್ದೇವೆ. ಮೂರ್ನಾಲ್ಕು ತಿಂಗಳಲ್ಲಿ ಈ ವ್ಯವಸ್ಥೆ ಜಾರಿಯಾಗುವ ಸಾಧ್ಯತೆ ಇದೆ.

- ಚಳ್ಳಕೆರೆ– ಪರಶುರಾಮಪುರ– ಪಿ. ಓಬವ್ವನಹಳ್ಳಿ ಮಾರ್ಗದಲ್ಲಿ ಬಸ್‌ಗಳ ಸೌಲಭ್ಯ ಇಲ್ಲ. ಇದರಿಂದ ತೊಂದರೆಯಾಗುತ್ತಿದೆ.

  – **ಹಾಲರಾಮೇಶ್ವರ,** ಚಿತ್ರದುರ್ಗ

  ಕೋವಿಡ್ ನಂತರ ಕಡಿಮೆ ಆದಾಯ ಇರುವ ಮಾರ್ಗಗಳಲ್ಲಿ ಕೆಲವು ಬಸ್‌ಗಳನ್ನು ಸ್ಥಗಿತಗೊಳಿಸಲಾಗಿತ್ತು. ಸುಮಾರು 600 ಮಾರ್ಗಗಳಲ್ಲಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಬೇಡಿಕೆ ಇರುವ ಮಾರ್ಗಗಳಲ್ಲಿ ಮತ್ತೆ ಸಂಚಾರ ಆರಂಭಿಸುತ್ತೇವೆ.

- 2018ರಲ್ಲಿ ತಾಂತ್ರಿಕ ಸಹಾಯಕ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಈ ಬಗ್ಗೆ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. ದೈಹಿಕ ಪರೀಕ್ಷೆಗೆ ಕಾಯುತ್ತಿದ್ದೇವೆ. ನಾವು ಮನವಿಯನ್ನು ಸಹ ಸಲ್ಲಿಸಿದ್ದೇವೆ.

  –**ಹುಸೇನ್ ಭಟ್ಟ**

  ಕೋವಿಡ್ ನಂತರ ಸಂಸ್ಥೆಯ ಆರ್ಥಿಕತೆ ಇನ್ನೂ ಚೇತರಿಸಿಗೊಂಡಿಲ್ಲ. ಹೀಗಾಗಿ, ಹೊಸ ನೇಮಕಾತಿಗೆ ಅನುಮತಿ ನೀಡಿಲ್ಲ. ಆದರೂ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ.

ಶಿವಕುಮಾರಸ್ವಾಮಿಗೆ ಸುವರ್ಣಶ್ರೀ, ಬಾನಂದೂರುಗೆ ಜಾನಪದ ವಿಭೂತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠ ನೀಡುವ 2022ನೇ ಸಾಲಿನ ಸುವರ್ಣಶ್ರೀ ಪ್ರಶಸ್ತಿಗೆ ಸಂಸ್ಕೃತ ಸಂಶೋಧಕರಾದ ಡಾ. ಶಿವಕುಮಾರಸ್ವಾಮಿ ಹಾಗೂ ಜಾನಪದ ವಿಭೂತಿ ಪ್ರಶಸ್ತಿಗೆ ಜನಪದ ಸಂಗೀತ ಹಾಡುಗಾರ ಬಾನಂದೂರು ಕೆಂಪಯ್ಯ ಅವರನ್ನು ಆಯ್ಕೆ ಮಾಡಲಾಗಿದೆ.

ಸುವರ್ಣಶ್ರೀ ಪ್ರಶಸ್ತಿಯು ₹50 ಸಾವಿರ ನಗದು, ಕಂಚಿನ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ಹೊಂದಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಇದೇ 21ರಂದು ನಡೆಯಲಿದೆ. ಅದೇ ದಿನ ಮಠದ ಶ್ರೀ ಜಗದ್ಗುರು ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯುವ ವೀರಭದ್ರಸ್ವಾಮಿ ಜಾತ್ರಾ ಮಹೋತ್ಸವ, ಜಗದ್ಗುರು ರೇಣುಕಾದಿ ಪಂಚಾಚಾರ್ಯ ಯುಗಮಾನೋತ್ಸವ, ಬಸವಾದಿ ಶಿವಶರಣರ ಮತ್ತು ಪೂಜ್ಯಶ್ರೀ ಸುವರ್ಣಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 21ನೇ ಸಂಸ್ಮರಣೋತ್ಸವ ನಡೆಯಲಿದೆ.



ಸಿ. ಶಿವಕುಮಾರ ಸ್ವಾಮಿ



ಬಾನಂದೂರು ಕೆಂಪಯ್ಯ

ಜಾನಪದ ವಿಭೂತಿ ಪ್ರಶಸ್ತಿಯು ₹ 25 ಸಾವಿರ ನಗದು, ಕಂಚಿನ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯನ್ನು ಒಳಗೊಂಡಿದೆ. ಈ ಇದೇ 20ರ ಭಾನುವಾರ ಸಂಜೆ 6ಕ್ಕೆ ಶ್ರೀಮಠದ ಶ್ರೀ ಜಗದ್ಗುರು ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ನಡೆಯುವ ಜಾನಪದೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಈ ಎರಡೂ ಕಾರ್ಯಕ್ರಮಗಳ ಸಾನಿಧ್ಯವನ್ನು ವಾರಾಣಸಿಯ ಕಾಶಿಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ಮಠದ ಪಟ್ಟಾಧ್ಯಕ್ಷರಾದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ ಎಂದು ಮಠದ ಕಾರ್ಯದರ್ಶಿ ಸಿ. ಬಸವರಾಜು ತಿಳಿಸಿದ್ದಾರೆ.

11 ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಆಡಳಿತ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಎಂ. ಅಬ್ದುಲ್ ಸಲೀಂ, ಬೆಂಗಳೂರಿನ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಮೈಸೂರು ನಗರ ಪೊಲೀಸ್ ಕಮಿಷನರ್ ಚಂದ್ರಗುಪ್ತ ಸೇರಿದಂತೆ 11 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸೋಮವಾರ ಆದೇಶ ಹೊರಡಿಸಲಾಗಿದೆ.

ವರ್ಗಾವಣೆ ವಿವರ: ಎಂ.ಅಬ್ದುಲ್ ಸಲೀಂ– ವಿಶೇಷ ಕಮಿಷನರ್, ಸಂಚಾರ ವಿಭಾಗ, ಬೆಂಗಳೂರು ನಗರ; ಉಮೇಶ್ ಕುಮಾರ್– ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆಡಳಿತ ವಿಭಾಗ, ದೇವಜ್ಯೋತಿ ರೇ– ಐಜಿಪಿ, ಕುಂದುಕೊರತೆ ಮತ್ತು ಮಾನವ ಹಕ್ಕುಗಳ ವಿಭಾಗ; ರಮಣ ಗುಪ್ತ– ಜಂಟಿ ಪೊಲೀಸ್ ಕಮಿಷನರ್, ಗುಪ್ತಚರ ವಿಭಾಗ, ಬೆಂಗಳೂರು ನಗರ; ಬಿ.ಆರ್. ರವಿಕಾಂತೇಗೌಡ– ಡಿಐಜಿ, ಸಿಐಡಿ.

ಬಿ.ಎಸ್. ಲೋಕೇಶ್ ಕುಮಾರ್– ಡಿಐಜಿ, ಬಳ್ಳಾರಿ ವಲಯ, ಚಂದ್ರಗುಪ್ತ– ಡಿಐಜಿ, ಪಶ್ಚಿಮ ವಲಯ, ಮಂಗಳೂರು, ಶರಣಪ್ಪ ಎಸ್.ಡಿ.– ಜಂಟಿ ಕಮಿಷನರ್, ಅಪರಾಧ ವಿಭಾಗ, ಬೆಂಗಳೂರು ನಗರ, ಎಂ.ಎನ್. ಅನುಚೇತ್– ಜಂಟಿ ಕಮಿಷನರ್, ಸಂಚಾರ ವಿಭಾಗ, ಬೆಂಗಳೂರು ನಗರ, ರವಿ ಡಿ. ಚನ್ನಣ್ಣನವರ್– ವ್ಯವಸ್ಥಾಪಕ ನಿರ್ದೇಶಕ, ಕಿಯೋನಿಕ್ಸ್. ಬಿ. ರಮೇಶ್– ಪೊಲೀಸ್ ಕಮಿಷನರ್, ಮೈಸೂರು ನಗರ.

ಗಾಣಿಗ ಗುರುಪೀಠ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಗಾಣಿಗ ಜನಾಂಗದ ಗುರುಪೀಠಕ್ಕೆ ಸರ್ಕಾರದಿಂದ ₹ 5 ಕೋಟಿ ಅನುದಾನ ನೀಡಿದ ಮತ್ತು ವಿಶ್ವ ಗಾಣಿಗರ ಸಮುದಾಯ ಟ್ರಸ್ಟ್‌ಗೆ ಹತ್ತು ಎಕರೆ ಜಮೀನು ಮಂಜೂರು ಮಾಡಿದ ಕ್ರಮವನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ 3 ವಾರಗಳ ಒಳಗೆ ಆಕ್ಷೇಪಣೆ ಸಲ್ಲಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ಪ್ರತಿವಾದಿ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸುವಂತೆ ಆದೇಶಿಸಿ ವಿಚಾರಣೆಯನ್ನು ಡಿ. 7ಕ್ಕೆ ಮುಂದೂಡಿದೆ. ಯಡಿಯೂರಪ್ಪ 2011ರ ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಗಾಣಿಗ ಜನಾಂಗದ ಗುರುಪೀಠಕ್ಕೆ ₹ 5 ಕೋಟಿ ಮೀಸಲಿರಿಸಿದ್ದರು. ವಿಧಾನಪರಿಷತ್ ಮಾಜಿ ಸದಸ್ಯ ಬಿ.ಜೆ ಪುಟ್ಟಸ್ವಾಮಿ, ವಿಶ್ವ ಗಾಣಿಗರ ಸಮುದಾಯ ಟ್ರಸ್ಟ್ ನೋಂದಣಿ ಮಾಡಿಸಿ ಅದಕ್ಕೆ ಅಧ್ಯಕ್ಷರಾಗಿದ್ದರು. ಟ್ರಸ್ಟ್‌ಗೆ ಶೈಕ್ಷಣಿಕ ಉದ್ದೇಶಕ್ಕೆ ದಾಸನಪುರ ಬಳಿ 10 ಎಕರೆ ಗೋಮಾಳ ಜಮೀನನ್ನು ಮಂಜೂರು ಮಾಡಲಾಗಿತ್ತು. ‘ಟ್ರಸ್ಟ್ ಶಿಕ್ಷಣ ಸಂಸ್ಥೆ ಹೊಂದಿರದಿದ್ದರೂ ಜಮೀನು ಮಂಜೂರಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆಗೆ ಆದೇಶಿಸಬೇಕು‘ ಎಂದು ಕೋರಿ ಮಾಹಿತಿ ಹಕ್ಕು ಕಾರ್ಯಕರ್ತ ಎನ್. ಹನುಮೇಗೌಡ ಪಿಐಎಲ್ ಸಲ್ಲಿಸಿದ್ದರು. ನ್ಯಾಯಪೀಠವು ಇದನ್ನು ಸ್ವಯಂಪ್ರೇರಿತ ಪಿಐಎಲ್ ಆಗಿ ಪರಿವರ್ತಿಸಿಕೊಂಡಿದೆ.

ಸಮಯ ಪ್ರಜ್ಞೆಯಿಂದ ಜೀವ ಉಳಿಸಿದ ಮಕ್ಕಳು

ಸಾಹಸ ತೋರಿದ ಮಕ್ಕಳಿಗೆ ‘ಶೌರ್ಯ’ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಯಲ್ಲಿ ಮುಳುಗುತ್ತಿದ್ದ ವೃದ್ಧರೊಬ್ಬರ ರಕ್ಷಿಸಿದ ಬಾಲಕಿ, ತಂದೆ–ತಾಯಿಯ ಪ್ರಾಣ ಉಳಿಸಿದ ಪುತ್ರ, ರೈಲ್ವೆ ಹಳಿಯ ಮೇಲೆ ಬಿದ್ದಿದ್ದ ವೃದ್ಧೆ ರಕ್ಷಿಸಿದ ಬಾಲಕಿ... ಹೀಗೆ ಧೈರ್ಯ, ಸಾಹಸ ಹಾಗೂ ಸಮಯಪ್ರಜ್ಞೆಯಿಂದ ಜೀವ ಕಾಪಾಡಿದ ಮಕ್ಕಳಿಗೆ ಸೋಮವಾರ ನಡೆದ ಮಕ್ಕಳ ದಿನಾಚರಣೆಯಲ್ಲಿ ರಾಜ್ಯಮಟ್ಟದ ‘ಹೊಯ್ಸಳ ಹಾಗೂ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಐವರಿಗೆ ಪುರಸ್ಕಾರ ನೀಡಲಾಯಿತು.

ಭರ್ತಿಯಾಗಿದ್ದ ಕೆರೆಯಲ್ಲಿ 65 ವರ್ಷದ ವ್ಯಕ್ತಿಯೊಬ್ಬರು ಮುಳುಗುತ್ತಿರುವುದನ್ನು ಗಮನಿಸಿದ್ದ ಕೊಡಗು ಜಿಲ್ಲೆ ಗೋಣಿಕೊಪ್ಪಲು ಸೀಗೆತೋಡಿನ ನಮ್ರತಾ ಕೆರೆಗೆ ಜಿಗಿದು ಜೀವ ಉಳಿಸಿದ್ದಳು.

ಶಾಲೆ ಮುಗಿಸಿಕೊಂಡು ಮನೆಗೆ ಬರುತ್ತಿದ್ದಾಗ ಸೀಗೆತೋಡಿನ ಸೇತುವೆ ಬಳಿ ವೃದ್ಧರೊಬ್ಬರು ಮುಳುಗುತ್ತಿರುವುದನ್ನು ಗಮನಿಸಿದ್ದಳು. ತಕ್ಷಣವೇ ಶೂ, ಶಾಲಾ ಬ್ಯಾಗ್ ಅನ್ನು ದಡದಲ್ಲಿಟ್ಟು, ಸಮವಸ್ತ್ರದಲ್ಲೇ ಕೆರೆಗೆ ಹಾರಿ ಅವರನ್ನು ರಕ್ಷಿಸಿದ್ದರು. ಜೊತೆಗಿದ್ದ ಗೆಳತಿಯರು ಊರಿನವರಿಗೆ ವಿಷಯ ತಿಳಿಸಿದ್ದರು. ನಮ್ರತಾ ಗೋಣಿಕೊಪ್ಪಲು ಅರವತ್ತೊಕ್ಲು ಸರ್ವದೈವತಾ ಶಾಲೆಯ ವಿದ್ಯಾರ್ಥಿನಿ.

‘ಬೇಸಿಗೆಯಲ್ಲಿ ಈಜು ತರಬೇತಿ ಪಡೆದ ಕಾರಣಕ್ಕೆ ಅವರ ಜೀವ ಉಳಿಸಲು ಸಾಧ್ಯವಾಯಿತು. ಇಲಾಖೆ ಗುರುತಿಸಿ ಪುರಸ್ಕಾರ ನೀಡಿದ್ದು ಸಂತೋಷ ತಂದಿದೆ’ ಎಂದು ನಮ್ರತಾ ಹರ್ಷ ವ್ಯಕ್ತಪಡಿಸಿದರು.

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ ಊರಗನಹಳ್ಳಿಯ ಪ್ರಾರ್ಥನಾ ತನ್ನ ಸಹೋದರನ ಜೀವ ಕಾಪಾಡಿದ್ದಳು. ಟಿ.ವಿ ಸ್ವಿಚ್ ಬೋರ್ಡ್ ಸ್ಪರ್ಶಿಸಿದ ಪರಿಣಾಮ ವಿದ್ಯುತ್ ಪ್ರವಹಿಸಿ ಸಹೋದರ ನರಳುತ್ತಿದ್ದ. ತಕ್ಷಣ ಎಚ್ಚೆತ್ತ ಪ್ರಾರ್ಥನಾ, ಅವನ ಶರ್ಟ್ ಅನ್ನು ಜೋರಾಗಿ ಎಳೆದು ಪ್ರಾಣ ಕಾಪಾಡಿದ್ದಳು.

ದಾವಣಗೆರೆ ಜಿಲ್ಲೆ ಜಗಳೂರಿನ ಎಂ.ಕೀರ್ತಿ ವಿವೇಕ್ ಸಾಹುಕಾರ್ ಕುಟುಂಬದ ಜತೆಗೆ ಪ್ರಯಾಣಿಸುತ್ತಿದ್ದ ವೇಳೆ ಕಾರು ಹಳ್ಳಕ್ಕೆ ಬಿದ್ದಿತ್ತು. ಕಾರಿನಲ್ಲಿದ್ದ ನೀರಿನ ಮೆಟಲ್ ಬಾಟಲ್‌ನಿಂದ ಕಿಟಕಿ ಒಡೆದು ತಂದೆ, ತಾಯಿಯನ್ನು ಹೊರಗೆ ತಂದಿದ್ದ. ಕೀರ್ತಿ ಕೈಗೂ ಗಾಯವಾಗಿತ್ತು. ಆಂಬುಲೆನ್ಸ್‌ಗೂ ಕರೆ ಮಾಡಿ ಪೋಷಕರನ್ನು ಆಸ್ಪತ್ರೆಗೆ ದಾಖಲಿಸಿ ಅಪಾಯದಿಂದ ಪಾರು ಮಾಡಿದ್ದ.

ಉತ್ತರ ಕನ್ನಡ ಜಿಲ್ಲೆ ಮಾದಕನಳದ ಕೌಶಲ್ಯ, ಜೇಪು ಪಲ್ಟಿ ಹೊಡೆದು ಅಪಾಯಕ್ಕೆ ಸಿಲುಕಿದ್ದ ತಂದೆಯ ಜೀವ ಉಳಿಸಿದ್ದಳು. ಚಿಕ್ಕಮಗಳೂರು ಜಿಲ್ಲೆ ಬೀರೂರಿನ ಕಾವ್ಯ ಚಲಿಸುತ್ತಿದ್ದ ರೈಲಿಗೆ ಸಿಲುಕುವ ಅಪಾಯದಲ್ಲಿದ್ದ ವೃದ್ಧೆಯ ಜೀವ ಉಳಿಸಿದ್ದಳು. ಇವರಿಗೆ ಪ್ರಶಸ್ತಿ ಜೊತೆಗೆ ತಲಾ ₹ 10 ಸಾವಿರ ನಗದು ಹಾಗೂ ಪ್ರಶಸ್ತಿ ನೀಡಲಾಯಿತು.

ಡಾ.ಹುಲಿಕಲ್ ನಟರಾಜ್, ಡಾ.ಪವಿತ್ರಾ, ಭೀಮಣ್ಣ ಮಾರುತಿ, ಗುಂಡಿ ರಮೇಶ್ ಅವರಿಗೆ ಮಕ್ಕಳ ಕಲ್ಯಾಣ ಪ್ರಶಸ್ತಿ ಹಾಗೂ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಚಿತ್ರದುರ್ಗದ ಕಲಾ ಚೈತನ್ಯ ಸೇವಾ ಸಂಸ್ಥೆ, ಹಾಸನ ಜಿಲ್ಲೆಯ ತವರು ಚಾರಿಟಬಲ್ ಟ್ರಸ್ಟ್, ಹಾವೇರಿಯ ಸ್ಪಂದನಾ ವಿಶೇಷ ದತ್ತು ಸ್ವೀಕಾರ ಕೇಂದ್ರ, ಕೊಪ್ಪಳ ಜಿಲ್ಲೆಯ ಇನ್ನರ್‌ವ್ಹೀಲ್ ಕ್ಲಬ್‌ಗೆ ಸಂಘ ಸಂಸ್ಥೆಗಳ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘4 ಸಾವಿರ ಅಂಗನವಾಡಿ ನಿರ್ಮಾಣ’

‘ರಾಜ್ಯ ಸರ್ಕಾರದ ಅನುದಾನದಿಂದ 4,266 ಅಂಗನವಾಡಿ ನಿರ್ಮಾಣ ಮಾಡಲಾಗುತ್ತಿದೆ’ ಎಂದು ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

‘ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಲು ಕೇಂದ್ರ, ರಾಜ್ಯ ಸರ್ಕಾರದ ಸಹಕಾರದಲ್ಲಿ ಹಲವು ಯೋಜನೆ ಅನುಷ್ಠಾನಕ್ಕೆ ತರಲಾಗಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಿಸಲಾಗುತ್ತಿದೆ. ಸಂಕಷ್ಟಕ್ಕೆ ಸಿಲುಕಿದ ಮಕ್ಕಳಿಗೆ ಕಾನೂನು ನೆರವು ಕಲ್ಪಿಸಲಾಗುತ್ತಿದೆ. ಸಮಾಜವು ಮಕ್ಕಳ ಬಗ್ಗೆ ವಿಶೇಷ ಕಾಳಜಿ, ಜಾಗೃತಿ ವಹಿಸಬೇಕು’ ಎಂದು ಕೋರಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ‘ಮಕ್ಕಳು ಶಿಕ್ಷಣದಿಂದ ವಂಚಿತ ಆಗಬಾರದು. ಪ್ರತಿ ಮಗುವಿಗೂ ಉತ್ತಮ ಶಿಕ್ಷಣ ಸಿಗಬೇಕು. ಕ್ರೀಡೆಯಿಂದ ಬೌದ್ಧಿಕ ಹಾಗೂ ಮಾನಸಿಕ ವಿಕಸನ ಆಗಲಿದೆ’ ಎಂದರು. ಶಾಸಕ ರಿಜ್ವಾನ್ ಅರ್ಷದ್, ‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲು ಇಡಬೇಕು. ಮಕ್ಕಳಿಗೆ ಜಾತಿ, ಧರ್ಮದ ಸೋಂಕು ತಗುಲದಂತೆ ಎಚ್ಚರಿಕೆ ವಹಿಸಬೇಕು’ ಎಂದರು.

ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ ಹಾಜರಿದ್ದರು. ಕಾರ್ಯಕ್ರಮದ ಬಳಿಕ ರಾಜ್ಯಪಾಲರ ಜೊತೆಗೆ ಮಕ್ಕಳು ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಮೈಸೂರಿನಲ್ಲಿರುವ ಪ್ರಯಾಣಿಕರ ತಂಗುದಾಣ • ಸಂಸದ ಎಚ್ಚರಿಕೆ ಹಿಂದೆಯೇ ಕಳಶ ಅಳವಡಿಕೆ!

ವಿವಾದಕ್ಕೆ ಎಡೆಯಾದ 'ಗುಂಬಜ್' ವಿನ್ಯಾಸ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ನಿರ್ಮಿಸಿರುವ ಬಸ್ ನಿಲ್ದಾಣದ ಮೇಲಿನ ಗುಮ್ಮಟ (ಗುಂಬಜ್)ದ ಮಾದರಿಯ ವಿನ್ಯಾಸವು ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ, ರಾತ್ರೋರಾತ್ರಿ ಕಳಶಗಳನ್ನು ಹಾಕಲಾಗಿದೆ.

ಮಸೀದಿಯ ಗುಂಬಜ್ ಹೋಲುವಂತೆ ಮಾಡಿದ್ದ ವಿನ್ಯಾಸಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಹಲವು ಚರ್ಚೆಗಳಿಗೂ ಕಾರಣವಾಗಿತ್ತು. 'ಕೃಷ್ಣರಾಜ ಕ್ಷೇತ್ರದಲ್ಲಿ ಮಸೀದಿ ಮಾದರಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ. ಇದೇನು ಭಾರತವೋ, ಪಾಕಿಸ್ತಾನವೋ?' ಎಂಬಿತ್ಯಾದಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗಿತ್ತು. ವಿನ್ಯಾಸದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಬಹಳಷ್ಟು ಮಂದಿ ಪೋಸ್ಟ್‌ಗಳನ್ನು ಹಾಕಿದ್ದರು. ಶೇರ್ ಮಾಡಿದ್ದರು.

ಮುಖ್ಯಾಂಶಗಳು
- ಶಾಸಕರ ಸೂಚನೆಯಂತೆ ನಿರ್ಮಾಣ
- ವಿನ್ಯಾಸಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಸಂಸದ

ಗೋಪುರದಂತೆ ಕಾಣುವುದೆಲ್ಲವೂ ಮುಸ್ಲಿಮರದ್ದು ಎನ್ನುವುದಾದರೆ ಏನು ಮಾಡುವುದು? ಸಂಸದರು ಅದೆಷ್ಟು ಕಟ್ಟಡಗಳನ್ನು ಒಡೆದು ಹಾಕುತ್ತಾರೆಯೋ ಒಡೆಯಲಿ
ತನ್ವೀರ್ ಸೇಠ್, ಶಾಸಕ

ಈ ವಿಷಯವನ್ನು ಸಂಸದ ಪ್ರತಾಪ ಸಿಂಹ, ರಂಗಾಯಣದಲ್ಲಿ ಭಾನುವಾರ ನಡೆದ 'ಟಿಪ್ಪು ನಿಜಕನಸುಗಳು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದರು. 'ಗುತ್ತಿಗೆದಾರರೊಬ್ಬರು ಮಸೀದಿ ಗುಂಬಜ್ ಹೋಲುವಂತೆ ಬಸ್ ನಿಲ್ದಾಣ ನಿರ್ಮಿಸಿದ್ದಾರೆ.



ಮೈಸೂರಿನ ಊಟಿ ರಸ್ತೆಯಲ್ಲಿ ಜೆಎಸ್‌ಎಸ್ ಕಾಲೇಜು ಬಳಿ ನೂತನವಾಗಿ ನಿರ್ಮಿಸಿರುವ ಬಸ್ ನಿಲ್ದಾಣ/ ಪ್ರಜಾವಾಣಿ ಚಿತ್ರ

ಇದನ್ನು ಬದಲಿಸಲು 3 ದಿನ ಗಡುವು ನೀಡಿದ್ದೇನೆ. ಬದಲಿಸದಿದ್ದರೆ, ಜೆಸಿಬಿ ತರಿಸಿ ಕೆಡವಿಸುತ್ತೇನೆ' ಎಂದು ಎಚ್ಚರಿದ್ದರು. ಈ ಹಿನ್ನೆಲೆಯಲ್ಲಿ, ಗುಮ್ಮಟದ ವಿನ್ಯಾಸದ ಮೇಲೆ ಕಳಶಗಳನ್ನು ರಾತ್ರೋರಾತ್ರಿ ಜೋಡಿಸಿ, ಹಿಂದೂ ಧಾರ್ಮಿಕ ಅಸ್ಮಿತೆಯ ರೂಪವನ್ನು ನೀಡಲು ಪ್ರಯತ್ನಿಸಲಾಗಿದೆ! ಒಳ ಭಾಗದಲ್ಲಿ ಅರಮನೆ, ರಾಮದಾಸ್ ಹಾಗೂ ಚಾಮುಂಡೇಶ್ವರಿ ದೇವಸ್ಥಾನದ ಗೋಪುರದ ಫೋಟೊಗಳಿವೆ.

ಗುಂಬಜ್ ಅಲ್ಲ: 'ಬಸ್ ನಿಲ್ದಾಣದ ಮೇಲ್ಭಾಗದಲ್ಲಿ ನಿರ್ಮಿಸಿರುವುದು ಅರಮನೆಯ ಮಾದರಿಯ ಗೋಪುರವೇ ಹೊರತು, ಗುಂಬಜ್ ಅಲ್ಲ. ಶಾಸಕರೇ ಮುತುವರ್ಜಿ ವಹಿಸಿ ಈ ಮಾದರಿ ನಿರ್ಮಾಣಕ್ಕೆ ಕ್ರಮ ವಹಿಸಿದ್ದಾರೆ' ಎಂದು ಬಸ್ ನಿಲ್ದಾಣ ನಿರ್ಮಿಸಿದ ಕೆಆರ್‌ಡಿಎಲ್ ಎಂಜಿನಿಯರ್ ತಿಪ್ಪಾರೆಡ್ಡಿ ಸ್ಪಷ್ಟಪಡಿಸಿದರು.

'ಶಾಸಕರ ಅನುದಾನದಲ್ಲಿ ₹10 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಮೂಲ ವಿನ್ಯಾಸದಲ್ಲಿ ಚಾವಣಿಯ ಮೇಲೆ ಯಾವುದೇ ಆಕೃತಿ ರಚಿಸುವ ಯೋಜನೆ ಇರಲಿಲ್ಲ. ಶಾಸಕರು ಪರಿಚಯಸ್ಥ ಗುತ್ತಿಗೆದಾರರಿಂದ ಅರಮನೆಯಂತೆ ಗೋಪುರ ನಿರ್ಮಿಸಿದ್ದಾರೆ. ಇದಕ್ಕೂ ನಮಗೂ ಸಂಬಂಧವಿಲ್ಲ' ಎಂದು ತಿಳಿಸಿದರು.

'ಆಕರ್ಷಣೆಯ ಉದ್ದೇಶದಿಂದ ಹೊಸ ರೀತಿಯಲ್ಲಿ ನಿರ್ಮಿಸಲಾಗಿದೆ. ಕೆಲವರು ತಪ್ಪಾಗಿ ಅರ್ಥೈಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹರಡುತ್ತಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಅಕ್ಟೋಬರ್‌ನಲ್ಲಿ ನಿಲ್ದಾಣದ ಕಾಮಗಾರಿ ಮುಗಿದಿದ್ದು, ಬಳಿಕ ಗೋಪುರ ನಿರ್ಮಿಸಲಾಗಿದೆ. ಅಧಿಕೃತವಾಗಿ ಉದ್ಘಾಟನೆಯಾಗಿಲ್ಲ. ಪ್ರತಿಕ್ರಿಯೆಗೆ ಶಾಸಕ ಎಸ್.ಎ.ರಾಮದಾಸ್ ಅವರು ಕರೆ ಸ್ವೀಕರಿಸಲಿಲ್ಲ.

ಮಕ್ಕಳ ರಕ್ಷಣೆ; ಕಲ್ಯಾಣ ಸಮಿತಿ ಅಧಿಕಾರಿ ವಿಚಾರಣೆಗೆ ಸೂಚನೆ

ಮೈಸೂರು: 'ಮಕ್ಕಳ ರಕ್ಷಣೆ ವಿಷಯದಲ್ಲಿ ಚಿತ್ರದುರ್ಗದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕರ್ತವ್ಯಲೋಪ ಎಸಗಿದ್ದು, ಅವರ ವಿಚಾರಣೆ ನಡೆಸಿ, ಏಳು ದಿನದಲ್ಲಿ ವರದಿ ಸಲ್ಲಿಸಬೇಕು' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಸೂಚಿಸಿದೆ.

ಒಡನಾಡಿ ಸೇವಾ ಸಮಿತಿಯ ಸ್ಟ್ಯಾನ್ಲಿ ಕೆ.ವಿ. ಹಾಗೂ ಪರಶು ರಾಮ್ ಎಂ.ಎಲ್. ಬರೆದಿದ್ದ ಪತ್ರ ಆಧರಿಸಿ ಆಯೋಗವು ನ.11ರಂದು ನಿರ್ದೇಶನಾಲಯ ನಿರ್ದೇಶಕರಿಗೆ ಈ ಸೂಚನೆ ನೀಡಿದೆ. ಶಿವಮೂರ್ತಿ ಶರಣರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಸಂತ್ರಸ್ತೆಯರ ತಾಯಿಯ ಹೇಳಿಕೆ ಆಧರಿಸಿ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿದೆ' ಎಂದು ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ತಿಳಿಸಿದ್ದಾರೆ.

'ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ ಮರುಕಳಿಸದಂತೆ ನೋಡಿಕೊಳ್ಳಬೇಕು. ಸಮಗ್ರ ತನಿಖೆ ನಡೆಸಬೇಕು. ಘಟನೆಗೆ ಕಾರಣವಾದ ಅಧಿಕಾರಿ, ಸಿಬ್ಬಂದಿ ವಿಚಾರಣೆಗೆ ಒಳಪಡಿಸಬೇಕು' ಎಂದೂ ಅಲ್ಲಿನ ಎಸ್ಪಿಗೆ ಆದೇಶಿಸಿದ್ದಾರೆ.

ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಅವರಿಗೆ ನೆರವು ನೀಡಿದ ನಗರ ಠಾಣೆಯ ಪೊಲೀಸ್ ಕಾನ್‌ಸ್ಟೆಬಲ್ ರಂಗಸ್ವಾಮಿ ಅವರನ್ನು ಅಮಾನತು ಮಾಡಲಾಗಿದೆ.

ಮಾಜಿ ಆಡಳಿತಾಧಿಕಾರಿಗೆ ನ್ಯಾಯಾಂಗ ಬಂಧನ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಸುಳ್ಳು ಹೇಳಿಕೆ ನೀಡುವಂತೆ ಪೋಕ್ಸೊ ಸಂತ್ರಸ್ತ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ್ದ ಆರೋಪದಡಿ ಬಂಧಿತರಾಗಿರುವ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹಾಗೂ ಶಿಕ್ಷಕ ಬಸವರಾಜೇಂದ್ರ ಅವರನ್ನು ನ.28ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪೊಲೀಸ್ ಕಸ್ಟಡಿ ಅವಧಿ ಮುಗಿದಿದ್ದರಿಂದ ತನಿಖಾ ತಂಡವು ಆರೋಪಿಗಳನ್ನು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಿತು.

'ಜಿಲ್ಲಾ ಕಾರಾಗೃಹದಲ್ಲಿ ಶಿವಮೂರ್ತಿ ಶರಣರನ್ನು ಇರಿಸಿದ್ದು, ಬಸವರಾಜನ್ ಅವರನ್ನು ದಾವಣಗೆರೆ ಅಥವಾ ಬೇರೆ ಜಿಲ್ಲಾ ಕಾರಾಗೃಹದಲ್ಲಿ ವರ್ಗಾಯಿಸಿ ಎಂಬ ಅವರ ಪರ ವಕೀಲರ ಕೋರಿಕೆಯನ್ನು ನ್ಯಾಯಾಧೀಶರು ಮನ್ನಿಸಲಿಲ್ಲ. ಇದೇ ವೇಳೆ ಶಿವಮೂರ್ತಿ ಶರಣರು ಹಾಗೂ ಇತರ ಇಬ್ಬರು ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನ.21ರವರೆಗೆ ವಿಸ್ತರಿಸಿತು.

'ಮಾಧ್ಯಮಗಳಲ್ಲಿ ನಿತ್ಯ ನಮ್ಮ ತೇಜೋವಧೆ ಮಾಡಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಶಿವಮೂರ್ತಿ ಶರಣರು ಕೋರಿದರು. ಇದಕ್ಕೆ ನ್ಯಾಯಾಧೀಶರು 'ವಕೀಲರ ಸಲಹೆ ಪಡೆಯಿರಿ' ಎಂದು ಸಲಹೆ ನೀಡಿದರು.

ನ್ಯಾಯಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು: 'ಶಿವಮೂರ್ತಿ ಶರಣರ ವಿರುದ್ಧ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪೋಕ್ಸೊ ಪ್ರಕರಣ ದಾಖಲಿಸಿರುವ ಸಂತ್ರಸ್ತ ವಿದ್ಯಾರ್ಥಿನಿಯರಿಗೆ ನ್ಯಾಯ ದೊರಕಿಸಬೇಕು' ಎಂದು ಆಗ್ರಹಿಸಿ ಒಡನಾಡಿ ಸಂಸ್ಥೆ ವಿದ್ಯಾರ್ಥಿನಿಯರು, ಯುವತಿಯರು ಸೋಮವಾರ ಪ್ರತಿಭಟನೆ ನಡೆಸಿದರು.

ಸಂಸ್ಥೆಯ ಆವರಣದಲ್ಲಿ ಕಪ್ಪು ಪಟ್ಟಿ ಕಟ್ಟಿಕೊಂಡು, ಉನ್ನತ ಮಟ್ಟದ ತನಿಖೆಗೆ ವಹಿಸದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ₹ 1 ಕೋಟಿ ವಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ ₹ 1 ಕೋಟಿ ಮೊತ್ತದ ಅಪಘಾತ ವಿಮಾ ಯೋಜನೆ ಸೌಲಭ್ಯ ಜಾರಿ ಮಾಡಲಾಗಿದೆ. ದೇಶದಲ್ಲೇ ಇಷ್ಟು ದೊಡ್ಡ ಮೊತ್ತದ ವಿಮೆ ಮಾಡಿಸಿರುವ ಸಾರಿಗೆ ಇಲಾಖೆ ಕೆಎಸ್‌ಆರ್‌ಟಿಸಿ ಎಂದೂ ಸಂಸ್ಥೆ ಹೇಳಿಕೊಂಡಿದೆ.

ಈಗಾಗಲೇ ₹50 ಲಕ್ಷ ವಿಮೆಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಒಡಂಬಡಿಕೆಯಿಂದಾಗಿ ಸಂಸ್ಥೆ ಪ್ರಕಟಿಸಿತ್ತು. ಸೋಮವಾರ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಜತೆ ಮಾಡಿಕೊಂಡ ಒಡಂಬಡಿಕೆಯಿಂದ ಇನ್ನೂ ₹50 ಲಕ್ಷ ಅಪಘಾತ ವಿಮೆ ಸೇರಿದಂತಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕರ್ತವ್ಯನಿರತರಾಗಿದ್ದಾಗ ಆಗಲೀ, ಕರ್ತವ್ಯದಲ್ಲಿ ಇಲ್ಲದಿರುವಾಗ ಆಗಲೀ ನಿಗಮದ ಸಿಬ್ಬಂದಿ ಮೃತಪಟ್ಟರೆ ಅಥವಾ ಶಾಶ್ವತ ತಾತ್ಕಾಲಿಕ ಅಂಗವೈಕಲ್ಯಕ್ಕೆ ತುತ್ತಾದರೆ ₹50 ಲಕ್ಷ ಪರಿಹಾರ ನೀಡುವ ಪ್ರೀಮಿಯಂರಹಿತ ಅಪಘಾತ ಪರಿಹಾರ ವಿಮಾ ಯೋಜನೆಯನ್ನು ನಿಗಮವು ಭಾರತೀಯ ಸ್ಟೇಟ್ ಬ್ಯಾಂಕ್ ಜೊತೆಯಲ್ಲಿ ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ಜಾರಿಗೆ ತಂದಿತ್ತು.

ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ ಲಿ. ಜತೆಗೆ ಒಡಂಬಡಿಕೆ ಮಾಡಿಕೊಂಡಿರುವ ಒಪ್ಪಂದದ ಅನ್ವಯ, ಸಿಬ್ಬಂದಿ ಪ್ರತಿ ತಿಂಗಳು ₹62.50 ಹಾಗೂ ಜಿ.ಎಸ್.ಟಿ ಸೇರಿ ವಾರ್ಷಿಕ ₹885 ಪ್ರೀಮಿಯಂ) ಪಾವತಿಸಬೇಕಾಗುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ನಿಗಮದ ಅಧ್ಯಕ್ಷರಾದ ಎಂ. ಚಂದ್ರಪ್ಪ, 'ಈ ವಿಮಾ ಯೋಜನೆಯು ಕಾರ್ಮಿಕ ಮತ್ತು ಅವರ ಕುಟುಂಬದವರ ಹಿತದೃಷ್ಟಿಯಿಂದ ಜಾರಿಗೊಳಿಸುತ್ತಿರುವ ಅತ್ಯುತ್ತಮವಾದ ಯೋಜನೆಯಾಗಿದೆ' ಎಂದು ಅವರು ಶ್ಲಾಘಿಸಿದರು.

ನಿಗಮದ ಕೇಂದ್ರ ಕಚೇರಿಯಲ್ಲಿ ಶಾಸಕರು ಹಾಗೂ ಅಧ್ಯಕ್ಷರಾದ ಎಂ. ಚಂದ್ರಪ್ಪ ಅವರ ಸಮ್ಮುಖದಲ್ಲಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯ ಪ್ರಧಾನ ವ್ಯವಸ್ಥಾಪಕ ಅಂಗ್ರೂಪ್ ಸೋನಂ ಒಡಂಬಡಿಕೆಗೆ ಸಹಿ ಹಾಕಿದರು.

ಅಮಾನತು

ನವದೆಹಲಿ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜೈಲಿನಲ್ಲಿರುವ ಎಎಪಿ ಸಚಿವ ಸತ್ಯೇಂದ್ರ ಜೈನ್‌ಗೆ ವಿಶೇಷ ಆತಿಥ್ಯ ನೀಡಿದ ಆರೋಪ ಸಂಬಂಧ ತಿಹಾರ್ ಜೈಲಿನ ಸೂಪರಿಂಟೆಂಡೆಂಟ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡಿಕೆಶಿ ಇ.ಡಿ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ದೇಣಿಗೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಸೋಮವಾರ ಮತ್ತೆ ವಿಚಾರಣೆ ನಡೆಸಿದರು.

ಈ ಪ್ರಕರಣದಲ್ಲಿ ನವೆಂಬರ್ 7ರಂದು ವಿಚಾರಣೆಗೆ ಹಾಜರಾಗುವಂತೆ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ. ಸುರೇಶ್ ಅವರಿಗೆ ಇ.ಡಿ.ಸಮನ್ಸ್ ನೀಡಿತ್ತು. ವಿಚಾರಣೆಗೆ ಹಾಜರಾಗಲು ಮೂರು ವಾರಗಳ ಕಾಲಾವಕಾಶ ನೀಡಬೇಕು ಎಂದು ಶಿವಕುಮಾರ್ ಕೋರಿದ್ದರು. ಹಾಗಾಗಿ, ಕಳೆದ ಸೋಮವಾರ ವಿಚಾರಣೆಗೆ ಹಾಜರಾಗಿರಲಿಲ್ಲ. ಇ.ಡಿ. ಮತ್ತೆ ಸಮನ್ಸ್ ನೀಡಿತ್ತು. ಶಿವಕುಮಾರ್ ಅವರನ್ನು ಇ.ಡಿ. ಅಧಿಕಾರಿಗಳು ಸುಮಾರು ಮೂರು ಗಂಟೆ ವಿಚಾರಣೆ ನಡೆಸಿದರು.

ನ್ಯಾಷನಲ್ ಹೆರಾಲ್ಡ್‌ನ ಮಾತೃ ಸಂಸ್ಥೆಯಾದ ಯಂಗ್ ಇಂಡಿಯಾ ಲಿಮಿಟೆಡ್‌ಗೆ ಶಿವಕುಮಾರ್ ಮತ್ತು ಸುರೇಶ್ ದೇಣಿಗೆ ನೀಡಿರುವ ಪ್ರಕರಣ ಇದಾಗಿದೆ.

ವಿಚಾರಣೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಶಿವಕುಮಾರ್, 'ನನ್ನ ಹಾಗೂ ತಮ್ಮನಿಗೆ ಸಂಬಂಧಿಸಿದ ಮತ್ತಷ್ಟು ದಾಖಲೆಗಳನ್ನು ಇ.ಡಿ. ಅಧಿಕಾರಿಗಳು ಕೇಳಿದ್ದಾರೆ. ಮೂರು ದಿನಗಳ ಒಳಗೆ ದಾಖಲೆಗಳನ್ನು ನೀಡುವಂತೆ ಸೂಚಿಸಿದ್ದಾರೆ' ಎಂದರು.

'ಬಿಜೆಪಿಗೆ ಸೇರಲು ಒತ್ತಡ ಇದೆಯಾ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ವಿಚಾರದ ಕುರಿತು ಮಾತನಾಡಲು ಹೋದರೆ ನನ್ನ ತಲೆ ಸುತ್ತುತ್ತದೆ. ಈಗ ಆ ವಿಚಾರದ ಬಗ್ಗೆ ಹೇಳುವುದಿಲ್ಲ' ಎಂದರು.

ಕಾರಜೋಳ ವಿರುದ್ಧ ಟೀಕೆ: ರೈತ ಸೆರೆ

ಬಾಗಲಕೋಟೆ: ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರ ವಿರುದ್ಧ ಫೇಸ್‌ಬುಕ್‌ನಲ್ಲಿ ವ್ಯಂಗ್ಯ ಭರಿತ ಪೋಸ್ಟ್ ಮಾಡಿದ ರೈತರೊಬ್ಬರನ್ನು ನವನಗರ ಠಾಣೆಯ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ. ವಕೀಲ ಶಿವಾನಂದ ಟವಳಿ ದೂರು ನೀಡಿದ್ದರು.

ಮುಧೋಳ ತಾಲ್ಲೂಕಿನ ಶಿರೋಳದ ನಿಂಗಪ್ಪ ಮಟಗಾರ ಬಂಧಿತರು. ಕಬ್ಬು ಬೆಳೆಗಾರರು ಮುಧೋಳದಲ್ಲಿ ಪ್ರತಿಭಟನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಸಚಿವರ ವಿರುದ್ಧ ಪೋಸ್ಟ್ ಮಾಡಿದ್ದರು.

ಸಂಕ್ಷಿಪ್ತ ಸುದ್ದಿ

2ಎ ಮೀಸಲಾತಿ: ವಿಧಾನಸೌಧ ಮುತ್ತಿಗೆ ಡಿ.12ಕ್ಕೆ

ಸಿಂದಗಿ (ವಿಜಯಪುರ): 'ಲಿಂಗಾಯತ ಪಂಚಮಸಾಲಿಗೆ 2ಎ ಮೀಸಲಾತಿ ಸೌಲಭ್ಯಕ್ಕೆ ಒತ್ತಾಯಿಸಿ ಡಿ.12 ರಂದು ಸಮುದಾಯದ ಜನರೊಂದಿಗೆ ವಿಧಾನಸೌಧ ಮುತ್ತಿಗೆ ಹಾಕಲಾಗುವುದು, ಇದು ನಮ್ಮ ಕೊನೆಯ ಹೋರಾಟ' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸರ್ಕಾರಕ್ಕೆ ಎಚ್ಚರಿದರು.

ಇಲ್ಲಿ ನಡೆದ ಮೀಸಲಾತಿ ಹಕ್ಕೊತ್ತಾಯ ಸಮಾವೇಶದ ಸಾನ್ನಿಧ್ಯ ವಹಿಸಿದ್ದ ಅವರು, 'ಎಸ್.ಸಿ, ಎಸ್.ಟಿ ಮೀಸಲಾತಿ ಹೆಚ್ಚಿಸಿ, ಪಂಚಮಸಾಲಿ ಮೀಸಲಾತಿ ಕೈ ಬಿಟ್ಟರು. ಮುಂದಿನ ಸರದಿ ಹಾಲುಮತ ಮತ್ತು ಪಂಚಮಸಾಲಿ ಮೀಸಲಾತಿ ಘೋಷಣೆ. ಸಮಾಜ ಎದುರು ಹಾಕಿಕೊಂಡಿರುವ ಸರ್ಕಾರಕ್ಕೆ ವಿವಿಧ ಚುನಾವಣೆಗಳಲ್ಲಿ ಬಿಸಿ ಮುಟ್ಟಿಸಿದೆ' ಎಂದರು.

'ಇಡಬ್ಲ್ಯುಎಸ್ ಮೀಸಲಾತಿ ಒಪ್ಪಲಾಗದು'

ಮಂಡ್ಯ: 'ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಮೀಸಲಾತಿ ನೀಡಬೇಕು ಎಂದು ಅಂಶ ಸಂವಿಧಾನದಲ್ಲಿಲ್ಲ. ಹೀಗಾಗಿ ಅವರಿಗೆ ಶೇ 10ರಷ್ಟು ಮೀಸಲಾತಿ ನೀಡುವ ಸಂವಿಧಾನದ ತಿದ್ದುಪಡಿ ಒಪ್ಪಲು ಸಾಧ್ಯವಿಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಸುಪ್ರೀಂ ಕೋರ್ಟ್ ತೀರ್ಪು ಅನ್ನು ಈಗ ಪುನರ್ ಪರಿಶೀಲಿಸುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ' ಎಂದರು.

'ದುರಾಸೆಯ ರೋಗಕ್ಕೆ ಮದ್ದಿಲ್ಲ'

ಬೆಂಗಳೂರು: 'ಸಮಾಜದ ಬೇರೆ ಬೇರೆ ರೋಗ ಗುಣಪಡಿಸಬಹುದು. ಆದರೆ, ದುರಾಸೆಯ ರೋಗಕ್ಕೆ ಮಾತ್ರ ಮದ್ದಿಲ್ಲ' ಎಂದು ನಿವೃತ್ತ ಲೋಕಾಯುಕ್ತ ಸಂತೋಷ ಹೆಗ್ಡೆ ಹೇಳಿದರು.

ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ಸಂಗೀತ ಕನ್ನಡ ವಿಭಾಗ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಡಿ.ವಿ. ಮಂಗಳಾ ರಾಜ್ಯಮಟ್ಟದ ಕವನ ಸ್ಪರ್ಧೆಯ ಬಹುಮಾನ ವಿತರಿಸಿ ಅವರು ಮಾತನಾಡಿದರು. 'ಪ್ರಾಮಾಣಿಕ ಮತ್ತು ಮೌಲ್ಯಯುತ ಸಮಾಜ ಜವಾಬ್ದಾರಿ ನಿಮ್ಮಂತಹ ಯುವಜನರ ಮೇಲಿದೆ. ನಿಮ್ಮ ಮುಂದಿನ ಬದುಕು ನಿಮ್ಮ ಮಕ್ಕಳ ಭವಿಷ್ಯಕ್ಕಾಗಿ ಉತ್ತಮ ಸಮಾಜ ನಿರ್ಮಾಣ ಆಗಬೇಕಿದೆ. ಅದಕ್ಕಾಗಿ ದುರಾಸೆ ಎಂಬ ರೋಗವನ್ನು ತೃಪ್ತಿ ಎಂಬ ಮದ್ದಿನಿಂದ ಗುಣಪಡಿಸಬೇಕಿದೆ. ಮಾನವೀಯ ಮೌಲ್ಯ ಅಳವಡಿಸಿಕೊಳ್ಳಬೇಕಿದೆ' ಎಂದರು. ಸಂಗೀತ ವಿಭಾಗದ ಮುಖ್ಯಸ್ಥೆ ಡಾ.ಸಂಧ್ಯಾ ಹೆಗಡೆ, ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಅಲೀಶ್ ಬಾಬು, ವಿಭಾಗದ ಡಾ.ಲೀಲಾವತಿ ಹಾಜರಿದ್ದರು.

ಬೆಸ್ಕಾಂ ಮಾಹಿತಿ ಪಡೆದ ಬಿಬಿಎಂಪಿ: ವಾಣಿಜ್ಯ ಬಳಕೆ ಕಟ್ಟಡಕ್ಕೆ ವಸತಿ ತೆರಿಗೆ ಪಾವತಿ

ವಂಚಕರಿಂದ ₹130 ಕೋಟಿ ಸಂಗ್ರಹ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ ಆಸ್ತಿ ವಿವರವನ್ನು ತಪ್ಪಾಗಿ ನಮೂದಿಸಿ ತೆರಿಗೆ ವಂಚಿಸುತ್ತಿರುವವರನ್ನು ಪತ್ತೆಹಚ್ಚಿ, ಕ್ರಮ ಕೈಗೊಳ್ಳುವ ಅಭಿಯಾನವನ್ನು ಬಿಬಿಎಂಪಿ ಆರಂಭಿಸಿದೆ. ಈ ಮೂಲಕ ಸುಮಾರು ₹130 ಕೋಟಿ ಹೆಚ್ಚುವರಿ ತೆರಿಗೆಯನ್ನು ಈವರೆಗೆ ಸಂಗ್ರಹಿಸಲಾಗಿದೆ.

ಬೆಸ್ಕಾಂ ವಿದ್ಯುತ್ ಬಿಲ್ ಆಧರಿಸಿ ಆಸ್ತಿ ತೆರಿಗೆಯನ್ನು ಅದರೊಂದಿಗೆ ಪರಿಶೀಲಿಸಲಾಗುತ್ತಿದೆ. 20 ಸಾವಿರಕ್ಕೂ ಹೆಚ್ಚು ಆಸ್ತಿಗಳ ತೆರಿಗೆ ಪ್ರಕರಣದಲ್ಲಿ ಕಡಿಮೆ ತೆರಿಗೆ ಪಾವತಿಯಾಗುತ್ತಿರುವುದು ಕಂಡುಬಂದಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ವ್ಯವಸ್ಥೆ ಜಾರಿಯಲ್ಲಿ ಇದರಂತೆ ಆಸ್ತಿ ಮಾಲೀಕರು ಸಲ್ಲಿಸುವ ದಾಖಲೆಯಂತೆ ತೆರಿಗೆ ನಿರ್ಧರಿಸಲಾಗುತ್ತದೆ. ಇದರಲ್ಲಿ ಹಲವು ರೀತಿಯ ತಪ್ಪು ಮಾಹಿತಿ ಇದ್ದು, ವಾಣಿಜ್ಯ ಬಳಕೆಯಲ್ಲಿರುವ ಆಸ್ತಿಗೆ ವಸತಿ ತೆರಿಗೆ ಪಾವತಿಸಲಾಗುತ್ತಿದೆ.

'ಬೆಸ್ಕಾಂನಿಂದ ನಾವು ಡೇಟಾ ತೆಗೆದುಕೊಂಡಿದ್ದೇವೆ. ಸುಮಾರು 25 ಸಾವಿರ ಆಸ್ತಿಗಳ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಇವುಗಳನ್ನು ಆಸ್ತಿ ತೆರಿಗೆಯೊಂದಿಗೆ ಪರಿಶೀಲಿಸಿದ್ದೇವೆ. ವಸತಿ ಕಟ್ಟಡ ಎಂದು ಆಸ್ತಿ ತೆರಿಗೆ ಪಾವತಿಸಲಾಗುತ್ತಿದೆ. ಆದರೆ, ಬೆಸ್ಕಾಂನಿಂದ ವಾಣಿಜ್ಯ ಸಂಪರ್ಕ ಪಡೆದಿದ್ದಾರೆ. ಇದು ಆಸ್ತಿ ತೆರಿಗೆಯನ್ನು ವಂಚಿಸಿದಂತಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ದೀಪಕ್ ತಿಳಿಸಿದರು.

'ಪ್ರಥಮ ಹಂತವಾಗಿ [illegible] ನಾವು ಬೆಸ್ಕಾಂನಿಂದ ವಾಣಿಜ್ಯ ಬಳಕೆಯ ವಿದ್ಯುತ್ ಸಂಪರ್ಕವನ್ನು ಯಾರಿಗೆ ನೀಡಿದ್ದಾರೆ ಎಂಬ ಮೂಲ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಈ ಸಂಪರ್ಕದ ಕಟ್ಟಡದವರು ವಸತಿ ಅಥವಾ ವಾಣಿಜ್ಯ ಆಸ್ತಿ ತೆರಿಗೆ ಯಾವುದನ್ನು ಪಾವತಿಸುತ್ತಿದ್ದಾರೆ ಎಂದು ಪರಿಶೀಲಿಸಲಾಗಿದೆ. ನಮಗೆ ಸಾಕಷ್ಟು ವ್ಯತ್ಯಾಸ ಕಂಡುಬಂದಿದ್ದು, ಸುಮಾರು ₹130 ಕೋಟಿ ಹೆಚ್ಚು ಆಸ್ತಿ ತೆರಿಗೆ ಈ ಪ್ರಕ್ರಿಯೆಯಿಂದಲೇ ಪಾವತಿ ಮಾಡಿಸಿಕೊಳ್ಳಲಾಗಿದೆ' ಎಂದರು.

'ವಸತಿ ದರದಲ್ಲಿ ಆಸ್ತಿ ತೆರಿಗೆ ಮಾಡುತ್ತಿದ್ದು, ವಾಣಿಜ್ಯ ಬಳಕೆಯಾಗುತ್ತಿದ್ದರೆ ಆ ಬಗ್ಗೆ ಸ್ಥಳ ಪರಿಶೀಲನೆ ನಡೆಸಲಾಗುತ್ತಿದೆ. ವಾಣಿಜ್ಯ ಬಳಕೆ ಎಂಬುದು ಸಾಬೀತಾದ ಮೇಲೆ ತೆರಿಗೆಯನ್ನು ನಿರ್ಧಾರ ಮಾಡಿ, ಎಷ್ಟು ದಿನಗಳಿಂದ ಪಾವತಿ ಮಾಡಿಲ್ಲವೋ ಅದಕ್ಕೆ ಬಡ್ಡಿ, ದಂಡ ಎಲ್ಲವನ್ನೂ ಹಾಕಿ ಪಾವತಿ ಮಾಡಿಸಿಕೊಳ್ಳಲಾಗುತ್ತಿದೆ' ಎಂದರು.

'ಸುಮಾರು 25 ಸಾವಿರ ಆಸ್ತಿಗಳ ಬಗ್ಗೆ ಬೆಸ್ಕಾಂನಿಂದ ಮಾಹಿತಿ ಪಡೆಯಲಾಗಿದ್ದು, 20 ಸಾವಿರ ಆಸ್ತಿಗಳ ಪರಿಶೀಲನೆ ಆಗಿದೆ. ಇನ್ನುಳಿದ ಐದು ಸಾವಿರದಷ್ಟು ಆಸ್ತಿಗಳ ಪರಿಶೀಲನೆ ಬಾಕಿ ಇದೆ. ಇದು ಮುಗಿದ ಮೇಲೆ ಮುಂದಿನ ಹಂತದಲ್ಲಿ ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಸ್ತಿಗಳ ಪರಿಶೀಲನೆ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ವಸತಿ ಅಥವಾ ವಾಣಿಜ್ಯ ತೆರಿಗೆ ಕುರಿತು ಪರಿಶೀಲನೆ
- ಸ್ಥಳ ಪರಿಶೀಲನೆ ಬಳಿಕ ತೆರಿಗೆ ನಿರ್ಧಾರ
- 25 ಸಾವಿರ ಆಸ್ತಿಗಳ ಬಗ್ಗೆ ಮಾಹಿತಿ ಕಲೆ

ವಲಯವಾರು ಆಸ್ತಿ ತೆರಿಗೆ ಸಂಗ್ರಹ

ವಲಯ	ಮೊತ್ತ (₹ಕೋಟಿಗಳಲ್ಲಿ)
ಮಹದೇವಪುರ	658.47
ಪೂರ್ವ	479.75
ದಕ್ಷಿಣ	405.99
ಪಶ್ಚಿಮ	285.02
ಬೊಮ್ಮನಹಳ್ಳಿ	276.89
ಯಲಹಂಕ	235.22
ಆರ್‌.ಆರ್‌.ನಗರ	178.4
ದಾಸರಹಳ್ಳಿ	76.22
ಒಟ್ಟು	2,595.96

ಅಂಕಿ ಅಂಶ

₹4,189 ಕೋಟಿ — 2022-23 ರಲ್ಲಿ ಆಸ್ತಿ ತೆರಿಗೆಯ ಗುರಿ

₹2,595.86 ಕೋಟಿ — ನ.14ರವರೆಗಿನ ಸಂಗ್ರಹ

ಸುದ್ದಿ 2 ನಿಮಿಷ

'ಸಿದ್ದರಾಮಯ್ಯ ಸೋಲಿಸಲು ಬಿಜೆಪಿ ಜತೆ ಮೈತ್ರಿಯಿಲ್ಲ'

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮನೆಗೆ ಸೋಮವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿಯ ಜೊತೆ ಜೆಡಿಎಸ್ ಕೈಜೋಡಿಸಲಿದೆ ಎಂದು ಕೆಲವರು ವದಂತಿ ಹಬ್ಬಿಸುತ್ತಿದ್ದಾರೆ. ಬಿಜೆಪಿ ಜತೆ ಮೈತ್ರಿ ಕುರಿತು ಯಾವುದೇ ಚರ್ಚೆ ಆಗಿಲ್ಲ. ಮುಂದೆಯೂ ಆಗುವುದಿಲ್ಲ. ಆ ಪಕ್ಷದ ಜತೆ ಮೈತ್ರಿಯ ಪ್ರಶ್ನೆಯೇ ಇಲ್ಲ' ಎಂದರು.

'ಸಿದ್ದರಾಮಯ್ಯ ಕೋಲಾರದಲ್ಲಿ ಸ್ಪರ್ಧಿಸಲಿ ಅಥವಾ ಬೇರೆ ಕ್ಷೇತ್ರದಲ್ಲಿ ಸ್ಪರ್ಧಿಸಲಿ. ನಾವು ಬಿಜೆಪಿ ಜತೆ ಸೇರಿ ಅವರ ವಿರುದ್ಧ ಕುತಂತ್ರ ಮಾಡಬೇಕಿಲ್ಲ. ಬಿಜೆಪಿಯವರ ರೀತಿ ನಾನು ಸುಳ್ಳು ಹೇಳುವುದಿಲ್ಲ. ನಮ್ಮ ಪಕ್ಷದ ಅಭ್ಯರ್ಥಿ ಯಾರು ಎಂಬುದನ್ನು ನಿರ್ಣಯ ಆಗಿದೆ. ಕೋಲಾರದಲ್ಲಿ ನಮಗೆ ಸಮಸ್ಯೆ ಇಲ್ಲ. ಸೋಲಿಸುವುದು, ಗೆಲ್ಲಿಸುವುದು ನಮ್ಮ ಕೈಯಲ್ಲಿ ಇರುವುದಿಲ್ಲ' ಎಂದು ಹೇಳಿದರು.

'ಎಲ್ಲಿ ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತೇವೆ. ವೀರಾವೇಶದ ಮಾತುಗಳನ್ನಾಡುವುದರಿಂದ ಪ್ರಯೋಜನ ಇಲ್ಲ. ಸಿದ್ದರಾಮಯ್ಯ ಅವರನ್ನು ನಾವು ಸೋಲಿಸಬೇಕಿಲ್ಲ. ಅವರ ಪಕ್ಷದವರೇ ಸೋಲಿಸುತ್ತಾರೆ' ಎಂದರು.





ವಿವೇಕಾನಂದ ಕಲಾ ಕೇಂದ್ರ ಏರ್ಪಡಿಸಿದ್ದ ಮಕ್ಕಳ ಸಾಂಸ್ಕೃತಿಕೋತ್ಸವಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರ ಸಂಪರ್ಕಾಧಿಕಾರಿ ಎಸ್‌.ಎನ್‌. ಶಂಕರ್ ಅವರು ಚಾಲನೆ ನೀಡಿದರು

ಮಕ್ಕಳ ದಿನಾಚರಣೆ: ಸಾಂಸ್ಕೃತಿಕ ಸಂಭ್ರಮ

ಬೆಂಗಳೂರು: ರಾಜಧಾನಿಯಲ್ಲಿ ಸೋಮವಾರ ಮಕ್ಕಳ ದಿನಾಚರಣೆ ಸಂಭ್ರಮ ಮೇಳೈಸಿತು.

ಮಕ್ಕಳಿಗೆ ಶಾಲೆಗಳಲ್ಲಿ ಛದ್ಮವೇಷ ಸೇರಿ ವಿವಿಧ ಸ್ಪರ್ಧೆಗಳು ನಡೆದವು. ಸ್ಪರ್ಧೆಯಲ್ಲಿ ಮಕ್ಕಳು ಪಾಲ್ಗೊಂಡು ಖುಷಿಪಟ್ಟರು. ಶಾಲಾ ಅಂಗಳದಲ್ಲಿ ಮಕ್ಕಳ ಕಲರವ ಕೇಳಿಬಂತು. ಶಿಕ್ಷಕರು ಮಕ್ಕಳಿಗೆ ಗುಲಾಬಿ ನೀಡಿ ಸ್ವಾಗತಿಸಿ ಸಿಹಿ ಹಂಚಿದರು. ಕಬ್ಬನ್ ಉದ್ಯಾನದ ಜವಾಹರ ಬಾಲಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧೈರ್ಯ, ಸಾಹಸ ಪ್ರದರ್ಶಿಸಿ ಮಕ್ಕಳಿಗೆ ಶೌರ್ಯ ಪ್ರಶಸ್ತಿ ನೀಡಲಾಯಿತು.

ವಿವೇಕಾನಂದ ಕಲಾ ಕೇಂದ್ರ ಏರ್ಪಡಿಸಿದ್ದ ಮಕ್ಕಳ ಸಾಂಸ್ಕೃತಿಕೋತ್ಸವಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರ ಸಂಪರ್ಕಾಧಿಕಾರಿ ಎಸ್‌.ಎನ್‌. ಶಂಕರ್ ಅವರು ಚಾಲನೆ ನೀಡಿದರು.

ಬಸವನಗುಡಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಈ ಮಕ್ಕಳ ಸಾಂಸ್ಕೃತಿಕೋತ್ಸವದಲ್ಲಿ ಸರ್ಕಾರಿ ಶಾಲಾ ಮಕ್ಕಳು ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಿದರು. ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರಾಂಶುಪಾಲ ನಾಗಣ್ಣ, ಉಪ ಪ್ರಾಂಶುಪಾಲೆ ಎಂ. ಮಾಲಾ, ವಿವೇಕಾನಂದ ಕಲಾ ಕೇಂದ್ರದ ಡಾ.ಶ್ವೇತಾ, ಡಾ.ನಾಗರಾಜ್ ಉಪಸ್ಥಿತರಿದ್ದರು.

'ಬೆಂಗಳೂರು ಟೆಕ್ ಸಮ್ಮಿಟ್'ಗೆ ಸಜ್ಜು

ನಾಳೆಯಿಂದ 3 ದಿನ ಸಮಾವೇಶ • ತಂತ್ರಜ್ಞಾನದಲ್ಲಿ ರಾಜ್ಯಕ್ಕೆ ಪೈಪೋಟಿಯಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ವಿವಿಧ ಮೂಲಸೌಕರ್ಯಗಳ ಸವಾಲುಗಳ ನಡುವೆಯೇ 25ನೇ ವರ್ಷದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ (ಬೆಂಗಳೂರು ಟೆಕ್ ಸಮ್ಮಿಟ್) ಉದ್ಯಾನ ನಗರಿ ಸಜ್ಜಾಗಿದೆ. ಇದೇ 16ರಿಂದ 18 ರವರೆಗೆ ಟೆಕ್ ಸಮ್ಮಿಟ್ ಅರಮನೆ ಮೈದಾನದಲ್ಲಿ ನಡೆಯಲಿದೆ.

ಟೆಕ್ ಸಮ್ಮಿಟ್ ಕುರಿತು ಉನ್ನತ ಶಿಕ್ಷಣ, ಐಟಿ- ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಅವರು 'ಪ್ರಜಾವಾಣಿ' ಜತೆ ಸಂವಾದದಲ್ಲಿ ಮಾತನಾಡಿ, 'ಈ ಬಾರಿಯ ಟೆಕ್ ಸಮ್ಮಿಟ್‌ನಲ್ಲಿ ಬೆಂಗಳೂರು ಬಿಟ್ಟು ರಾಜ್ಯದ ಇತರ ನಗರಗಳಲ್ಲಿ ಉದ್ಯಮಗಳು, ನವೋದ್ಯಮಗಳು ಸ್ಥಾಪನೆ ಆಗುವುದರ ಕಡೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಇದರಿಂದ ಮಾತ್ರ ಕರ್ನಾಟಕ 300 ಶತಕೋಟಿ ಡಾಲರ್ ಮೌಲ್ಯದ ಡಿಜಿಟಲ್ ಆರ್ಥಿಕ ಶಕ್ತಿಯಾಗಿ ಬೆಳೆಯುವ ಗುರಿ ಮುಟ್ಟಲು ಸಾಧ್ಯ' ಎಂದು ಪ್ರತಿಪಾದಿಸಿದರು.

ನಗರದಲ್ಲಿ ಹದಗೆಟ್ಟ ರಸ್ತೆಗಳು ಮತ್ತು ಮಳೆ ಬಂದಾಗ ಪ್ರವಾಹ ಸೃಷ್ಟಿಯಾಗುವ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಹಳೆಯ ಬೆಂಗಳೂರಿಗೂ ಈಗಿನ ಬೆಂಗಳೂರಿಗೂ ಬಹಳ ವ್ಯತ್ಯಾಸವಿದೆ. ನಗರದಲ್ಲಿ ವ್ಯಾಪಕ ಬದಲಾವಣೆಗಳು ಆಗಿವೆ. ಅದೇ ರೀತಿ ಕಳೆದ ಕೆಲವು ವರ್ಷಗಳಲ್ಲಿ ಹಿಂದೆಂದೂ ಕಂಡರಿಯದಷ್ಟು ಮಳೆಯೂ ಆಗುತ್ತಿದೆ. ಆದರೆ, ಅದನ್ನು ನಿಭಾಯಿಸುವ ಪ್ರಮಾಣದ ಮೂಲಸೌಕರ್ಯವನ್ನು ಅಭಿವೃದ್ಧಿ ಆಗಿಲ್ಲ. ಇದು ಪ್ರವಾಹಕ್ಕೆ ಕಾರಣವಾಗಿದೆ ಎಂದು ಅವರು ಹೇಳಿದರು.


ರಾಜ್ಯದಲ್ಲಿ ಐಟಿ–ಬಿಟಿ ಬೆಳವಣಿಗೆ ಯಲ್ಲಿ ಸರ್ಕಾರದ ಹೆಚ್ಚು ಪಾತ್ರವಿಲ್ಲ ಎಂಬುದು ಸರಿಯಲ್ಲ. ಇವೆರಡೂ ಕ್ಷೇತ್ರಗಳ ಬೆಳವಣಿಗೆಗೆ ಆರಂಭದಿಂದಲೂ ಸರ್ಕಾರದ ಕೊಡುಗೆ ಸಾಕಷ್ಟಿದೆ. ಸಾಫ್ಟ್‌ವೇರ್ ರಫ್ತು ಪ್ರಮಾಣ ಹೆಚ್ಚಾಗಲು ಮತ್ತು ಐಟಿ ಸಂಬಂಧಿ ಸೇವೆಗಳಲ್ಲಿ ಕರ್ನಾಟಕ ಪಾಲು ಅತ್ಯಧಿಕವಾಗಲು ಸರ್ಕಾರ ನೀಡಿರುವ ಹಲವು ರಿಯಾಯಿತಿಗಳು ಮತ್ತು ಪ್ರೋತ್ಸಾಹ ಕ್ರಮಗಳು ಹಾಗೂ ನೀತಿಗಳೂ ಮುಖ್ಯ ಕಾರಣ ಎಂದು ಅವರು ಅಭಿಪ್ರಾಯಪಟ್ಟರು.

ಇಲ್ಲಿರುವ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲದ ಕಾರಣಕ್ಕೆ ಬೇರೆ ರಾಜ್ಯಗಳಿಂದ ಕಂಪನಿಗಳು ಕರ್ನಾಟಕಕ್ಕೆ ವಲಸೆ ಬರುತ್ತಿರುವುದು ಮಾತ್ರವಲ್ಲ, ಇಲ್ಲಿಂದ ಬೇರೆ ಕಡೆ ಹೋದ ಕಂಪನಿಗಳೂ ಮರಳಿ ರಾಜ್ಯಕ್ಕೆ ಬರುತ್ತಿವೆ. ತೆಲಂಗಾಣ ಸೇರಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕಕ್ಕೆ ಪೈಪೋಟಿ ನೀಡಲು ಸಾಧ್ಯವೇ ಇಲ್ಲ ಎಂದು ಅಶ್ವತ್ಥ ನಾರಾಯಣ ಹೇಳಿದರು.

ರಾಜ್ಯದಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ತಂತ್ರಜ್ಞಾನದ ಅಭಿವೃದ್ಧಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ತಂತ್ರಜ್ಞಾನದ ಅಭಿವೃದ್ಧಿ ಶೇ 50 ರಷ್ಟು ರಾಜ್ಯದಲ್ಲೇ ಆಗುತ್ತಿದೆ. ಜಗತ್ತಿನ ಕೃಷಿ ಕ್ಷೇತ್ರದ ಅಗತ್ಯವನ್ನು ಪೂರೈಸುವ ತಂತ್ರಜ್ಞಾನಗಳು ಅಭಿವೃದ್ಧಿ ಆಗುತ್ತಿವೆ ಎಂದು ಅವರು ತಿಳಿಸಿದರು.

ಯಾವ ಕ್ಷೇತ್ರದಲ್ಲಿ ರಾಜ್ಯ ದಾಪುಗಾಲು

ಕರ್ನಾಟಕವು ಜೈವಿಕ ತಂತ್ರಜ್ಞಾನ ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್, ಎಲೆಕ್ಟ್ರಿಕಲ್ ವೆಹಿಕಲ್, ರೋಬೋಟಿಕ್ಸ್, ಚಿಪ್ ವಿನ್ಯಾಸ, ಕ್ಲೌಡ್ ಕಂಪ್ಯೂಟಿಂಗ್, ಫಿನ್‌ಟೆಕ್ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿದ್ದು, ಈ ಎಲ್ಲ ವಿಷಯಗಳ ಬಗ್ಗೆ ಟೆಕ್ ಸಮ್ಮಿಟ್‌ನಲ್ಲಿ ಆಯಾ ಕ್ಷೇತ್ರದ ತಜ್ಞರಿಂದ ವಿಷಯ ಮಂಡನೆ ನಡೆಯಲಿದೆ ಎಂದು ಸಚಿವ ಅಶ್ವತ್ಥನಾರಾಯಣ ತಿಳಿಸಿದರು.



ಜಿನೋಮಿಕ್ ಕ್ರಾಂತಿ–2.0 ಮತ್ತು ಅದರ ಪರಿಣಾಮಗಳು, ಬಯೋಫಾರ್ಮಾ ಕ್ಷೇತ್ರದಲ್ಲಿ ಸುವ್ಯವಸ್ಥಿತ ಪೂರೈಕೆ ಸರಪಳಿ, ವಂಶವಾಹಿ ತಿದ್ದುಪಡಿ(ಜೀನ್ ಎಡಿಟಿಂಗ್), ಕೃಷಿ, ಒಂದು ಆರೋಗ್ಯ ಮತ್ತು ಸಾಂಕ್ರಾಮಿಕ ತಡೆಯುವುದು, ಜೈವಿಕ ಉದ್ಯಮ, ಸಿಂಥೆಟಿಕ್ ಬಯಾಲಜಿ, ಭವಿಷ್ಯದ ಜಿನೋಮಿಕ್ ಮೆಡಿಸಿನ್, ಸೆಲ್ ಮತ್ತು ಜೀನ್ ಥೆರಪಿ, ದೇಶೀಯವಾಗಿ ಕಾರ್ಟ್–ಟಿ, ಜೀನ್ ಮತ್ತು ಸ್ಟೆಮ್ ಸೆಲ್ ಥೆರಪಿ ವಿಷಯಗಳ ಕುರಿತು ತಜ್ಞರು ಮಾತನಾಡಲಿದ್ದಾರೆ ಎಂದರು.

BENGALURU TECH SUMMIT 16-18 • NOV 2022 • BANGALORE PALACE ಬೆಂಗಳೂರು ಟೆಕ್ ಸಮ್ಮಿಟ್

'ವಿವೇಕ' ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಮತ್ತಿಕೆರೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಹೆಚ್ಚುವರಿಯಾಗಿ ಇನ್ನೂ ನಾಲ್ಕು ಕೊಠಡಿಗಳನ್ನು ಒದಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ರಾಜ್ಯದ ಸರ್ಕಾರಿ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಒಟ್ಟು 7,601 ಕೊಠಡಿಗಳ ನಿರ್ಮಾಣದ ಉದ್ದೇಶದಿಂದ 'ವಿವೇಕ' ಕಾರ್ಯಕ್ರಮಕ್ಕೆ ಮತ್ತಿಕೆರೆ ಸರ್ಕಾರಿ ಮಾದರಿ ಶಾಲೆಯಲ್ಲಿ ಅವರು ಸೋಮವಾರ ಚಾಲನೆ ನೀಡಿದರು.

ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳನ್ನು ಮೀರಿಸುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ. ಅದರಲ್ಲೂ ಇತ್ತೀಚೆಗೆ ಮುಖ್ಯಮಂತ್ರಿಯಿಂದ ಚಾಲನೆ ಪಡೆದಿರುವ 'ಮಲ್ಲೇಶ್ವರಂ ಶಾಲಾ ಮಾದರಿ'ಯು ಇಡೀ ರಾಜ್ಯದ ಗಮನ ಸೆಳೆಯುವಂತಿದೆ ಎಂದು ನುಡಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ರಾಜ್ಯದಲ್ಲಿ 750 ಸರ್ಕಾರಿ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಇದರ ಜತೆಗೆ ಶೌಚಾಲಯ ನಿರ್ಮಾಣ ಮತ್ತು ದುರಸ್ತಿಗೆ ₹ 250 ಕೋಟಿ ಒದಗಿಸಲಾಗಿದೆ ಎಂದರು. ಮಲ್ಲೇಶ್ವರ ಬಿಇಒ ಉಮಾದೇವಿ ಹಾಜರಿದ್ದರು.

ವಿವಿ ಪ್ರಾಧ್ಯಾಪಕರ ನೇಮಕಕ್ಕೂ ಸಿಇಟಿ

ಬೆಂಗಳೂರು: ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೂ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸುವ ಬಗ್ಗೆ ಉನ್ನತ ಶಿಕ್ಷಣ ಇಲಾಖೆ ಚಿಂತನೆ ನಡೆಸುತ್ತಿದೆ.

ಇದೇ ಪ್ರಥಮ ಬಾರಿ ಇಲಾಖೆ ಇಂತಹ ಕ್ರಮಕೈಗೊಳ್ಳಲು ಮುಂದಾಗಿದೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷರ ನೇತೃತ್ವದಲ್ಲಿ ರಚಿಸಲಾಗಿದ್ದ ಕುಲಪತಿಗಳ ಸಮಿತಿಯು ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಸ್ನಾತಕೋತ್ತರ ಪದವಿ ಜತೆಗೆ ಪಿಎಚ್‌ಡಿ/ಎಂ.ಫಿಲ್ ಮತ್ತು ಎನ್‌ಇಟಿ/ಎಸ್‌ಇಟಿ ಹೊಂದಿದವರು ಸಿಇಟಿಗೆ ಅರ್ಜಿ ಸಲ್ಲಿಸಲು ಅರ್ಹರು.

ಪ್ರತಿಯೊಂದು ವಿಷಯಕ್ಕೆ 50 ಅಂಕಗಳ ಸಿಇಟಿ ನಡೆಯಲಿದೆ. ಈ ಪರೀಕ್ಷೆಯಲ್ಲಿ ಅರ್ಹತೆ ಪಡೆದಿರುವುದು ಎರಡು ವರ್ಷಗಳ ಅವಧಿಗೆ ಇರುತ್ತದೆ ಎಂದು ವಿವರಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಥವಾ ಯಾವುದಾದರೂ ಸಕ್ಷಮ ಪ್ರಾಧಿಕಾರ ಈ ಪರೀಕ್ಷೆಯನ್ನು ನಡೆಸಬಹುದಾಗಿದೆ.

ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸ್ವಾಯತ್ತ ಕಾಲೇಜುಗಳಲ್ಲಿ ಅಂಕಗಳನ್ನು ನೀಡುವಲ್ಲಿ ಹಲವಾರು ವ್ಯತ್ಯಾಸಗಳಿವೆ. ಕೆಲವು ಸಂಸ್ಥೆಗಳಲ್ಲಿ ಕಠಿಣ ಪದ್ಧತಿ ಅನುಸರಿಸಿದರೆ, ಕೆಲವೆಡೆ ಉದಾರವಾಗಿ ಅಂಕಗಳನ್ನು ನೀಡಲಾಗುತ್ತಿದೆ. ಇಂತಹ ತಾರತಮ್ಯಗಳನ್ನು ನಿವಾರಿಸಲು ಸಿಇಟಿ ಅಗತ್ಯವಾಗಿದೆ ಎಂದು ಪ್ರತಿಪಾದಿಸಲಾಗಿದೆ. 'ಒಂದು ಬಾರಿ ಈ ಪದ್ಧತಿ ಅನುಷ್ಠಾನಗೊಂಡರೆ ಸಿಇಟಿಯಲ್ಲಿ ಅರ್ಹರಾದವರು ಮಾತ್ರ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ' ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ ತಿಳಿಸಿದ್ದಾರೆ.

ಲೋಕ ಅದಾಲತ್ ದಾಖಲೆ

ಬೆಂಗಳೂರು: ರಾಜ್ಯದಾದ್ಯಂತ ಇದೇ 12 ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ವ್ಯಾಜ್ಯಪೂರ್ವ ಹಾಗೂ ನ್ಯಾಯಾಲಯಗಳಲ್ಲಿ 14,77,285 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಈವರೆಗಿನ ಲೋಕ ಅದಾಲತ್‌ಗಳಲ್ಲಿ ಇತ್ಯರ್ಥಗೊಂಡ ಪ್ರಕರಣಗಳ ಸಂಖ್ಯೆಯಲ್ಲಿ ಇದು ಹೊಸ ದಾಖಲೆ ಸೃಷ್ಟಿಸಿದೆ.

ಕರ್ನಾಟಕ ರಾಜ್ಯ ಕಾನೂನು ಸೇವಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಈ ಕುರಿತಂತೆ ವಿವರ ನೀಡಿದರು.

'ರಾಜ್ಯದಾದ್ಯಂತ 1,021 ಪೀಠಗಳು ಅದಾಲತ್ ನಡೆಸಿ ಹೈಕೋರ್ಟ್ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇದ್ದ ಒಟ್ಟು 1,76,501 ಹಾಗೂ 13,00,784 ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಸಾರ್ವಜನಿಕರಿಗೆ ₹1,282 ಕೋಟಿ ಪರಿಹಾರ ಕೊಡಿಸಲಾಗಿದೆ' ಎಂದರು.

'ರಾಜಿ ಸಂಧಾನದ ಮೂಲಕ 10,994 ಚೆಕ್ ಬೌನ್ಸ್ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಒಟ್ಟು ₹ 328.94 ಕೋಟಿ ಪರಿಹಾರ ಕೊಡಿಸಲಾಗಿದೆ. ಬೆಂಗಳೂರಿನ ನ್ಯಾಯಾಲಯದಲ್ಲಿ ಬಾಕಿ ಇದ್ದ ಪ್ರಕರಣವೊಂದರಲ್ಲಿ ₹ 32 ಕೋಟಿ ಪರಿಹಾರ ಮೊತ್ತದೊಂದಿಗೆ ಪ್ರಕರಣ ಇತ್ಯರ್ಥಪಡಿಸಲಾಗಿದೆ' ಎಂದು ತಿಳಿಸಿದರು.

ಸೈನ್ಸ್ ಗ್ಯಾಲರಿಗೆ ₹ 51 ಕೋಟಿ ಧನಸಹಾಯ

ಬೆಂಗಳೂರು: ನೂತನ ಸೈನ್ಸ್ ಗ್ಯಾಲರಿಯ(ಎಸ್.ಜಿ.ಬಿ) ಕಟ್ಟಡ ನಿರ್ಮಿಸಲು ಉದ್ಯಮಿಗಳಾದ ಕಿರಣ್ ಮಜುಂದಾರ್ ಶಾ, ರೋಹಿಣಿ ನಿಲೇಕಣಿ ಮತ್ತು ಕ್ರಿಸ್ ಗೋಪಾಲಕೃಷ್ಣನ್ ಸೇರಿ ₹51 ಕೋಟಿ ಧನಸಹಾಯ ನೀಡಿದ್ದಾರೆ.

ಕಟ್ಟಡದಲ್ಲಿ ನೈಸರ್ಗಿಕ ವಿಜ್ಞಾನ ಪ್ರಯೋಗಾಲಯ, ಆಹಾರ ಪ್ರಯೋಗಾಲಯ, ವಸ್ತು ಪ್ರಯೋಗಾಲಯ ಮತ್ತು ಕಾರ್ಯಾಗಾರ, ನ್ಯೂ ಮೀಡಿಯಾ ಪ್ರಯೋಗಾಲಯ, ಬ್ಲ್ಯಾಕ್ ಬಾಕ್ಸ್ ರಂಗಮಂದಿರ ಮತ್ತು ಸಿದ್ಧಾಂತಗಳ ಪ್ರಯೋಗಾಲಯಗಳಿರುತ್ತವೆ.

'ಸಂಶೋಧನೆ ಆಧಾರಿತ ಕಾರ್ಯಗಳು ಈ ಸಂಸ್ಥೆಯಲ್ಲಿ ನಡೆಯಲಿವೆ. ಮುಂದಿನ ವರ್ಷಗಳಲ್ಲಿ ಸಾರ್ವಜನಿಕರಿಗೆ ಮುಕ್ತವಾಗಲಿದೆ. ಸಂಶೋಧನೆ ಆಧಾರಿತ ಕಾರ್ಯಗಳನ್ನು ಹಮ್ಮಿಕೊಳ್ಳಲು ಇದು ಸಹಕಾರಿಯಾಗಲಿದ್ದು, ವಿಶ್ವ ದರ್ಜೆಯ ಮಾದರಿ ಭಾರತೀಯ ಸಂಸ್ಥೆಯನ್ನು ಕಟ್ಟಲಾಗುವುದು' ಎಂದು ಸೈನ್ಸ್ ಗ್ಯಾಲರಿಯ ಸಂಸ್ಥಾಪಕ ನಿರ್ದೇಶಕರಾದ ಡಾ.ಜಾನ್ಹವಿ ಫಾಲ್ಕೆ ತಿಳಿಸಿದರು.

ಆಕಾಶದಲ್ಲೇ ಜೀವ ಉಳಿಸಿದ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ಪ್ರಯಾಣದ ಸಂದರ್ಭದಲ್ಲೇ ಹೃದಯಾಘಾತಕ್ಕೆ ಒಳಗಾದ ವ್ಯಕ್ತಿಗೆ ಸಕಾಲಕ್ಕೆ ಯಶಸ್ವಿ ಚಿಕಿತ್ಸೆ ನೀಡುವ ಮೂಲಕ ವೈದ್ಯರೊಬ್ಬರು ಜೀವ ಉಳಿಸಿದ್ದಾರೆ.

ತಜ್ಞ ವೈದ್ಯ ಡಾ. ವಿಶ್ವರಾಜ್ ವೇಮಲ ರೋಗಿಯನ್ನು ರಕ್ಷಿಸಿದವರು. ಸತತ ಐದು ಗಂಟೆಗಳ ಕಾಲ 43 ವರ್ಷದ ವ್ಯಕ್ತಿಯ (ರೋಗಿಯ ಹೆಸರನ್ನು ವೈದ್ಯರು ಬಹಿರಂಗ ಪಡಿಸಿಲ್ಲ) ಮೇಲೆ ನಿಗಾವಹಿಸಿ ಚಿಕಿತ್ಸೆ ನೀಡಿದ್ದಾರೆ. ನ.12ರಂದು ಲಂಡನ್‌ನಿಂದ ಭಾರತಕ್ಕೆ ತಮ್ಮ ತಾಯಿ ಜತೆ ತೆರಳುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಪ್ರಯಾಣಿಕರು ಮತ್ತು ವಿಮಾನದ ಸಿಬ್ಬಂದಿ ತಮಗೆ ಸಹಕಾರ ನೀಡಿದ್ದಕ್ಕೆ ಡಾ. ವಿಶ್ವರಾಜ್ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

'ಇಡೀ ದೃಶ್ಯವನ್ನು ನೋಡಿ ನನ್ನ ಜತೆಗಿದ್ದ ತಾಯಿ ಕಣ್ಣೀರಾದರು. ಎಐ128 ವಿಮಾನದಲ್ಲಿ ಕಳೆದ ಈ ಕ್ಷಣಗಳು ದುಗುಡದಿಂದ ಕೂಡಿದ್ದವು' ಎಂದು ವಿಶ್ವರಾಜ್ ವಿವರಿಸಿ ಇಡೀ ಘಟನೆಯನ್ನು ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ.

'ಆರಂಭದಲ್ಲಿ ಕರಾಚಿಯಲ್ಲಿ ವಿಮಾನ ಇಳಿಸುವ ಬಗ್ಗೆ ಯೋಚಿಸಲಾಗಿತ್ತು. ಈ ಸ್ಥಳ ವಿಮಾನ ಹಾರಾಟದ ಜಾಗಕ್ಕೆ ಹತ್ತಿರವಾಗಿತ್ತು. ಆದರೆ, ಇದು ಕಾರ್ಯರೂಪಕ್ಕೆ ಬರಲಿಲ್ಲ. ಇದೇ ವೇಳೆ, ರೋಗಿಯ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ಎರಡನೇ ಬಾರಿಗೆ ಹೃದಯಾಘಾತವಾಯಿತು. ಈ ವ್ಯಕ್ತಿಯನ್ನು ಕಳೆದುಕೊಂಡೆ ಎಂದೇ ನಾನು ಕ್ಷಣ ಕಾಲ ಭಾವಿಸಿದ್ದೆ. ಅದೃಷ್ಟವಶಾತ್ ನನ್ನ ಬಳಿ ಹೃದಯಾಘಾತದ ಸಂದರ್ಭದಲ್ಲಿ ತಕ್ಷಣಕ್ಕೆ ಚಿಕಿತ್ಸೆ ನೀಡುವ ಅಟೊಮೆಟೆಡ್ ಎಕ್ಸ್‌ಟರ್ನಲ್ ಡಿಫಿಬ್ರಿಲೇಟರ್ (ಎಇಡಿ) ಇತ್ತು. ಜತೆಗೆ, ವಿಮಾನದಲ್ಲಿ ತುರ್ತು ಪರಿಸ್ಥಿತಿಗಾಗಿ ಇರಿಸಿದ್ದ ವೈದ್ಯಕೀಯ ಔಷಧಗಳನ್ನು ಬಳಸಿದೆ. ಗಗನಸಖಿಯರು ನನ್ನ ಕಾರ್ಯದಲ್ಲಿ ನೆರವಾದರು. ಅದರಲ್ಲೂ ಮಲ್ಲಿಸಾ ಅವರ ಸೇವೆ ಶ್ಲಾಘನೀಯ. ನಾನು ಸೂಚಿಸಿದ ಪ್ರತಿಯೊಂದು ಕಾರ್ಯ ಕೈಗೊಂಡರು. ನರ್ಸ್ ರೀತಿಯಲ್ಲಿ ಅವರು ಕಾರ್ಯನಿರ್ವಹಿಸಿದರು' ಎಂದು ವಿವರಿಸಿದ್ದಾರೆ.

'ಮಂಗಳೂರಿನವರಾದ ಗಗನ ಸಖಿ ಗಿರಿಥಾ ಅವರು ಸಹ ನೆರವಾದರು. ತಂಡದ ಮುಖ್ಯಸ್ಥ ಪ್ರಶಾಂತ್ ಅವರು ಸಿಬ್ಬಂದಿಗೆ ಅಗತ್ಯ ಸೂಚನೆಗಳನ್ನು ನೀಡುತ್ತಿದ್ದರು. ನಂತರ, ವಿಮಾನವು ಮುಂಬೈಗೆ ಬಂದಿಳಿಯಿತು. ರೋಗಿಯ ಆರೋಗ್ಯ ಸ್ಥಿರವಾಗಿತ್ತು. ರೋಗಿಯನ್ನು ತುರ್ತು ನಿಗಾ ಘಟಕದ ತಂಡಕ್ಕೆ ಸಂಪೂರ್ಣ ವಿವರಗಳೊಂದಿಗೆ ಹಸ್ತಾಂತರಿಸಲಾಯಿತು. ಕಣ್ಣೀರು ಹಾಕುತ್ತ ರೋಗಿಯು ನನಗೆ ಧನ್ಯವಾದಗಳನ್ನು ತಿಳಿಸಿದರು. ತನ್ನ ಜೀವವನ್ನು ಉಳಿಸಿದ್ದಕ್ಕಾಗಿ ಇಡೀ ಜೀವಮಾನ ನೆನೆಯುತ್ತೇನೆ. ಈ ಕ್ಷಣಗಳನ್ನು ನಾನು ಎಂದಿಗೂ ಮರೆಯಲು ಸಾಧ್ಯವೇ ಇಲ್ಲ' ಎಂದು ವಿವರಿಸಿದ್ದಾರೆ.

'ಒಂದು ಜೀವವನ್ನು ಉಳಿಸಲು ವಿಮಾನದಲ್ಲಿದ್ದ ವಿವಿಧ ಹಿನ್ನೆಲೆಯಪ್ರಯಾಣಿಕರು ಒಗ್ಗೂಡಿದ್ದು ನನಗೆ ಅದ್ಭುತವೆನಿಸಿತು. ಅರ್ಧದಷ್ಟು ಗಗನಸಖಿಯರು ರೋಗಿಯ ಸೇವೆಯಲ್ಲಿ ನಿರತರಾಗಿದ್ದರೂ ಯಾವುದೇ ಪ್ರಯಾಣಿಕರು ಆಕ್ಷೇಪ ವ್ಯಕ್ತಪಡಿಸಲಿಲ್ಲ. ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟಿದರು. ಅದು ಸಂಭ್ರಮದ ಕ್ಷಣವೂ ಆಗಿತ್ತು. ರೋಗಿಯ ಆರೋಗ್ಯ ಸ್ಥಿರವಾಗಿದೆ ಎಂದು ಕ್ಯಾಪ್ಟನ್ ಘೋಷಿಸಿದ ಬಳಿಕ ಎಲ್ಲರೂ ನನಗೆ ಮತ್ತು ನನ್ನ ತಾಯಿಯನ್ನು ಉತ್ಸಾಹದಿಂದ ಅಭಿನಂದಿಸಿದರು. ಒಟ್ಟಾರೆ, ಇದೊಂದು ಅದ್ಭುತ ಅನುಭವ' ಎಂದು ವಿವರಿಸಿದ್ದಾರೆ.

ಸದ್ಯ ಲಂಡನ್‌ನಲ್ಲಿ ವೈದ್ಯರಾಗಿರುವ ಡಾ. ವಿಶ್ವರಾಜ್ ವೇಮಲ ಅವರು ಬೆಂಗಳೂರಿನಲ್ಲಿ ಅಧ್ಯಯನ ಮಾಡಿದ್ದರು.



ವಿಮಾನದಲ್ಲಿದ್ದ ಸಿಬ್ಬಂದಿ ಜತೆ ಡಾ. ವಿಶ್ವರಾಜ್ ವೇಮಲ

ಚಿತ್ರಾವಳಿ



ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ರೈನ್ ಮೈನ್ ಕನ್ನಡ ಸಂಘ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬೆಂಗಳೂರಿನ ಪೂಜಾ ಚಿರಂತ್ ಹೂಗಾರ್ ಅವರ ತಂಡ ನೃತ್ಯ ಪ್ರದರ್ಶಿಸಿತು



ಮಾಧ್ಯಮ ಕ್ಷೇತ್ರದಲ್ಲಿ ನಾಲ್ಕು ದಶಕಕ್ಕಿಂತ ಹೆಚ್ಚು ಕಾರ್ಯನಿರ್ವಹಿಸಿರುವ ರಾಮಕೃಷ್ಣ ಉಪಾಧ್ಯ ಅವರಿಗೆ ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಎಂ.ವಿ ಕಾಮತ್ ಸಂಸ್ಥಾಪನ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಸಂಕ್ಷಿಪ್ತ ಸುದ್ದಿ

ಸಿಲಿಂಡರ್ ರಿಯಾಯಿತಿಗೆ ಒತ್ತಾಯ

ಬೆಂಗಳೂರು: ವಾಣಿಜ್ಯ ಬಳಕೆಯ ಸಿಲಿಂಡರ್‌ಗಳಿಗೆ ನೀಡುತ್ತಿದ್ದ ರಿಯಾಯಿತಿ ಮುಂದುವರಿಸುವಂತೆ ಐಒಸಿಎಲ್, ಬಿಪಿಸಿಎಲ್ ಹಾಗೂ ಎಚ್‌ಪಿಸಿಎಲ್ ಕಂಪನಿಗಳಿಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಒತ್ತಾಯಿಸಿದೆ.

'ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಮೊದಲೇ ಅಧಿಕವಾಗಿದ್ದು, ಏಕಕಾಲಕ್ಕೆ ಹೆಚ್ಚಿನ ಸಿಲಿಂಡರ್ ಖರೀದಿ ಮಾಡುತ್ತಿದ್ದವರಿಗೆ ರಿಯಾಯಿತಿ ನೀಡಲಾಗುತ್ತಿತ್ತು. ಆದರೆ ನ.8ರಂದು ಇದು ರದ್ದಾಗಿದ್ದು, ಹೋಟೆಲ್ ಉದ್ಯಮಕ್ಕೆ ಹೊಡೆತ ಬಿದ್ದಿದೆ. ಹಿಂದೆ ವಾಣಿಜ್ಯ ಸಿಲಿಂಡರ್‌ಗೆ 200–300 ರಿಯಾಯಿತಿ ಸಿಗುತ್ತಿತ್ತು.ಇದನ್ನು ಮುಂದುವರಿಸುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ. ಒತ್ತಾಯಕ್ಕೆ ಮಣಿಯದಿದ್ದರೆ ಮುಂದಿನ ದಿನಗಳಲ್ಲಿ ಕಾನೂನು ಹೋರಾಟ ಮಾಡಲಾಗುವುದು' ಎಂದು ಸಂಘದ ಅಧ್ಯಕ್ಷ ಪಿ.ಸಿ ರಾವ್ ಎಚ್ಚರಿಕೆ ನೀಡಿದರು.

'ಒಂದು ದೇಶ, ಒಂದು ವಸ್ತು, ಒಂದು ತೆರಿಗೆ ಎಂಬುದು ಜಿಎಸ್‌ಟಿ ನಿಯಮ. ಆದರೆ ಗೃಹ ಬಳಕೆಯ ಎಲ್‌ಪಿಜಿಗೆ ಶೇ 5 ಜಿಎಸ್‌ಟಿ ಇದ್ದರೆ, ವಾಣಿಜ್ಯ ಬಳಕೆಯ ಸಿಲಿಂಡರ್‌ಗೆ ಶೇ 18ರಷ್ಟು ಜಿಎಸ್‌ಟಿ ಇದೆ. ನಮಗೆ ತಾರತಮ್ಯ ಮಾಡಲಾಗುತ್ತಿದೆ. ವಾಣಿಜ್ಯ ಸಿಲಿಂಡರ್ ಜಿಎಸ್‌ಟಿ ಶೇ 5ಕ್ಕೆ ಇಳಿಸಬೇಕು ಎಂದು ಆಗ್ರಹಿಸಿದರು

'ಹೋಟೆಲ್ ಊಟ, ತಿಂಡಿ–ತಿನಿಸುಗಳ ಬೆಲೆಯನ್ನು ಹೆಚ್ಚಿಸುವುದಿಲ್ಲ. ನ.23ರಂದು ಸಭೆ ಕರೆಯಲಾಗಿದ್ದು, ಹೋಟೆಲ್ ಮಾಲೀಕರೊಂದಿಗೆ ಚರ್ಚಿಸಿ, ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಹುಬ್ಬಳ್ಳಿ – ದೆಹಲಿ ವಿಮಾನ ಸೇವೆ

ನವದೆಹಲಿ: ಇಂಡಿಗೊ ವಿಮಾನಯಾನ ಕಂಪನಿಯು ವಾಣಿಜ್ಯ ನಗರಿ ಹುಬ್ಬಳ್ಳಿ ಮತ್ತು ದೆಹಲಿ ನಡುವೆ ಸೋಮವಾರದಿಂದ ನಿತ್ಯ ವಿಮಾನ ಸೇವೆ ಆರಂಭಿಸಿದೆ.

ವಿಮಾನವು ಪ್ರತಿದಿನ ಬೆಳಿಗ್ಗೆ 10ಕ್ಕೆ ದೆಹಲಿಯಿಂದ ಹೊರಟು ಹುಬ್ಬಳ್ಳಿಯನ್ನು ಮಧ್ಯಾಹ್ನ 12.45ಕ್ಕೆ ತಲುಪಲಿದೆ. ಮರಳಿ ಮಧ್ಯಾಹ್ನ 1.15ಕ್ಕೆ ಹುಬ್ಬಳ್ಳಿಯಿಂದ ಹೊರಟು 3.45ಕ್ಕೆ ದೆಹಲಿ ತಲುಪಲಿದೆ.

ಈ ಸೇವೆಯನ್ನು ಉದ್ಘಾಟಿಸಿದ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, 'ಹುಬ್ಬಳ್ಳಿ ವಿಮಾನ ನಿಲ್ದಾಣವು ಉತ್ತರ ಕರ್ನಾಟಕ ಹಾಗೂ ದಕ್ಷಿಣ ಮಹಾರಾಷ್ಟ್ರದ ನಿವಾಸಿಗಳಿಗೆ ಸಂಪರ್ಕ ಸೇತುವಾಗಿ ಕಾರ್ಯನಿರ್ವಹಿಸಲಿದೆ' ಎಂದರು.

'ಹುಬ್ಬಳ್ಳಿ ನಿಲ್ದಾಣದಲ್ಲಿ ಹೊಸ ಟರ್ಮಿನಲ್ ಕಟ್ಟಡ ನಿರ್ಮಿಸಲಾಗಿದೆ. ಐಎಲ್‌ಎಸ್ ವ್ಯವಸ್ಥೆ ಅಳವಡಿಸಲಾಗಿದೆ. ರನ್‌ವೇಯನ್ನು ಮತ್ತಷ್ಟು ವಿಸ್ತರಿಸಲಾಗುತ್ತಿದೆ' ಎಂದರು.

'ರಸ್ತೆ ಗುಂಡಿಗಳಲ್ಲಿ ಗೋಪುರ'

ಬೆಂಗಳೂರು: ರಾಜ್ಯದ ಬಿಜೆಪಿ ಸರ್ಕಾರ ರಸ್ತೆ ಗುಂಡಿಗಳಲ್ಲಿ ಸಂಪತ್ತಿನ ಗೋಪುರ ಕಟ್ಟಿಕೊಳ್ಳುತ್ತಿದ್ದು, ಅದಕ್ಕೆ ಆತ್ಮಸಾಕ್ಷಿ ಎನ್ನುವುದೇ ಇಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಮಂಡ್ಯದಲ್ಲಿ ಕುಮಾರ್ ಎಂಬ ನಿವೃತ್ತ ಯೋಧ ರಸ್ತೆ ಗುಂಡಿಯಿಂದಾಗಿ ಕೆಳಕ್ಕೆ ಬಿದ್ದಾಗ ಲಾರಿ ಮೈಮೇಲೆ ಹರಿದು ಮೃತಪಟ್ಟಿರುವ ಘಟನೆ ಕುರಿತು ಸೋಮವಾರ ಸರಣಿ ಟ್ವೀಟ್‌ಗಳ ಮೂಲಕ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಹೇಳಿಕೆ

'ಮೋದಿ ಸರ್ಕಾರ ದೇಶ ನಾಶ ಮಾಡುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಟ್ಟ ಆಲೋಚನೆಗಳನ್ನು ಬೆಳೆಯಲು ಬಿಟ್ಟರೆ ಅದು ಇಡೀ ವ್ಯವಸ್ಥೆಯನ್ನು ನಾಶ ಮಾಡಲಿದೆ ಎಂದು ಜವಾಹರಲಾಲ್ ನೆಹರೂ ಹೇಳಿದ್ದರು. ಅದರಂತೆ ಮೋದಿ ಸರ್ಕಾರ ಇಂದು ಇಡೀ ದೇಶವನ್ನೇ ನಾಶ ಮಾಡುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ನೆಹರೂ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನೆಹರೂ ಅವರು ವೈಜ್ಞಾನಿಕವಾಗಿ ಆಲೋಚನೆ ಮಾಡಬೇಕು ಎಂದು ವಿಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ದೇಶದ ಬಡತನ, ಹಸಿವಿನ ಬಾಧೆ ನೀಗಿಸಲು ಇರುವ ಅಸ್ತ್ರ ವಿಜ್ಞಾನ ಎಂದು ಹೇಳಿದ್ದರು' ಎಂದರು.

'ಮೂಢನಂಬಿಕೆ, ಅನಕ್ಷರತೆ, ಬಡತನ ನಿರ್ಮೂಲನೆ ವಿಜ್ಞಾನದಿಂದ ಮಾತ್ರ ಸಾಧ್ಯ ಎಂಬ ಸಂದೇಶವನ್ನು ನೆಹರೂ ಕೊಟ್ಟರು. ನರೇಂದ್ರ ಮೋದಿ ಹಾಗೂ ಬಿಜೆಪಿ ದೇಶದಲ್ಲಿ ಅಂಧಕಾರ, ಜಾತಿ, ಮತೀಯ ವಾದವನ್ನು ಪಸರಿಸಿ ದೇಶ ನಾಶ ಮಾಡುತ್ತಿದ್ದಾರೆ. ಈಗ ಸಂಸ್ಕೃತಿಯ ಅರ್ಥವನ್ನೇ ಬದಲಿಸಲಾಗುತ್ತಿದೆ' ಎಂದು ಟೀಕಿಸಿದರು.

ಜನರಿಗೆ ಭ್ರಮನಿರಸನ: 'ಕಾಂಗ್ರೆಸ್ 70 ವರ್ಷದಲ್ಲಿ ಏನು ಮಾಡಿದೆ ಎಂದು ಬಿಜೆಪಿಯವರು ಕೇಳುತ್ತಾರೆ. ದೇಶದ ಅಭಿವೃದ್ಧಿ ಮಾಡಿರುವುದು ಕಾಂಗ್ರೆಸ್. ಕರ್ನಾಟಕ ಶೇ 40 ಕಮಿಷನ್ ಸರ್ಕಾರ ಎಂದು ಇಡೀ ದೇಶ ಮಾತನಾಡುತ್ತಿದೆ. ನೆಹರೂ ಅವರು ಹಗರಣಮುಕ್ತ ಆಡಳಿತ ನೀಡಿದ್ದರು. ಆದರೆ, ಇಂದು ಮೋದಿ ಅವರ ಸರ್ಕಾರ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಭ್ರಷ್ಟವಾಗಿದೆ. ಜನ ಭ್ರಮನಿರಸನರಾಗಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು. ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, 'ನೆಹರೂ ಅವರಲ್ಲಿ ತಂದೆಯನ್ನು ಎಲ್ಲರೂ ಕಾಣುತ್ತಿದ್ದೆವು' ಎಂದು ಸ್ಮರಿಸಿದರು.

ಎನ್‌ಎಸ್‌ಯುಐ ಅಧ್ಯಕ್ಷ ಕೀರ್ತಿ ಗಣೇಶ್ ಮಾತನಾಡಿ, 'ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಮಕ್ಕಳಿಗೆ ಸ್ಕಾಲರ್‌ಶಿಪ್, ಮೊಟ್ಟೆ, ವಿದ್ಯಾಭ್ಯಾಸ ಕಸಿಯುತ್ತಿದೆ. ಸರ್ಕಾರಿ ಶಾಲೆ ಮುಚ್ಚುತ್ತಿದ್ದಾರೆ. ಕೆಲವರಿಗೆ ವಿದ್ಯಾರ್ಥಿವೇತನ ನೀಡಿದರೆ, ಮತ್ತೆ ಕೆಲವರಿಗೆ ನೀಡುತ್ತಿಲ್ಲ. ಪಠ್ಯಪುಸ್ತಕದಲ್ಲಿ ಬದಲಾವಣೆ ತರುತ್ತಿದ್ದಾರೆ. ಈ ಸರ್ಕಾರದ ಇಂಥ ನಿರ್ಧಾರ ವಿರುದ್ಧದ ಹೋರಾಟಕ್ಕೆ ಎಲ್ಲರೂ ಕೈಜೋಡಿಸಬೇಕು' ಎಂದರು.



ಜವಾಹರಲಾಲ್ ನೆಹರೂ ಅವರ ಭಾವಚಿತ್ರಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಮತ್ತು ಕರ್ನಾಟಕ ಪ್ರದೇಶ ಸೇವಾದಳದ ಮುಖ್ಯಸ್ಥ ರಾಮಚಂದ್ರ ಪುಷ್ಪನಮನ ಸಲ್ಲಿಸಿದರು. – ಪ್ರಜಾವಾಣಿ ಚಿತ್ರ

2009ರಲ್ಲಿ ನಡೆದಿದ್ದ ಅಪಘಾತ: ಪರಿಹಾರ ಮೊತ್ತ ₹ 11.39 ಲಕ್ಷದಿಂದ ₹ 44.92ಲಕ್ಷಕ್ಕೆ ಏರಿಕೆ

ಅಪಘಾತ ವಿಮೆ: 4 ಪಟ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಶೇ 65ರಷ್ಟು ಅಂಗವಿಕಲತೆಗೆ ಒಳಗಾದ ಎಂಜಿನಿಯರ್‌ಗೆ ಮೋಟಾರು ವಾಹನ ಕ್ಲೇಮು ನ್ಯಾಯಮಂಡಳಿ ಆದೇಶಿಸಿದ್ದ ₹ 11.39 ಲಕ್ಷ ಪರಿಹಾರವನ್ನು ನಾಲ್ಕು ಪಟ್ಟು ಹೆಚ್ಚಿಸಿ, ಹೈಕೋರ್ಟ್ ತೀರ್ಪು ನೀಡಿದೆ.

'ವಾರ್ಷಿಕ 8ರ ಬಡ್ಡಿ ದರದಲ್ಲಿ ₹ 11,39,340 ರಂತೆ ನೀಡಬೇಕಿದ್ದ ಪರಿಹಾರವನ್ನು ₹ 44,92,140ಕ್ಕೆ ಹೆಚ್ಚಿಸಿದೆ. 2009ರಿಂದ ಪಾವತಿಸಬೇಕಾದ ಬಡ್ಡಿಯನ್ನು ಶೇಕಡಾ 8 ರಿಂದ 6 ಕ್ಕೆ ಇಳಿಸಿ' ತೀರ್ಪು ನೀಡಿದೆ.

ನ್ಯಾಯಮಂಡಳಿಯ ಆದೇಶ ಪ್ರಶ್ನಿಸಿ ಮಂಗಳೂರು ತಾಲ್ಲೂಕಿನ ಮೂಡಬಿದಿರೆ ಶಾಖೆಯ ನ್ಯಾಷನಲ್ ಇನ್ಶೂರೆನ್ಸ್ ಕಂಪನಿಯ ಸಹಾಯಕ ವ್ಯವಸ್ಥಾಪಕ ಸಲ್ಲಿಸಿದ್ದ ಮೇಲ್ಮನವಿ (ಎಂಎಫ್‌ಎ ಸಂಖ್ಯೆ: 8449/2015) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ 2022ರ ಅಕ್ಟೋಬರ್ 19ರಂದು ತೀರ್ಪು ಪ್ರಕಟಿಸಿದೆ.

ಪ್ರಕರಣವೇನು?: ಮೂಡಬಿದಿರೆಯ ಮಾಸ್ತಿಕಟ್ಟೆ ನಿವಾಸಿ ಅಲ್ವಿನ್ ಲೋಬೊ ತಮ್ಮ ಸಹೋದರನ ಜೊತೆ 2009ರ ಮೇ 23ರಂದು ಬೈಕಿನಲ್ಲಿ ಪ್ರಯಾಣಿಸುತ್ತಿದ್ದಾಗ ಎದುರಿನಿಂದ ಬಂದ ಆಟೊ ರಿಕ್ಷಾ ಡಿಕ್ಕಿ ಹೊಡೆದಿತ್ತು. ಇದರ ಪರಿಣಾಮ ಲೋಬೊ ಅವರಿಗೆ ಗಂಭೀರ ಗಾಯಗಳಾಗಿದ್ದವು.

ಪ್ರಕರಣ ನ್ಯಾಯ ಮಂಡಳಿ ಮುಂದೆ ವಿಚಾರಣೆಗೆ ಬಂದಾಗ ವಿಮಾ ಕಂಪನಿ, 'ಬೈಕ್ ಮತ್ತು ರಿಕ್ಷಾ ಮಧ್ಯೆ ಅಪಘಾತ ಸಂಭವಿಸಿಲ್ಲ. ಬೈಕ್ ಸವಾರರು ಆಯ ತಪ್ಪಿ ಬಿದ್ದಿದ್ದಾರೆ. ಅರ್ಜಿದಾರರು ಈ ಘಟನೆಯನ್ನು ತಿರುಚಿದ್ದಾರೆ' ಎಂಬ ವಾದ ಮಂಡಿಸಿತ್ತು.

ಇದನ್ನು ಅಲ್ಲಗಳೆದಿದ್ದ ನ್ಯಾಯ ಮಂಡಳಿ, 'ಅರ್ಜಿದಾರ ಲೋಬೊ ಅಬುಧಾಬಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ತಿಂಗಳಿಗೆ ₹50 ಸಾವಿರ ವೇತನ ಪಡೆಯುತ್ತಿದ್ದಂತಹ ವ್ಯಕ್ತಿಯಾಗಿದ್ದಾರೆ. ಅಪಘಾತ ಸಂಭವಿಸಿದಾಗ ಅವರಿಗೆ 29 ವರ್ಷ ವಯಸ್ಸಾಗಿತ್ತು. ಅಪಘಾತ ಸಂಭವಿಸಿಲ್ಲ ಎಂಬುದಕ್ಕೆ ವಿಮಾ ಕಂಪನಿ ಯಾವ ದಾಖಲೆಯನ್ನೂ ಒದಗಿಸಿಲ್ಲ' ಎಂಬ ಕಾರಣ ನೀಡಿ, ಅಲ್ವಿನ್ ಲೋಬೊ ಅವರಿಗೆ ವಾರ್ಷಿಕ 8ರ ಬಡ್ಡಿ ದರದಲ್ಲಿ ₹ 11,39,340 ಪರಿಹಾರ ನೀಡುವಂತೆ 2015ರ ಜೂನ್ 20ರಂದು ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ವಿಮಾ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್, 'ಅರ್ಜಿದಾರರ ತಲೆಗೆ ತಲೆಗೆ ಗಂಭೀರ ಗಾಯವಾಗಿರುವುದು ದೃಢಪಟ್ಟಿದ್ದು, ಅವರು ಶೇ 65ರಷ್ಟು ಶಾಶ್ವತ ದೈಹಿಕ ಅಂಗವಿಕಲತೆಗೆ ಒಳಗಾಗಿದ್ದಾರೆ. ಆದರೆ, ಯಾವುದೇ ಕಾರಣ ನೀಡದೆ ನ್ಯಾಯಮಂಡಳಿ ಅಂಗವಿಕಲತೆಯ ಪ್ರಮಾಣವನ್ನು ಶೇ 25ಕ್ಕೆ ಇಳಿಸಿದ್ದು, ನ್ಯಾಯಮಂಡಳಿಯ ಆದೇಶವನ್ನು ರದ್ದುಗೊಳಿಸಲು ಯಾವು ದೇ ಆಧಾರ ಇಲ್ಲ' ಎಂದು ಹೇಳಿತ್ತು.

'ಸಂತ್ರಸ್ತರು ಪರಿಹಾರ ಹೆಚ್ಚಳ ಮಾಡುವಂತೆ ಕೋರಿಲ್ಲ. ಆದಾಗ್ಯೂ, ಪರಿಹಾರವನ್ನು ನೀಡುವಾಗ ಸಂತ್ರಸ್ತ ಅಥವಾ ಮೃತರಿಗೆ ಅನ್ಯಾಯವಾಗಿದ್ದರೆ, ಸಿಪಿಸಿ (ಸಿವಿಲ್ ಪ್ರೊಸಿಜರ್ ಕೋಡ್) ನಿಯಮಗಳ ಅನುಸಾರ 41, ನಿಯಮ 33 ಅನ್ನು ಅನ್ವಯಿಸಬಹುದು' ಎಂಬ ಅಭಿಪ್ರಾಯವನ್ನು ಪೀಠ ವ್ಯಕ್ತಪಡಿಸಿದೆ.

ಅನಧಿಕೃತ ಫ್ಲೆಕ್ಸ್: ನ್ಯಾಯಾಂಗ ನಿಂದನೆ ಅರ್ಜಿ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ತಡೆಯುವ ನಿಟ್ಟಿನಲ್ಲಿ ಹೈಕೋರ್ಟ್ ನೀಡಿರುವ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಸಂಪೂರ್ಣ ವಿಫಲವಾಗಿವೆ' ಎಂದು ಆರೋಪಿಸಿ ಹೈಕೋರ್ಟ್‌ಗೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತ ಸಾಯಿದತ್ತಾ ಸಲ್ಲಿಸಿರುವ ಈ ಅರ್ಜಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಆಡಳಿತಾಧಿಕಾರಿಯೂ ಆದ ನಗರಾಭಿವೃದ್ಧಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಅವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಅಳವಡಿಕೆಯಾಗದಂತೆ ತಡೆಯಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಹೈಕೋರ್ಟ್, 2017ರಿಂದಲೂ ಕಾಲಕಾಲಕ್ಕೆ ಅನೇಕ ಆದೇಶಗಳನ್ನು ಹೊರಡಿಸಿದೆ. ಆದರೆ, ಈ ಆದೇಶವನ್ನು ಸಮರ್ಪಕವಾಗಿ ಜಾರಿಗೊಳಿಸಿಲ್ಲ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ಜಾಹೀರಾತು ಫಲಕ ಅಳವಡಿಸಬೇಕಾದರೆ ಸಕ್ಷಮ ಅಧಿಕಾರಿಯಿಂದ ಲಿಖಿತ ಅನುಮತಿ ಪಡೆಯಬೇಕು. ಆದರೆ, ವಿಧಾನಸೌಧದ ಆವರಣ ಸೇರಿ ನಗರದ ವಿವಿಧೆಡೆ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹಾವಳಿ ಹೆಚ್ಚಾಗಿದೆ. ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಮತ್ತು ದಂಡ ವಸೂಲಿ ಮಾಡಲು ಅವಕಾಶವಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ. ಆರೋಪಿಗಳ ವಿರುದ್ಧ ನ್ಯಾಯಾಂಗ ನಿಂದನೆಯಡಿ ಸೂಕ್ತ ಕ್ರಮ ಜರುಗಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಆಪ್ತ ಸಮಾಲೋಚನೆಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಾನೊಬ್ಬ ವಕೀಲೆ. ನನಗೆ ಬಾಲ್ಯ ವಿವಾಹ ಮಾಡಿಸಲಾಗಿತ್ತು. ಪತಿ ಅಮೆರಿಕದ ವಾಷಿಂಗ್ಟನ್ ಡಿಸಿಯಲ್ಲಿ ನೆಲೆ ನಿಂತಿರುವ ಸಾಫ್ಟ್‌ವೇರ್ ಎಂಜಿನಿಯರ್. ಆದರೆ, ನಾನೀಗ ಪರಿತ್ಯಕ್ತೆ. ನನ್ನ 18ನೇ ವಯಸ್ಸಿನಲ್ಲಿ ಐಯುಐ (ಇಂಟ್ರಾ ಯುಟೇರಿಯನ್ ಇನ್ಸೆಮಿನೇಶನ್) ಪದ್ಧತಿ ಮುಖಾಂತರ ಜನಿಸಿದ 20 ವರ್ಷದ ಮಗನಿದ್ದಾನೆ. ಅವನೂ ನನ್ನೊಟ್ಟಿಗಿಲ್ಲ. ನನ್ನ ಮೇಲೆ ಬಾನಾಮತಿ ಪ್ರಯೋಗ ಮಾಡಲಾಗಿದೆ. ಇದರಿಂದ ನನ್ನ ದೇಹದ ಪ್ರಮುಖ ಅಂಗಾಂಗಗಳ ಕಾರ್ಯಕ್ಷಮತೆ ಕುಂಠಿತಗೊಂಡಿದೆ. ಈ ಸಂಬಂಧ ಆಸ್ಪತ್ರೆಗೆ ಹೋದರೆ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ....!

ಇಂತಹ ವಿಲಕ್ಷಣ ಆರೋಪಗಳನ್ನು ಹೊತ್ತ 47 ವರ್ಷದ ಮಹಿಳೆಯೊಬ್ಬರು ಹೈಕೋರ್ಟ್ ಮೆಟ್ಟಿಲೇರಿದ್ದು, 'ನನಗೆ ಸೂಕ್ತ ಚಿಕಿತ್ಸೆ ನೀಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬ ಕೋರಿಕೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮನ್ನಿಸಿದೆ.

'ಅರ್ಜಿದಾರರ ಕೋರಿಕೆಯಂತೆ ಪಾಲಿಗ್ರಾಫ್ ಪರೀಕ್ಷೆಯ ವರದಿ ಅನುಸಾರ ನಾಲ್ಕು ವಾರಗಳ ಒಳಗೆ ಸಂತ್ರಸ್ತ ಮಹಿಳೆಗೆ ಆಪ್ತ ಸಮಾಲೋಚನೆ ಮುಖಾಂತರ ಸೂಕ್ತ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಪ್ರಕರಣವೇನು?: ಅರ್ಜಿದಾರ ಮಹಿಳೆ ಸದ್ಯ ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ವಾಸವಿದ್ದಾರೆ. ಸ್ವಂತ ಮನೆ ಹೊಂದಿದ್ದು, ವಕೀಲೆಯಾಗಿ ಕಾರ್ಯ ನಿರ್ವಹಿಸುತ್ತಿರುವುದಾಗಿ ರಿಟ್ ಅರ್ಜಿಯಲ್ಲಿ ವಿವರಿಸಿದ್ದಾರೆ.

'ನನ್ನ ಪೋಷಕರು ನನಗೆ ಆರನೇ ವಯಸ್ಸಿನಲ್ಲಿ ಬಾಲ್ಯವಿವಾಹ ಮಾಡಿಸಿದರು. ವಿದ್ಯಾಭ್ಯಾಸ ಮುಂದುವರಿಸಿದ ನಾನು ವಿ.ವಿ.ಪುರಂ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿದ್ದೇನೆ. ನನ್ನ 18ನೇ ವಯಸ್ಸಿನಲ್ಲಿ ನನ್ನ ಪತಿಯಿಂದ ಐಯುಐ ಪದ್ಧತಿ ಮುಖೇನ ಒಬ್ಬ ಪುತ್ರನನ್ನು ಪಡೆದಿದ್ದೇನೆ. ಈಗ ಅವನು ನನ್ನ ಅಕ್ಕನ ಜೊತೆಯಲ್ಲಿ ಜೆ.ಪಿ.ನಗರದಲ್ಲಿ ವಾಸವಿದ್ದಾನೆ' ಎಂದು ಅರ್ಜಿದಾರ ಮಹಿಳೆ ತಮ್ಮ ವಿವರ ಬಿಚ್ಚಿಟ್ಟಿದ್ದಾರೆ.

'ನನ್ನ ಪತಿ ಸದ್ಯ ನನ್ನಿಂದ ದೂರವಿದ್ದು, ಅಮೆರಿಕದ ವಾಷಿಂಗ್ಟನ್ ಡಿ.ಸಿಯಲ್ಲಿ ಸಾಫ್ಟ್‌ವೇರ್ ಕಂಪನಿಯೊಂದನ್ನು ನಡೆಸುತ್ತಿದ್ದಾರೆ. ನಾನೀಗ ಪರಿತ್ಯಕ್ತೆ. ದಿಕ್ಕಿಲ್ಲದವಳು. ನನ್ನ ಗಂಡ ಚೆನ್ನೈನವರಾಗಿದ್ದು, ಅವರ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಶ್ರೀವಿದ್ಯಾ ಶ್ಯಾಮಸುಂದರ್ ಎಂಬುವರು ನನ್ನ ಮೇಲೆ ಬಾನಾಮತಿ ಪ್ರಯೋಗ ಮಾಡಿಸಿದ್ದಾರೆ. ಚಿಕ್ಕಂದಿನಿಂದಲೇ ನನಗೆ ಈ ರೀತಿಯ ಮಾಟ ಮಾಡಿಸಿದ ಪರಿಣಾಮ ನನ್ನ ಹೃದಯ, ವಕ್ಷಸ್ಥಳ, ಶ್ವಾಸಕೋಶ ಊನಗೊಂಡಿವೆ' ಎಂದು ಅರ್ಜಿಯಲ್ಲಿ ಆರೋಪಿಸಿದ್ದಾರೆ.

'ನನ್ನ ಸಮಸ್ಯೆಯ ನಿವಾರಣೆಗಾಗಿ ನಾನು ವನಿತಾ ಸಹಾಯವಾಣಿಗೆ ದೂರು ನೀಡಿದ್ದೆ. ಸಹಾಯ ವಾಣಿಯಲ್ಲಿ ನನ್ನ ಅಕ್ಕ ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ. ಇದರಿಂದಾಗಿ ನನಗೆ ದೊರೆಯಬೇಕಾದ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿಲ್ಲ. ಅಂತೆಯೇ, ಸೂಕ್ತ ಚಿಕಿತ್ಸೆಗಾಗಿ ನಾನು ಸರ್ಕಾರಕ್ಕೆ ನೀಡಿದ ಮನವಿಗಳು ವಿಫಲವಾಗಿವೆ. ಆದ್ದರಿಂದ, ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಕಾರ್ಯದರ್ಶಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಹಾಗೂ ಕಾರ್ಯದರ್ಶಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರ ಮಹಿಳೆ ಕೋರಿದ್ದರು.

ಹದಗೆಟ್ಟ ರಸ್ತೆಯಿಂದ ಅಪಘಾತ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಹದಗೆಟ್ಟ ರಸ್ತೆಯಿಂದಾಗಿ ಸೋಮವಾರ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರ ಕುಮಾರ್ (35) ಎಂಬುವವರು ಮೃತಪಟ್ಟಿದ್ದಾರೆ.

ಮಾರಪ್ಪನಪಾಳ್ಯ ನಿವಾಸಿ ಕುಮಾರ್ ಪ್ಲಂಬರ್ ಕೆಲಸ ಮಾಡುತ್ತಿದ್ದರು. ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡಿರುವ ಅಡ್ಡರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ.

'ಕಾಮಗಾರಿಗೆ ಅಗೆದಿದ್ದ ರಸ್ತೆಯನ್ನು ಅವೈಜ್ಞಾನಿಕವಾಗಿ ಮುಚ್ಚಲಾಗಿದೆ. ಇದರಿಂದಾಗಿ ಇಡೀ ರಸ್ತೆ ಹದಗೆಟ್ಟಿದ್ದು, ಗುಂಡಿಗಳೇ ಹೆಚ್ಚಿವೆ. ರಸ್ತೆಯ ಎರಡೂ ಬದಿಗಳಲ್ಲಿ ನೀರು ನಿಂತು, ತಗ್ಗುಗಳು ಬಿದ್ದಿವೆ. ಇಂಥ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಕುಮಾರ್, ಟ್ರ್ಯಾಕ್ಟರ್ ಹಿಂದಿಕ್ಕಲು ಯತ್ನಿಸಿದ್ದರು. ರಸ್ತೆಯ ಬದಿಯಲ್ಲಿದ್ದ ತಗ್ಗುಗಳಿಂದಾಗಿ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು' ಎಂದು ಪೊಲೀಸರು ಹೇಳಿದರು.



ಕುಮಾರ್

'ದ್ವಿಚಕ್ರ ವಾಹನ ಸಮೇತ ರಸ್ತೆಯಲ್ಲಿ ಬಿದ್ದಿದ್ದ ಕುಮಾರ್ ಅವರಿಗೆ ಟ್ರ್ಯಾಕ್ಟರ್‌ನ ಟ್ರ್ಯಾಲಿ ಬಡಿದಿತ್ತು. ಇದರಿಂದಾಗಿ ತೀವ್ರ ಗಾಯಗೊಂಡು ಕುಮಾರ್ ಮೃತಪಟ್ಟಿದ್ದಾರೆ. ಟ್ರ್ಯಾಕ್ಟರ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ನಿತ್ಯವೂ ಅಪಘಾತ: 'ರಾಜ್‌ಕುಮಾರ್ ರಸ್ತೆಗೆ ಹೊಂದಿಕೊಂಡಿರುವ ಎಲ್ಲ ಅಡ್ಡರಸ್ತೆಗಳನ್ನು ಕಾಮಗಾರಿಗೆ ಅಗೆಯಲಾಗಿದೆ. ರಸ್ತೆಗಳು ಹದ ಗೆಟ್ಟಿದ್ದು, ನಿತ್ಯವೂ ಅಪಘಾತ ಸಂಭ ವಿಸುತ್ತಿವೆ' ಎಂದು ಸ್ಥಳೀಯರು ದೂರಿದರು.

'ಟ್ರ್ಯಾಕ್ಟರ್ ಹಿಂದಿಕ್ಕುವ ಸಂದರ್ಭದಲ್ಲಿ ತಗ್ಗಿನಿಂದಾಗಿ ಕುಮಾರ್ ಅವರ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಬಿಬಿಎಂಪಿ ಅಧಿಕಾರಿಗಳು ಹಾಗೂ ಕಾಮಗಾರಿ ನಡೆಸುತ್ತಿದ್ದ ಇಲಾಖೆ ಅಧಿಕಾರಿಗಳೇ ಕುಮಾರ್ ಅವರ ಸಾವಿಗೆ ಕಾರಣ' ಎಂದು ಆರೋಪಿಸಿದರು.

ರಸ್ತೆ ಗುಂಡಿ: ಅಪಘಾತ ಪ್ರಕರಣಗಳು

- **2022 ಅಕ್ಟೋಬರ್ 29:** ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯ ಅಟ್ಟೂರು ಮುಖ್ಯರಸ್ತೆಯಲ್ಲಿ ಹದಗೆಟ್ಟ ರಸ್ತೆಯಲ್ಲಿದ್ದ ಗುಂಡಿಗಳಿಂಗಾದಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ, ಬೈಕ್ ಹಿಂಬದಿ ಸವಾರ ಹರ್ಷದ್ (22) ಮೃತಪಟ್ಟಿದ್ದರು
- **2022 ಅಕ್ಟೋಬರ್ 17:** ರಾಜಾಜಿನಗರದ ಲುಲು ಗ್ಲೋಬಲ್ ಮಾಲ್ ಎದುರು ರಸ್ತೆ ಗುಂಡಿ ತಪ್ಪಿಸುವಾಗ ದ್ವಿಚಕ್ರ ವಾಹನಕ್ಕೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು, ಉಮಾದೇವಿ (42) ಅವರು ಮೃತಪಟ್ಟಿದ್ದರು
- **2022ರ ಮಾರ್ಚ್ 13:** ಎಂ.ಎಸ್. ಪಾಳ್ಯದ ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿಬಿದ್ದಿದ್ದು, ಸವಾರ ಅಶ್ವಿನ್ ಜುಗ್ಡೆ (27) ಮೃತಪಟ್ಟಿದ್ದರು
- **2022ರ ಜನವರಿ 29:** ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿ ಶಿಕ್ಷಕಿ ಶರ್ಮಿಳಾ (38) ಎಂಬುವವರು ಮೃತಪಟ್ಟಿದ್ದರು
- **2021ರ ಸೆಪ್ಟೆಂಬರ್ 7:** ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದರು
- **2021ರ ನ. 27:** ಥಣಿಸಂದ್ರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅಜೀಂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದರು

ಸಂಚಾರಕ್ಕೆ 'ವಿಶೇಷ ಕಮಿಷನರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಸುಗಮ ಸಂಚಾರ ಹಾಗೂ ಸಂಚಾರ ನಿಯಮಗಳ ಜಾರಿ ಹೊಣೆ ಹೊತ್ತುಕೊಂಡಿರುವ ನಗರದ ಪೊಲೀಸ್ ವಿಭಾಗಕ್ಕೆ ಹೊಸದಾಗಿ 'ವಿಶೇಷ ಕಮಿಷನರ್' ಹುದ್ದೆ ಸೃಷ್ಟಿಸಲಾಗಿದ್ದು, ಈ ಹುದ್ದೆಗೆ ಎಡಿಜಿಪಿ ಎಂ.ಎ. ಸಲೀಂ ಅವರನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

'ಪೊಲೀಸ್ ಕಮಿಷನರ್ ಅಧೀನದಲ್ಲಿ ಡಿಐಜಿ ಶ್ರೇಣಿಯ ಐಪಿಎಸ್ ಅಧಿಕಾರಿಯೊಬ್ಬರು ಸಂಚಾರ ವಿಭಾಗದ ನಿರ್ವಹಣೆ ಮಾಡುತ್ತಿದ್ದರು. ನಗರದಲ್ಲಿ ಸದ್ಯ ಸಂಚಾರ ದಟ್ಟಣೆ ಹೆಚ್ಚಾಗುತ್ತಿದ್ದು, ಸಾಕಷ್ಟು ಸಮಸ್ಯೆಗಳು ಉದ್ಭವಿಸುತ್ತಿವೆ.



ಎಂ.ಎ. ಸಲೀಂ



ಅನುಚೇತ್

ಇದಕ್ಕೆಲ್ಲ ಪರಿಹಾರ ಕಂಡುಕೊಳ್ಳುವುದಕ್ಕಾಗಿ, ಸಂಚಾರ ವಿಭಾಗದ ಹೊಣೆ ನಿರ್ವಹಿಸಲು ವಿಶೇಷ ಕಮಿಷನರ್ ಹುದ್ದೆ ಸೃಷ್ಟಿ ಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಎಂ.ಎ. ಸಲೀಂ ಅವರು ಈ ಹಿಂದೆ ಸಂಚಾರ ವಿಭಾಗದ ಜಂಟಿ ಕಮಿಷನರ್ ಆಗಿ ಕೆಲಸ ಮಾಡಿದ್ದರು. ಸಾಕಷ್ಟು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದ್ದರು. ಇದೀಗ, ಅವರನ್ನೇ ವಿಶೇಷ ಕಮಿಷನರ್ ಆಗಿ ವರ್ಗಾಯಿಸಲಾಗಿದೆ' ಎಂದರು.

ಬಿ.ಆರ್. ರವಿಕಾಂತೇಗೌಡ ವರ್ಗಾವಣೆ: ಸಂಚಾರ ವಿಭಾಗದ ಜಂಟಿ ಕಮಿಷನರ್ ಆಗಿದ್ದ ಬಿ.ಆರ್. ರವಿಕಾಂತೇಗೌಡ ಅವರನ್ನು ಸಿಐಡಿಯ ಡಿಐಜಿ ಆಗಿ ವರ್ಗಾಯಿಸಲಾಗಿದೆ. ಐಪಿಎಸ್ ಅಧಿಕಾರಿ ಎಂ.ಎನ್. ಅನುಚೇತ್ ಅವರನ್ನು ಡಿಐಜಿ ಹುದ್ದೆಗೆ ಬಡ್ತಿ ನೀಡುವ ಮೂಲಕ ಜಂಟಿ ಕಮಿಷನರ್ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ವಿಶೇಷ ಕಮಿಷನರ್ ಅಧೀನದಲ್ಲಿ ಜಂಟಿ ಕಮಿಷನರ್ ಅವರು ಕೆಲಸ ಮಾಡಲಿದ್ದಾರೆ.

ಡಿಸಿಪಿ ಹಾಗೂ ಇತರೆ ವಿಭಾಗಗಳು ಯಥಾಪ್ರಕಾರ ಮುಂದುವರಿಯಲಿವೆ.

ಸಿಸಿಬಿ ಜಂಟಿ ಕಮಿಷನರ್ ಶರಣಪ್ಪ



ಸಿಸಿಬಿ ಡಿಸಿಪಿ ಆಗಿದ್ದ ಎಸ್.ಡಿ. ಶರಣಪ್ಪ ಅವರನ್ನು ಡಿಐಜಿ ಹುದ್ದೆಗೆ ಬಡ್ತಿ ನೀಡಿ, ಸಿಸಿಬಿಯ ಜಂಟಿ ಕಮಿಷನರ್ ಆಗಿ ವರ್ಗಾವಣೆ ಮಾಡಲಾಗಿದೆ. ಜಂಟಿ ಕಮಿಷನರ್ ಹುದ್ದೆಯಲ್ಲಿದ್ದ ರಮಣ್ ಗುಪ್ತಾ ಅವರನ್ನು ಗುಪ್ತದಳಕ್ಕೆ ವರ್ಗಾಯಿಸಲಾಗಿದೆ.

ಸಿಗರೇಟ್ ವಿಚಾರಕ್ಕೆ ಜಗಳ: ವ್ಯವಸ್ಥಾಪಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಠಾಣೆ ವ್ಯಾಪ್ತಿಯಲ್ಲಿ ಖಾಸಗಿ ಕಂಪನಿ ವ್ಯವಸ್ಥಾಪಕ ಸುದರ್ಶನ್ ರಾವ್ (26) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಆರೋಪದಡಿ ಸಂಬಂಧಿಕರು ದೂರು ನೀಡಿದ್ದಾರೆ.

'ಬ್ಯಾಟರಾಯನಪುರ ನಿವಾಸಿ ಸುದರ್ಶನ್ ರಾವ್, ಕಸವನಹಳ್ಳಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಭಾನುವಾರವೂ ಕೆಲಸಕ್ಕೆ ಬಂದಿದ್ದರು. ಇದೇ ವೇಳೆಯೇ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಟ್ಟಡದ ಮೂರನೇ ಮಹಡಿಯಲ್ಲಿ ಸುದರ್ಶನ್ ಅವರ ಕಚೇರಿ ಇದೆ. ಕೆಲಸದ ವೇಳೆ ವಿಶ್ರಾಂತಿ ಪಡೆದಿದ್ದ ಅವರು, ಸಿಗರೇಟ್ ಸೇದುವುದಕ್ಕಾಗಿ ನೆಲಮಹಡಿಯಲ್ಲಿರುವ ಬೇಕರಿಗೆ ಹೋಗಿದ್ದರು. ಆದರೆ, ಬೇಕರಿಯಲ್ಲಿ ಮಾಲೀಕರು ಇರಲಿಲ್ಲ.'

'ಪಕ್ಕದಲ್ಲಿದ್ದ ಫೋಟೊ ಸ್ಟುಡಿಯೊ ಮಾಲೀಕ ರಾಮಚಂದ್ರ ಅವರಿಗೆ ಬೇಕರಿಯನ್ನು ನೋಡಿಕೊಳ್ಳುವಂತೆ ಹೇಳಿ ಮಾಲೀಕರು ಬೇರೆ ಕಡೆ ಹೋಗಿದ್ದರು. ಯಾರೂ ಇಲ್ಲದಿದ್ದರೂ ಸುದರ್ಶನ್ ಅವರು ಬೇಕರಿಯಲ್ಲಿ ಸಿಗರೇಟ್ ತೆಗೆದುಕೊಳ್ಳಲು ಮುಂದಾಗಿದ್ದರು. ಇದನ್ನು ಪ್ರಶ್ನಿಸಿದ್ದ ರಾಮಚಂದ್ರ, 'ಮಾಲೀಕರು ಬೇಕರಿಯಲ್ಲಿಲ್ಲ. ಅವರು ಬಂದ ನಂತರ ಸಿಗರೇಟ್ ತೆಗೆದುಕೊಳ್ಳಿ' ಎಂದಿದ್ದರು. ಅದೇ ವಿಚಾರವಾಗಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು, ಗಲಾಟೆ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

'ಸ್ಥಳೀಯರೇ ಜಗಳ ಬಿಡಿಸಿದ್ದರು. ನಂತರ, ಸುದರ್ಶನ್ ಅವರು ಕಚೇರಿಗೆ ಬಂದು ಕುಳಿತುಕೊಂಡಿದ್ದರು. ಕೆಲ ಹೊತ್ತಿನ ನಂತರ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಸಹೋದ್ಯೋಗಿಗಳೇ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಮಾರ್ಗಮಧ್ಯೆಯೇ ಸುದರ್ಶನ್ ಮೃತಪಟ್ಟಿರುವುದಾಗಿ ಹೇಳಿದರು' ಎಂದು ಮೂಲಗಳು ಹೇಳಿವೆ.

ತನಿಖೆ ನಂತರ ನಿಜಾಂಶ: 'ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು, ಹೃದಯಾಘಾತದಿಂದ ಸಾವು ಸಂಭವಿಸಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಆದರೆ, ಸಂಬಂಧಿಕರು ಕೊಲೆ ಆರೋಪದಡಿ ದೂರು ನೀಡಿದ್ದಾರೆ. ತನಿಖೆಯಿಂದ ನಿಜಾಂಶ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಠಕ್ಕೆ ಮರಳಿದ ವಿದ್ಯಾರ್ಥಿಗಳು

ಕನಕಪುರ: ಇಲ್ಲಿನ ದೇಗುಲ ಮಠದ ವಸತಿ ನಿಲಯದಿಂದ ನಾಪತ್ತೆಯಾಗಿದ್ದ ಮೂವರು ವಿದ್ಯಾರ್ಥಿಗಳು ಭಾನುವಾರ ರಾತ್ರಿ ಮಠಕ್ಕೆ ವಾಪಸ್ ಬಂದಿದ್ದಾರೆ ಎಂದು ಆಡಳಿತ ಮಂಡಳಿ ತಿಳಿಸಿದೆ.

ಮಠದಲ್ಲಿ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಶಿವಕುಮಾರ್, ಪ್ರತಾಪ್, ಕಾರ್ತಿಕ್ ನ. 8ರಂದು ನಾಪತ್ತೆಯಾಗಿದ್ದರು. ಈ ಬಗ್ಗೆ ವಸತಿ ನಿಲಯದ ಮೇಲ್ವಿಚಾರಕರು ಟೌನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ವಿದ್ಯಾರ್ಥಿಗಳು ಮಠಕ್ಕೆ ವಾಪಸ್ ಬಂದಿದ್ದಾರೆ. ಎಲ್ಲಿಗೆ ಹೋಗಿದ್ದರು ಎಂಬುದನ್ನು ಹೇಳುತ್ತಿಲ್ಲ. ಪೋಷಕರು ಬಂದ ಮೇಲೆ ಅವರೊಂದಿಗೆ ಮಕ್ಕಳನ್ನು ಮುಖಾಮುಖಿಯಾಗಿಸಿ ವಿಚಾರಿಸಲಾಗುವುದು ಎಂದು ಆಡಳಿತ ಮಂಡಳಿ ತಿಳಿಸಿದೆ.

51 ಸಂಸದರ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: '51 ಸಂಸದರು ಹಣ ಅಕ್ರಮ ವರ್ಗಾವಣೆ ಪ್ರಕರಣ ಎದುರಿಸುತ್ತಿದ್ದಾರೆ. ಈ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಎಫ್‌ಐಆರ್ ದಾಖಲಿಸಿದೆ' ಎಂದು ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ವಿಜಯ್ ಹನ್ಸಾರಿಯಾ ಅವರು ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದ್ದಾರೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ಅವರು ವಕೀಲೆ ಸ್ನೇಹಾ ಕಲಿತಾ ಸಲ್ಲಿಸಿರುವ ವರದಿಯನ್ನು ನ್ಯಾಯಾಲಯದಲ್ಲಿ ಉಲ್ಲೇಖಿಸಿದ್ದಾರೆ.

'ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ 71 ಸದಸ್ಯರು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ದಾಖಲಾಗಿರುವ ವಿವಿಧ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ' ಎಂದೂ ಹೇಳಿದ್ದಾರೆ.

'121 ಮಂದಿ ಸಂಸದರು ಹಾಗೂ ಶಾಸಕರ ವಿರುದ್ಧದ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಸಿಬಿಐ ಸಲ್ಲಿಸಿರುವ ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ. 14 ಜನ ಹಾಲಿ ಸಂಸದರು ಹಾಗೂ 37 ಮಂದಿ ಮಾಜಿ ಸಂಸದರು ಸಿಬಿಐ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಆರೋಪಿತರ ಪೈಕಿ ಐವರು ಈಗಾಗಲೇ ಮೃತಪಟ್ಟಿದ್ದಾರೆ. ಶಾಸಕರ ಪೈಕಿ 112 ಜನರ ವಿರುದ್ಧ ಸಿಬಿಐ, ಪ್ರಕರಣ ದಾಖಲಿಸಿದೆ. ಇದರಲ್ಲಿ 34 ಮಂದಿ ಹಾಲಿ ಹಾಗೂ 78 ಮಂದಿ ಮಾಜಿ ಶಾಸಕರಿದ್ದಾರೆ. 9 ಮಂದಿ ಈಗಾಗಲೇ ನಿಧನರಾಗಿದ್ದಾರೆ' ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

'58 ಪ್ರಕರಣಗಳಲ್ಲಿ ಆರೋಪಿಗಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಬಹುದಾಗಿದೆ. ಡ್ರಗ್ಸ್ ಪ್ರಕರಣ ಸಂಬಂಧ ಹಾಲಿ ಅಥವಾ ಮಾಜಿ ಸಂಸದ ಮತ್ತು ಶಾಸಕರ ವಿರುದ್ಧದ ಯಾವುದೇ ಕ್ರಿಮಿನಲ್ ಪ್ರಕರಣದ ವಿಚಾರಣೆ ಬಾಕಿ ಇಲ್ಲ' ಎಂದಿದ್ದಾರೆ.

ತಡೆಗೋಡೆ ದಾಟಿದ ಕಾಡಾನೆ

ಪ್ರಜಾವಾಣಿ ವಾರ್ತೆ

ಕನಕಪುರ: ಕಾಡಾನೆಗಳು ಕಾಡಿನಿಂದ ಹೊರಬರದಂತೆ ತಡೆಗಾಗಿ ಅರಣ್ಯ ಇಲಾಖೆ ನಿರ್ಮಿಸಿರುವ ಕಂಬಿ ತಡೆಗೋಡೆ ದಾಟುವ ಮೂಲಕ ಕಾಡಾನೆಯೊಂದು ಅರಣ್ಯ ಇಲಾಖೆಗೆ ಸೆಡ್ಡು ಹೊಡೆದಿದೆ.

ಮುತ್ತತ್ತಿ ಅರಣ್ಯ ಪ್ರದೇಶ ವ್ಯಾಪ್ತಿಯ ಬೂಹಳ್ಳಿ ಸರಹದ್ದಿನ ಅರಣ್ಯ ಪ್ರದೇಶದ ಉದ್ದಕ್ಕೂ ಕಂಬಿ ಅಳವಡಿಸಲಾಗಿದೆ.

ಇಲ್ಲಿವರೆಗೂ ಯಾವುದೇ ಆನೆ ಕಂಬಿ ದಾಟಿರಲಿಲ್ಲ. ಆದರೆ, ಕಾಡಾನೆಯೊಂದು ಕಂಬಿ ದಾಟುವ ಪ್ರಯತ್ನ ನಡೆಸಿ ಅದರಲ್ಲಿ ಯಶಸ್ವಿಯಾಗಿ ಹೊರ ಬಂದಿದೆ.

ಅರಣ್ಯದಲ್ಲಿ ದನಗಳನ್ನು ಮೇಯಿಸುತ್ತಿದ್ದವರು ಆನೆ ಕಂಬಿ ದಾಟಲು ಸಾಹಸ ಮಾಡುತ್ತಿರುವುದನ್ನು ತಮ್ಮ ಮೊಬೈಲ್‌ನಿಂದ ವಿಡಿಯೊ ಮಾಡಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕಳುಹಿಸಿದ್ದಾರೆ.

ಆನೆಯನ್ನೇ ಹಿಮ್ಮೆಟ್ಟಿಸಿದ ನಾಯಿ: ಮತ್ತೊಂದು ಪ್ರಕರಣದಲ್ಲಿ ಕಾಡಿನಿಂದ ಹೊರ ಬಂದು ಜಮೀನಿಗೆ ನುಗಿದ್ದ ಕಾಡಾನೆಯೊಂದನ್ನು ನಾಯಿ ಅಟ್ಟಾಡಿಸಿ ಹಿಮ್ಮೆಟಿಸಿದೆ.



ಕನಕಪುರ ಮುತ್ತತ್ತಿ ಅರಣ್ಯ ಪ್ರದೇಶದಲ್ಲಿ ಕಾಡಾನೆಯೊಂದು ರೈಲ್ವೆ ಕಂಬಿ ದಾಟುತ್ತಿರುವುದು

ಸುಲಿಗೆ: ಮೊಬೈಲ್, ಬೈಕ್ ಬಿಟ್ಟು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಸಾರ್ವಜನಿಕರನ್ನು ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳು, ಬಂಧಿಸಲು ಹೋದ ಪೊಲೀಸರನ್ನು ಕಂಡು ಪರಾರಿಯಾಗಿದ್ದಾರೆ.

'ವಿಜಯನಗರ ಠಾಣೆ ವ್ಯಾಪ್ತಿಯ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದ ಬಳಿ ವೈದ್ಯರೊಬ್ಬರ ಮೊಬೈಲ್ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳು, ಸ್ಥಳದಿಂದ ತಪ್ಪಿಸಿಕೊಂಡಿದ್ದರು. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ್ದ ಠಾಣೆ ಸಿಬ್ಬಂದಿ, ಆರೋಪಿಗಳ ಜಾಗವನ್ನು ಪತ್ತೆ ಮಾಡಿ ಬಂಧಿಸಲು ಹೋಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೊಲೀಸರು ಸ್ಥಳಕ್ಕೆ ಹೋಗುತ್ತಿದ್ದಂತೆ, ಬಂಧನ ಭೀತಿಯಲ್ಲಿ ಆರೋಪಿಗಳು ಓಡಿ ಹೋಗಿದ್ದಾರೆ' ಎಂದು ಹೇಳಿದರು.

ಆರೋಪಿಗಳು ಉಳಿದುಕೊಂಡಿದ್ದ ಶೆಡ್‌ನಲ್ಲಿ ಬೈಕ್ ಹಾಗೂ 8 ಮೊಬೈಲ್‌ಗಳು ಪತ್ತೆಯಾಗಿವೆ. ಅವುಗಳನ್ನು ಜಪ್ತಿ ಮಾಡಿ, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

'ಬಹುಸಂಖ್ಯಾತರಿಗೆ 2ಎ ಮೀಸಲಾತಿ ನೀಡಬಾರದು'

ಬೆಂಗಳೂರು: 'ಪ್ರಬಲ ಸಮುದಾಯಗಳಿಗೆ 2ಎ ಮೀಸಲಾತಿ ಸೌಲಭ್ಯ ಕಲ್ಪಿಸಿದರೆ ಕೆಳವರ್ಗದ, ಧ್ವನಿಯಿಲ್ಲದ ಮಡಿವಾಳದಂತಹ ಸಮುದಾಯಗಳಿಗೆ ಅದು ಮರಣ ಶಾಸನವಾಗಿ ಪರಿಣಮಿಸಲಿದೆ' ಎಂದು ಮಡಿವಾಳ ಕಮ್ಯೂನಿಟಿ ಫೌಂಡೇಷನ್‌ನ ಗೌರವಾಧ್ಯಕ್ಷ ಈಶ್ವರ ಮಡಿವಾಳ ಆತಂಕ ವ್ಯಕ್ತಪಡಿಸಿದರು.

'ಸಮಾಜದಲ್ಲಿ ಮಡಿವಾಳ ಸಮುದಾಯಕ್ಕಿಂತ ಹೆಚ್ಚು ಜನಸಂಖ್ಯೆ ಮತ್ತು ಉನ್ನತ ಸಾಮಾಜಿಕ ಸ್ಥಾನಮಾನ ಹೊಂದಿರುವ ಪ್ರಬಲ ಸಮುದಾಯಗಳು ಈಗಾಗಲೇ 3ಎ, 3ಬಿ ಮೀಸಲಾತಿ ಸೌಲಭ್ಯವನ್ನು ಪಡೆಯುತ್ತಿವೆ. ಆದ್ದರಿಂದ 2ಎ ಪಟ್ಟಿಗೆ ಹೊಸದಾಗಿ ಯಾವುದೇ ಸಮುದಾಯಗಳನ್ನು ಸೇರಿಸುವ ಕ್ರಮವನ್ನು ಮಡಿವಾಳ ಸಮುದಾಯವು ವಿರೋಧಿಸುತ್ತದೆ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಕಲು ಮಾಡಿದ್ದಕ್ಕೆ ಬೈದ ಶಿಕ್ಷಕರು: ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: 'ಶಿಕ್ಷಕರು ಬೈದರೆಂಬ ಕಾರಣಕ್ಕೆ ನೊಂದಿದ್ದಳು' ಎನ್ನಲಾದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಅಮೃತಾ (16) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ರಾಮಮೂರ್ತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಮೃತಾ ಸಾವಿನಿಂದ ನೊಂದ ಪೋಷಕರು ಹಾಗೂ ಸಂಬಂಧಿಕರು, ಶಾಲೆ ಆವರಣದಲ್ಲಿ ಮೃತದೇಹವಿಟ್ಟು ಕೆಲ ಹೊತ್ತು ಪ್ರತಿಭಟನೆ ನಡೆಸಿದರು. ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಕಾರರ ಮನವೊಲಿಸಿದರು.

ಬಳಿಕ, ಪುಲಿಕೇಶಿನಗರದ ಜೀವನಹಳ್ಳಿಯಲ್ಲಿರುವ ಸ್ಮಶಾನದಲ್ಲಿ ಅಮೃತಾಳ ಅಂತ್ಯಕ್ರಿಯೆ ನಡೆಯಿತು.

ನಕಲು ಮಾಡಿದ್ದನ್ನು ಪ್ರಶ್ನಿಸಿದ್ದ ಶಿಕ್ಷಕರು: 'ಬಾಣಸವಾಡಿಯ ಒಎಂಬಿಆರ್ ಕಾಲೊನಿಯ ಮರಿಯಂ ನಿಲಯ ಪ್ರೌಢಶಾಲೆಯಲ್ಲಿ ಅಮೃತಾ ಓದುತ್ತಿದ್ದಳು. ನ. 2ರಿಂದ ಆಂತರಿಕ ಪರೀಕ್ಷೆಗಳು ಆರಂಭವಾಗಿದ್ದವು. ನಿತ್ಯವೂ ಅಮೃತಾ ಪರೀಕ್ಷೆಗೆ ಹಾಜರಾಗಿದ್ದಳು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ. 4ರಂದು ಪರೀಕ್ಷೆಗೆ ಬಂದಿದ್ದ ಅಮೃತಾ, ನಕಲು ಮಾಡುವುದಕ್ಕಾಗಿ ಚೀಟಿ ತಂದಿದ್ದಳು. ಅದನ್ನು ನೋಡಿದ್ದ ಶಿಕ್ಷಕರು, ಅಮೃತಾಳನ್ನು ತರಾಟೆಗೆ ತೆಗೆದುಕೊಂಡು ಬೈದಿದ್ದರು. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲೂ ಸೆರೆಯಾಗಿದೆ.'

'ಸಹಪಾಠಿಗಳ ಎದುರು ಶಿಕ್ಷಕರು ಬೈದಿದ್ದರಿಂದ ತನಗೆ ಅವಮಾನವಾಯಿತೆಂದು ಅಮೃತಾ ನೊಂದಿದ್ದಳು. ಅದೇ ನೋವಿನಲ್ಲಿ ಭಾನುವಾರ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾಳೆ' ಎಂದು ಮೂಲಗಳು ತಿಳಿಸಿವೆ.

ಪೋಷಕರ ಹೇಳಿಕೆ ಪಡೆದು ತನಿಖೆ: 'ಅಮೃತಾ ಸಾವಿನ ಸಂಬಂಧ ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಶಿಕ್ಷಕರ ಕಿರುಕುಳದಿಂದ ಮಗಳು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೋಷಕರು ಹೇಳಿಕೆ ನೀಡಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟಿಪ್ಪು ಪರವೋ, ಒಡೆಯರ್ ಪರವೋ'

ಬೆಂಗಳೂರು: ಕಾಂಗ್ರೆಸ್‌ನವರು 100 ಅಡಿಗಳ ಟಿಪ್ಪುವಿನ ಪ್ರತಿಮೆಯ ಬದಲಿಗೆ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಪ್ರತಿಮೆ ಸ್ಥಾಪಿಸುವುದಾದರೆ ಅದಕ್ಕೆ ತನು, ಮನ, ಧನ ಸೇರಿ ಎಲ್ಲ ರೀತಿಯ ನೆರವು ಮತ್ತು ಬೆಂಬಲ ನೀಡುವುದಾಗಿ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೈಸೂರು ಅರಸರಿಗೆ ಮೋಸ ಮಾಡಿ ರಾಜ್ಯವನ್ನು ಕಸಿದುಕೊಂಡ ಹೈದರಾಲಿ–ಟಿಪ್ಪುವಿನ ಪರ ನಿಲ್ಲುತ್ತೀರೋ ಅಥವಾ ಮೈಸೂರು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸಿದ ಮೈಸೂರು ಅರಸರ ಪರ ನಿಲ್ಲುತ್ತೀರೋ ಎಂಬುದನ್ನು ನೀವು (ಕಾಂಗ್ರೆಸ್) ಸ್ಪಷ್ಟಪಡಿಸಬೇಕು' ಎಂದು ತಿಳಿಸಿದರು.

ಆನ್‌ಲೈನ್ ಆಹಾರ: ₹ 2.23 ಲಕ್ಷ ವಂಚನೆ

ಬೆಂಗಳೂರು: ಆನ್‌ಲೈನ್ ಮೂಲಕ ಆಹಾರ ಖರೀದಿಸಲು ಹೋಗಿದ್ದ ಗ್ರಾಹಕರಿಬ್ಬರು ₹ 2.23 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ನಗರದ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

'ಇಮ್ರಾನ್ ಹಾಗೂ ದೀಪಿಕಾ ಎಂಬುವವರು ಪ್ರತ್ಯೇಕ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಇಮ್ರಾನ್, ಆಹಾರದ ಬಗ್ಗೆ ಫೇಸ್‌ಬುಕ್‌ನಲ್ಲಿ ಜಾಹೀರಾತು ನೋಡಿ ಅದರಲ್ಲಿದ್ದ ಸಂಖ್ಯೆಗೆ ಕರೆ ಮಾಡಿ ಹಣ ಪಾವತಿಸಿ ಆಹಾರ ಕಾಯ್ದಿರಿಸಿದ್ದರು. ಹಣ ಬಂದಿಲ್ಲವೆಂದಿದ್ದ ವಂಚಕರು, ಹೊಸ ಲಿಂಕ್ ಕಳುಹಿಸಿದ್ದರು. ಲಿಂಕ್ ಮೂಲಕ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದ ಇಮ್ರಾನ್, ವೈಯಕ್ತಿಕ ಹಾಗೂ ಬ್ಯಾಂಕ್ ಖಾತೆ ಮಾಹಿತಿ ಭರ್ತಿ ಮಾಡಿದ್ದರು. ಕೆಲ ನಿಮಿಷಗಳಲ್ಲೇ ಖಾತೆಯಿಂದ ಹಣ ಕಡಿತವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದಾಖಲೆ ನಿರ್ಮಿಸಿದ ಎಸ್‌ಎಫ್‌ಎಸ್ ಅಕಾಡೆಮಿ ವಿದ್ಯಾರ್ಥಿಗಳು

ಒರಿಗಮಿ ದೋಣಿಯಲ್ಲಿ ಅರಳಿದ ರಾಷ್ಟ್ರಧ್ವಜ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಎಸ್‌ಎಫ್‌ಎಸ್ ಅಕಾಡೆಮಿ ವಿದ್ಯಾರ್ಥಿಗಳು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ರಾಷ್ಟ್ರದ ಬಗ್ಗೆ ಅಭಿಮಾನ ಬೆಳೆಸುವ ಮೂರು ವಿಶ್ವದಾಖಲೆ ನಿರ್ಮಿಸಿದ್ದಾರೆ. ಶಾಲೆಯ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದರು.

2.30 ಲಕ್ಷ ಒರಿಗಮಿ ದೋಣಿಗಳನ್ನು (ಪೇಪರ್‌ನಲ್ಲಿ ಕಲಾಕುಸುರಿ) ಬಳಸಿ ರಾಷ್ಟ್ರಧ್ವಜ ತಯಾರಿಸಿದ್ದಾರೆ. 20 ಮೀಟರ್ ಉದ್ದ ಮತ್ತು 30 ಮೀಟರ್ ಅಗಲದ ಭಾರತ ಧ್ವಜವನ್ನು ದೋಣಿ ಮೂಲಕ ರಚಿಸಿದ್ದಾರೆ. ಬೆಳಿಗ್ಗೆ 8ರಿಂದ ಸಂಜೆ 6.30ರವರೆಗೆ ದೋಣಿಗಳನ್ನು ತಯಾರಿಸಿ ಕೇಸರಿ, ಬಿಳಿ, ಹಸಿರು ಬಣ್ಣಗಳ ರಾಷ್ಟ್ರಧ್ವಜ ತಯಾರಿಸಿದ್ದಾರೆ. 1,683 ವಿದ್ಯಾರ್ಥಿಗಳು, 140 ಶಿಕ್ಷಕರು ಧ್ವಜ ನಿರ್ಮಾಣ ಕಾರ್ಯದಲ್ಲಿ ಭಾಗಿಯಾಗಿದ್ದರು. 'ನನ್ನ ಭಾರತ ನನ್ನ ಹೆಮ್ಮೆ' ಪರಿಕಲ್ಪನೆಯಡಿ ರಾಷ್ಟ್ರಧ್ವಜ ತಯಾರಿಸಿದ್ದಾರೆ.

ಒಂದು ಗಂಟೆಯಲ್ಲಿ ಅವಧಿಯಲ್ಲಿ ವಿದ್ಯಾರ್ಥಿಗಳು ಐದು ಸಾವಿರ ರಾಷ್ಟ್ರಧ್ವಜಕ್ಕೆ ಬಣ್ಣ ಹಚ್ಚುವ ವಿನೂತನ ದಾಖಲೆ ನಿರ್ಮಿಸಿದರು. ಒಂದೇ ಗುಂಪು ಬಣ್ಣ ಹಚ್ಚುವ ಕಾರ್ಯದಲ್ಲಿ ಪಾಲ್ಗೊಂಡಿರುವುದು ವಿಶೇಷ. ಶಿಕ್ಷಕರು ಕೂಡ ಇದರಲ್ಲಿ ಪಾಲ್ಗೊಂಡಿದ್ದರು.

1,210 ವಿದ್ಯಾರ್ಥಿಗಳು ಏಕಕಾಲದಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡು ದಾಖಲೆ ನಿರ್ಮಿಸಿದ್ದಾರೆ. ಫಿಟ್ ಇಂಡಿಯಾ ಆಂದೋಲನಕ್ಕೆ ಬೆಂಬಲ ನೀಡಲು ಮತ್ತು ಆರೋಗ್ಯವೇ ಭಾಗ್ಯ ಎಂಬ ಪರಿಕಲ್ಪನೆಯಡಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.




ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿ ಎಸ್‌ಎಫ್‌ಎಸ್ ಅಕಾಡೆಮಿಯ ವಿದ್ಯಾರ್ಥಿಗಳು 2.30 ಲಕ್ಷ ಒರಿಗಮಿ ದೋಣಿಗಳನ್ನು ಬಳಸಿ ನಿರ್ಮಿಸಿರುವ ರಾಷ್ಟ್ರಧ್ವಜ

ಚಿತ್ರಾವಳಿ



ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಕಬ್ಬನ್ ಉದ್ಯಾನದಲ್ಲಿರುವ ಕೇಂದ್ರ ಗ್ರಂಥಾಲಯದಲ್ಲಿ ಪುಸ್ತಕ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶಕುಮಾರ್ ಎಸ್. ಹೊಸಮನಿ, ಚಿತ್ರದುರ್ಗ ಜಿಲ್ಲೆ ಜಿಲ್ಲಾ ವರಿಷ್ಠಾಧಿಕಾರಿ ಪರಶುರಾಮ್, ಪುಸ್ತಕ ಆಯ್ಕೆ ಸಮಿತಿ ಸದಸ್ಯ ಗಿರಿಗೌಡ, ಕೇಂದ್ರ ಗ್ರಂಥಾಲಯದ ಉಪನಿರ್ದೇಶಕಿ ಎಂ. ಸರೋಜಮ್ಮ ಇದ್ದರು.



ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆಯ ಸರ್ಕಾರಿ ಪ್ರಾಥಮಿಕ ಮಾದರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ಕಾಂಗ್ರೆಸ್ ಮುಖಂಡರಾದ ಡಾ. ನಾಗಲಕ್ಷ್ಮಿ ಚೌಧರಿ ಅವರು ಕೆಎಲ್‌ಇ ದಂತ ಮಹಾವಿದ್ಯಾಲಯದ ಸಹಯೋಗದೊಂದಿಗೆ ಮಕ್ಕಳಿಗೆ ದಂತ ತಪಾಸಣೆ ಹಾಗೂ ಚಿಕಿತ್ಸೆ ಆಯೋಜಿಸಿದ್ದರು. ಕೇಕು ಕತ್ತರಿಸಿ ಮಕ್ಕಳ ದಿನಾಚರಣೆ ಆಚರಿಸಿ, ಟೂತ್ ಪೇಸ್ಟ್ ಮತ್ತು ಬ್ರಷ್‌ಗಳನ್ನು ವಿತರಿಸಿದರು. ಈ ವೇಳೆ ಡಾ. ನಾಗಲಕ್ಷ್ಮಿ ಚೌಧರಿ ಅವರು ನೆಹರೂ ಕುರಿತಂತೆ ಹಾಗೂ ದಂತ ರಕ್ಷಣೆಯ ಬಗ್ಗೆ ಮಾತನಾಡಿದರು. ಕಾಂಗ್ರೆಸ್ ಮುಖಂಡರಾದ ಬಿ.ಎಂ. ಜಗದೀಶ್, ರಾಮಾಂಜಿ ಗೌಡ, ಸಚಿನ್, ನಾಗರಾಜು ಇದ್ದರು.


ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮನೆಗೆ ಬರುವ ಎಲ್ಲ ಅತಿಥಿಗಳೂ ಸಂತೋಷವನ್ನೇ ಕೊಡುತ್ತಾರೆ. ಕೆಲವರು ಬಂದಾಗ ಮತ್ತು ಕೆಲವರು ಹೊರಡುವಾಗ. -ಕನ್‌ಫ್ಯೂಷಿಯಸ್

ಸಂಜಯ್ ರಾವತ್‌ಗೆ ಜಾಮೀನು ಇ.ಡಿ. ವರ್ತನೆಗೆ ತಪರಾಕಿ

ಶಿವಸೇನಾ (ಉದ್ಧವ್ ಠಾಕ್ರೆ) ನಾಯಕ ಸಂಜಯ್ ರಾವತ್ ಅವರಿಗೆ ಮುಂಬೈನ ವಿಶೇಷ ನ್ಯಾಯಾಲಯವೊಂದು ಜಾಮೀನು ಮಂಜೂರು ಮಾಡಿದೆ. ಜಾಮೀನು ನೀಡುವ ಸಂದರ್ಭದಲ್ಲಿ ನ್ಯಾಯಾಧೀಶರು ಆಡಿರುವ ಮಾತು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಜಾರಿ ನಿರ್ದೇಶನಾಲಯದ (ಇ.ಡಿ) ವಿರುದ್ಧ ದೋಷಾರೋಪ ನಿಗದಿ ಮಾಡುವುದಕ್ಕೆ ಸಮನಾಗಿದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ರಾವತ್ ಅವರನ್ನು ಆಗಸ್ಟ್ 1ರ ಮಧ್ಯರಾತ್ರಿ ಬಂಧಿಸಿದರು. ಇದಕ್ಕೂ ಮೊದಲು ರಾವತ್ ಅವರ ಮನೆ ಹಾಗೂ ಇತರ ಕೆಲವು ಜಾಗಗಳಲ್ಲಿ ಅಧಿಕಾರಿಗಳು ಶೋಧ ನಡೆಸಿದ್ದರು. ರಾವತ್ ಅವರ ಬಂಧನವು 'ಅಕ್ರಮ' ಎಂದು ಕೋರ್ಟ್ ಹೇಳಿದೆ. 'ಬಂಧನಕ್ಕೆ ಕಾರಣಗಳು ಇರಲಿಲ್ಲ, ಮೇಲ್ನೋಟಕ್ಕೆ ಇದು ಸೇಡಿನ ಕ್ರಮದಂತಿದೆ' ಎಂದು ಕೂಡ ಅದು ಹೇಳಿದೆ. ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ರಾವತ್ ಅವರನ್ನು ಬಂಧಿಸಲಾಗಿತ್ತು. ಆ ಪ್ರಕರಣದಲ್ಲಿ ರಾವತ್ ಅವರೂ ಭಾಗಿಯಾಗಿದ್ದಾರೆ ಎಂದು ಇ.ಡಿ. ಹೇಳಿತ್ತು. ಜಾಮೀನು ಅರ್ಜಿಯನ್ನು ಮಾತ್ರ ವಿಚಾರಣೆಗೆ ಕೈಗೆತ್ತಿಕೊಂಡಿದ್ದ ಕಾರಣ ಕೋರ್ಟ್, ಈ ಪ್ರಕರಣದ ಪೂರ್ವಾಪರಗಳ ಪರಿಶೀಲನೆಗೆ ಮುಂದಾಗಿಲ್ಲ. ಹೀಗಿದ್ದರೂ, ಅವರ ವಿರುದ್ಧದ ಆರೋಪಗಳು ಅವೆಷ್ಟು ದುರ್ಬಲವಾಗಿವೆ ಎಂಬುದನ್ನು ಕೋರ್ಟ್‌ನ ಮಾತುಗಳು ತೋರಿಸುತ್ತಿವೆ.



ಜಾರಿ ನಿರ್ದೇಶನಾಲಯ ದಾಖಲಿಸುವ ಪ್ರಕರಣಗಳ ಪೈಕಿ ಅಪರಾಧಿಗಳಿಗೆ ಶಿಕ್ಷೆ ಆಗಿರುವುದು ಶೇಕಡ 0.5ರಷ್ಟು ಪ್ರಕರಣಗಳಲ್ಲಿ ಮಾತ್ರ. ಇದು ಈ ಸಂಸ್ಥೆ ಕೆಲಸ ಮಾಡುತ್ತಿರುವ ರೀತಿ ಹೇಗಿದೆ ಎಂಬುದನ್ನೂ ತಿಳಿಸುತ್ತಿದೆ

ವಿರೋಧ ಪಕ್ಷಗಳ ನಾಯಕರಿಗೆ ಕಿರುಕುಳ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪವನ್ನು ಮತ್ತೆ ಮತ್ತೆ ಮಾಡಲಾಗುತ್ತಿದೆ. ರಾವತ್ ಪ್ರಕರಣವು ಈ ಆರೋಪವನ್ನು ಪುಷ್ಟೀಕರಿಸುವ ರೀತಿಯಲ್ಲಿ ಇದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತರ್ಕದ ನೆಲೆಯಲ್ಲಿ ಆಲೋಚಿಸಿದಂತೆ ಕಾಣುತ್ತಿಲ್ಲ. ಬದಲಿಗೆ, ರಾವತ್ ಅವರ ಮೇಲೆ ತಪ್ಪು ಹೊರಿಸುವ ಉದ್ದೇಶವು ಇ.ಡಿ. ಅಧಿಕಾರಿಗಳಿಗೆ ಇತ್ತು ಎಂಬುದನ್ನು ಆದೇಶದಲ್ಲಿ ಕೋರ್ಟ್ ಉಲ್ಲೇಖಿಸಿರುವ ಅಂಶಗಳು ಹೇಳುತ್ತಿವೆ. ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ರಾವತ್ ಅವರಿಗೆ ಒಂದಿಷ್ಟು ಹಣ ಸಂದಾಯವಾಗಿದೆ ಎಂಬ ಆರೋಪ ಇದೆ. ಆದರೆ ಪ್ರಕರಣದಲ್ಲಿ ರಾವತ್ ಅವರ ಪಾತ್ರ ಏನಿತ್ತು ಎಂಬ ಬಗ್ಗೆ ಇ.ಡಿ. ಅಧಿಕಾರಿಗಳಿಗೆ ಸ್ಪಷ್ಟತೆ ಇಲ್ಲ. ರಾವತ್ ಅವರ ಒಡನಾಡಿ ಪ್ರವೀಣ್ ರಾವತ್ ಅವರನ್ನು ಸಿವಿಲ್ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದೆ ಎಂದು ಕೂಡ ಕೋರ್ಟ್ ಹೇಳಿದೆ.

ಪ್ರಕರಣವನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ದಾಖಲಿಸಿಕೊಳ್ಳಬೇಕಾದ ಅಗತ್ಯವೇ ಇರಲಿಲ್ಲ. ಪ್ರಕರಣದಲ್ಲಿ ಉಲ್ಲೇಖವಾಗಿರುವ ಹಣವನ್ನು ಅಕ್ರಮವಾಗಿ ಗಳಿಸಿದ್ದು ಎನ್ನುವುದಕ್ಕೆ ಆಧಾರ ಇಲ್ಲ ಎಂದು ಕೂಡ ಅದು ಹೇಳಿದೆ. ಜಾರಿ ನಿರ್ದೇಶನಾಲಯವು ತನ್ನ ಅಧಿಕಾರವನ್ನು ಮಿತಿಮೀರಿ ಬಳಕೆ ಮಾಡಿಕೊಂಡಿದೆ. ಪ್ರಮುಖ ಆರೋಪಿಗೆ ತಪ್ಪಿಸಿಕೊಂಡು ತಿರುಗಲು ಅವಕಾಶ ಕಲ್ಪಿಸಿ, ಇತರ ಕೆಲವರನ್ನು ಇ.ಡಿ. ಬಂಧಿಸಿದೆ ಎಂದು ನ್ಯಾಯಾಲಯ ಹೇಳಿದೆ. ಅಕ್ರಮ ಬಂಧನಗಳು, 'ಕೆಲವು ಹೆಸರುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ನೀತಿ'ಯ ಪರಿಣಾಮ ಎಂದು ಅದು ಹೇಳಿರುವುದು ಇ.ಡಿ. ಇದುವರೆಗೆ ಅನುಸರಿಸಿಕೊಂಡು ಬಂದ ಧೋರಣೆಯನ್ನು ಮತ್ತೊಮ್ಮೆ ಎತ್ತಿ ತೋರಿಸಿದಂತಿದೆ. ಸಂಜಯ್ ರಾವತ್ ಅವರನ್ನು ಜೈಲಿನಲ್ಲಿ ಇರಿಸಿದ್ದ ರೀತಿಯು ಅವರ ಆರೋಗ್ಯ ಸ್ಥಿತಿಗೆ ಸರಿಹೊಂದುವಂತೆ ಇರಲಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಬಂಧಿಸುವ ವಿಚಾರದಲ್ಲಿ ಬಹಳ ಮುತುವರ್ಜಿ ತೋರಿದ ಇ.ಡಿ., ವಿಚಾರಣೆಯಲ್ಲಿ ಅಷ್ಟೊಂದು ಆತುರ ತೋರಲಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆ. ಇಂತಹ ಬಂಧನಗಳು ವ್ಯಕ್ತಿಗೆ ಕಿರುಕುಳ ನೀಡುವ ಉದ್ದೇಶದಿಂದ ಆಗಿರುತ್ತವೆಯೇ ವಿನಾ ಯಾವುದೋ ಅಪರಾಧದ ಕಾರಣಕ್ಕಾಗಿ ಆಗಿರುವುದಿಲ್ಲ ಎಂಬ ಆರೋಪಗಳನ್ನು ಪುಷ್ಟೀಕರಿಸುವಂತೆ ಇವೆ ಈ ಮಾತುಗಳು. ಕೆಲವು 'ಪ್ರಕರಣ'ಗಳಲ್ಲಿ ವಾಸ್ತವದಲ್ಲಿ ಯಾವುದೇ ಅಪರಾಧ ನಡೆದಿರುವುದೇ ಇಲ್ಲ. ಇ.ಡಿ. ದಾಖಲಿಸುವ ಪ್ರಕರಣಗಳ ಪೈಕಿ ಅಪರಾಧಿಗಳಿಗೆ ಶಿಕ್ಷೆ ಆಗಿರುವುದು ಶೇಕಡ 0.5ರಷ್ಟು ಪ್ರಕರಣಗಳಲ್ಲಿ ಮಾತ್ರ. ಇದು ಇ.ಡಿ. ಕೆಲಸ ಮಾಡುತ್ತಿರುವ ರೀತಿ ಹೇಗಿದೆ ಎಂಬುದನ್ನೂ ತಿಳಿಸುತ್ತಿದೆ. ಇ.ಡಿ. ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರು ಕೋರ್ಟ್ ಆಡಿರುವ ಕಟು ಮಾತುಗಳಿಗೆ ನೇರವಾಗಿ ಉತ್ತರದಾಯಿ ಆಗಬೇಕು.

ದಿನದ ಟ್ವೀಟ್

ಮಗುವಿನ ಮನಸ್ಸಿರಲಿ



ಮಕ್ಕಳ ದಿನಾಚರಣೆಯ ಶುಭಾಶಯ. ನಮ್ಮೊಳಗಿರುವ ಮಗುವನ್ನು ಸದಾ ಜೀವಂತವಾಗಿ ಇರಿಸಿಕೊಳ್ಳೋಣ. ಮುಗ್ಧತೆ, ಕಲಿಯುವ ಕುತೂಹಲ, ಉತ್ಸಾಹ, ಅಪರಿಮಿತ ಶಕ್ತಿ ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಸಂತೋಷವನ್ನು ಕಂಡುಕೊಳ್ಳುವ ಸಾಮರ್ಥ್ಯ- ಮಕ್ಕಳಲ್ಲಿ ಇರುವ ಇಂತಹ ಗುಣಗಳ ಅಗತ್ಯವು ಜೀವನದ ಪ್ರತೀ ಹಂತದಲ್ಲೂ ಇರುತ್ತದೆ.

ಡಾ. ಸುಧೀರ್ ಕುಮಾರ್, ನರರೋಗ ತಜ್ಞ

ಕಿಡಿನುಡಿ



1990ರ ದಶಕದಲ್ಲಿ ನಾನು ಇರಾಕ್ ಅಥವಾ ಉತ್ತರ ಕೊರಿಯಾದಂತಹ ದೇಶಗಳಿಗೆ ಭೇಟಿ ನೀಡಿದಾಗ, ಎಲ್ಲೆಡೆ ಹಾಗೂ ಎಲ್ಲವುಗಳ ಮೇಲೆ ತನ್ನ ಭಾವಚಿತ್ರವನ್ನು ಅಚ್ಚುಹಾಕಿಸುವ ನಾಯಕನನ್ನು ಯಾವುದೇ ದೇಶ ಹೇಗೆ ಸಹಿಸಿಕೊಳ್ಳುತ್ತದೆ ಎಂದು ಯೋಚಿಸುತ್ತಿದ್ದೆ. ಭಾರತದಲ್ಲಿ ಹೀಗೇನಾದರೂ ಆದರೆ ಜನ ಅಸಹ್ಯಪಟ್ಟುಕೊಳ್ಳುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆದರೆ ನಾನು ಅಂದುಕೊಂಡಿದ್ದು ಎಷ್ಟು ತಪ್ಪಾಗಿತ್ತು...

ಶಾಹಿದ್ ಸಿದ್ದಿಕಿ, ಪತ್ರಕರ್ತ, ಆರ್‌ಎಲ್‌ಡಿ ರಾಷ್ಟ್ರೀಯ ಉಪಾಧ್ಯಕ್ಷ

25 ವರ್ಷಗಳ ಹಿಂದೆ

ಶನಿವಾರ, 15-11-1997

● **ಹೆಲಿಕಾಪ್ಟರ್ ದುರಂತದಲ್ಲಿ ಸಚಿವ ಸೋಮು ಸಾವು**

ಕಲ್ಕತ್ತ, ನ. 14– ಕೇಂದ್ರದ ರಕ್ಷಣಾ ಖಾತೆ ರಾಜ್ಯ ಸಚಿವ ಹಾಗೂ ಡಿಎಂಕೆ ಮುಖಂಡ ಎನ್.ವಿ.ಎನ್. ಸೋಮು ಹಾಗೂ ಮೂವರು ಸೇನಾಧಿಕಾರಿಗಳು ಅರುಣಾಚಲ ಪ್ರದೇಶದ ತವಾಂಗ್ ಸಮೀಪ ಇಂದು ಬೆಳಿಗ್ಗೆ ಸಂಭವಿಸಿದ ವಾಯುಪಡೆಯ ಚೇತಕ್ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟರು.

ದುರಂತದಲ್ಲಿ ಮಡಿದವರ ಅವಶೇಷಗಳು ಪತ್ತೆಯಾಗಿರುವ ಪ್ರದೇಶವು ಚೀನಾ ಗಡಿಗೆ ಹೊಂದಿಕೊಂಡಂತಿದೆ. ಸಚಿವರು ಅಲ್ಲಿಗೆ ಏಕೆ ಹೋಗಿದ್ದರು ಎಂಬ ಬಗ್ಗೆ ಇದುವರೆಗೆ ಸೇನೆ ಮೂಲಗಳು ಚಕಾರ ಎತ್ತಿಲ್ಲ.

● **ಸೋಮಶೇಖರ್‌ಗೆ 3 ವರ್ಷ ಕಠಿಣ ಶಿಕ್ಷೆ**

ಬೆಂಗಳೂರು, ನ. 14– ಮೈಸೂರಿನ ಕಾರ್ಮಿಕ ಸತ್ಯದೇವ್ ಕೊಲೆ ಆರೋಪಿಯಾದ ಅಂದಿನ ಮೈಸೂರು ಪೊಲೀಸ್ ಡೆಪ್ಯುಟಿ ಕಮಿಷನರ್ ಸೋಮಶೇಖರ್ ಅವರಿಗೆ ಹೈಕೋರ್ಟ್ ಇಂದು 3 ವರ್ಷಗಳ ಕಠಿಣ ಸಜೆ ಮತ್ತು ಒಂದು ಲಕ್ಷ ರೂಪಾಯಿ ಜುಲ್ಮಾನೆಯನ್ನು ವಿಧಿಸಿತು.

ಸೋಮಶೇಖರ್, ಅವರ ಪತ್ನಿ ಹಾಗೂ ಇಬ್ಬರು ಪುತ್ರರು ಮೈಸೂರಿನ ಲಲಿತ್ ಮಹಲ್ ಪ್ಯಾಲೇಸ್ ಹೋಟೆಲ್‌ನ ಈಜುಕೊಳಕ್ಕೆ ಬಂದಿದ್ದರು. ಆಗ ಈಜುಡುಗೆಯಲ್ಲಿದ್ದ ಸೋಮಶೇಖರ್ ಅವರ ಪತ್ನಿಯನ್ನು ಸತ್ಯದೇವ್ ಕೆಟ್ಟ ದೃಷ್ಟಿಯಿಂದ ನೋಡಿದನೆಂಬ ಕಾರಣದಿಂದ ಕುಪಿತರಾದ ರೆನ್ನಲಾದ ಸೋಮಶೇಖರ್ ಅವರು ಸತ್ಯದೇವ್‌ಗೆ ಹೊಡೆದ ಕಾರಣದಿಂದ ಆತ ಈಜುಕೊಳಕ್ಕೆ ಬಿದ್ದು ಮೃತಪಟ್ಟಿದ್ದ ಎಂದು ಆಪಾದಿಸಿ ಪೊಲೀಸರು ಮೊಕದ್ದಮೆ ದಾಖಲು ಮಾಡಿದ್ದರು.

50 ವರ್ಷಗಳ ಹಿಂದೆ

ಬುಧವಾರ, 15-11-1972

● **ನದಿ ಯೋಜನೆಗಳಲ್ಲಿ ವಿಳಂಬಕ್ಕೆ ಮೈಸೂರೇ ಹೊಣೆ: ಸಚಿವ ರಾವ್**

ನವದೆಹಲಿ, ನ. 14– ಘಟಪ್ರಭಾ, ಮಲಪ್ರಭಾ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ನಿರ್ಮಾಣದಲ್ಲಿ ಸಂಭವಿಸಿರುವ ವಿಳಂಬಕ್ಕೆ ಹೊಣೆಗಾರಿಕೆ ಸಂಪೂರ್ಣವಾಗಿ ಮೈಸೂರು ಸರ್ಕಾರದ್ದೇ ಆಗಿದೆಯೆಂದು ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವ ಡಾ. ಕೆ.ಎಲ್. ರಾವ್ ಲೋಕಸಭೆಯಲ್ಲಿ ತಿಳಿಸಿದರು.

ಯೋಜನೆಗಳಿಗೆ ಇಲ್ಲಿವರೆಗೆ ಕೇವಲ 68 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಒಟ್ಟು 260 ಕೋಟಿ ರೂ. ಬೇಕಾಗುವ ಆ ಮೂರು ಯೋಜನೆಗಳ ನಿರ್ಮಾಣ ಪೂರ್ಣಗೊಳಿಸಲು ಮೈಸೂರು ಸರ್ಕಾರ, 'ಇನ್ನೂ ಬಹು ದೂರ ದಾರಿ ಸವೆಸಬೇಕಾಗಿದೆ' ಎಂದು ಅವರು ಪ್ರಶ್ನೋತ್ತರ ಕಾಲದಲ್ಲಿ ವಿವರಿಸಿದರು.

● **ಅವಶ್ಯವಾದರೆ ಅಕ್ಕಿ, ದ್ವಿದಳ ಧಾನ್ಯ, ಗೋಧಿ ಆಮದು: ಚವಾಣ್**

ನವದೆಹಲಿ, ನ. 14– ಜನತೆಗೆ ಸರಿಯಾಗಿ ಸರಬರಾಜು ಮಾಡುವುದಕ್ಕಾಗಿ ಅವಶ್ಯವಾದರೆ ಅಕ್ಕಿ, ದ್ವಿದಳ ಧಾನ್ಯ ಮತ್ತು ಗೋಧಿಯನ್ನು ಆಮದು ಮಾಡಿಕೊಂಡು ಬೆಲೆ ಮಟ್ಟವನ್ನು ಕಾಪಾಡುವ ದೃಢಸಂಕಲ್ಪವನ್ನು ಹಣಕಾಸು ಸಚಿವ ವೈ.ಬಿ. ಚವಾಣ್ ವ್ಯಕ್ತಪಡಿಸಿದ ನಂತರ, ಲೋಕಸಭೆ ಇಂದು ಸದ್ಯದ ಬೆಲೆ ಏರಿಕೆಗಾಗಿ ಸರ್ಕಾರವನ್ನು ಖಂಡಿಸಲು ವಿರೋಧ ಪಕ್ಷಗಳು ಮಂಡಿಸಿದ್ದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿತು.

ಕಮ್ಯುನಿಸ್ಟ್ ಪಕ್ಷದ ಸದಸ್ಯ ಎಸ್.ಎಂ. ಬ್ಯಾನರ್ಜಿ ಅವರು ಮಂಡಿಸಿ, ಎಲ್ಲ ವಿರೋಧ ಪಕ್ಷಗಳೂ ಬೆಂಬಲ ಕೊಟ್ಟಿದ್ದ ಆ ಸೂಚನೆ 185- 34 ಮತಗಳಿಂದ ಬಿದ್ದುಹೋಯಿತು.

ಸುಸ್ಥಿರ ಆರ್ಥಿಕ ಅಭಿವೃದ್ಧಿಗೆ ನೈಸರ್ಗಿಕ ಪರಿಸರದ ಪೋಷಣೆ ಅತ್ಯಗತ್ಯ

ಬಂಡವಾಳ ಹರಿವು: ಹಾದಿ ಹಸಿರಾಗಿರಲಿ



ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಮನೆಮಾತಾಗುವಷ್ಟು ಯಶಸ್ವಿಯಾಗಿರುವ ಚಲನಚಿತ್ರ 'ಕಾಂತಾರ', ರಾಜ್ಯ ಸರ್ಕಾರವು ಇತ್ತೀಚೆಗೆ ಆಯೋಜಿಸಿದ್ದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲೂ ಸದ್ದು ಮಾಡಿತು. ಕಡಿಮೆ ಹಣವಿದ್ದರೂ ಕ್ಷಮತೆಯಿಂದ ಹೂಡಿ, ಶಿಸ್ತಿನಿಂದ ಉದ್ಯಮ ನಿರ್ವಹಿಸಿದರೆ ಲಾಭ ಸಾಧ್ಯವೆಂದು, ಆ ಸಿನಿಮಾವನ್ನೇ ಉದಾಹರಿಸಿ ಕೇಂದ್ರ ವಾಣಿಜ್ಯ ಸಚಿವರು ಉದ್ಯಮಿಗಳ ಗಮನಸೆಳೆದರು. ಆರ್ಥಿಕ ಬೆಳವಣಿಗೆ ಹಾಗೂ ವ್ಯಾಪಕ ಉದ್ಯೋಗ ಸೃಷ್ಟಿಯು ಸಾಧ್ಯವಾಗಿ ಅಭಿವೃದ್ಧಿ ಫಲವು ಸಕಲರಿಗೂ ತಲುಪುವಂತಾಗಲು, ಹಣ ಹೂಡಿಕೆಯ ಈ ಬಗೆಯ ಹರಿವು ಅಗತ್ಯ ಎಂಬುದು ಎಲ್ಲರೂ ಒಪ್ಪುವ ಮಾತೇ. ಪ್ರಸ್ತುತ ವಾರ್ಷಿಕ ಸುಮಾರು ಮೂರೂಕಾಲು ಲಕ್ಷ ಕೋಟಿ ಅಮೆರಿಕನ್ ಡಾಲರ್‌ನಷ್ಟು ಇರುವ ದೇಶದ ಆರ್ಥಿಕತೆಯ ಗಾತ್ರವು ಇನ್ನು ಆರು ವರ್ಷಗಳಲ್ಲಿ ಐದು ಲಕ್ಷ ಕೋಟಿ ಡಾಲರ್‌ಗೆ ತಲುಪಲು ಆಗ ಸಾಧ್ಯವೆಂದು ಭಾರತೀಯ ರಿಸರ್ವ್ ಬ್ಯಾಂಕ್ ಸಹ ಅಭಿಪ್ರಾಯಪಟ್ಟಿದೆ.

ಕರ್ನಾಟಕವೂ ಇನ್ನು ಮೂರು ವರ್ಷಗಳಲ್ಲಿ ಒಂದೂವರೆ ಲಕ್ಷ ಕೋಟಿ ಅಮೆರಿಕನ್ ಡಾಲರ್‌ನಷ್ಟು ಗಾತ್ರದ ಆರ್ಥಿಕತೆಯಾಗುವ ಗುರಿಯನ್ನು ರಾಜ್ಯ ಸರ್ಕಾರ ಮುಂದಿಟ್ಟಿದೆ. ಇದನ್ನು ಸಾಧಿಸಲು ಶೇಕಡ 8ರ ಆಸುಪಾಸಿನ ಈಗಿನ ಜಿಡಿಪಿ ಬೆಳವಣಿಗೆ ದರವು ಎರಡಂಕಿ ದಾಟಬೇಕಿರುವ ಅಗತ್ಯವನ್ನು ನೀತಿ ಆಯೋಗವೂ ಸೇರಿದಂತೆ ಆರ್ಥಿಕ ತಜ್ಞರೆಲ್ಲ ಸಾರುತ್ತಿದ್ದಾರೆ. ಹೀಗಾಗಿ, ವಿದೇಶಿ ಹಾಗೂ ದೇಶಿ ಬಂಡವಾಳ ಹೂಡಿಕೆಯತ್ತ ಎಲ್ಲರ ಚಿತ್ತ ಹರಿಯುವುದು ಸಹಜವೇ.

ನಿಜ, ಅಂಥ ಬಂಡವಾಳ ಹೂಡಿಕೆ ಹಾಗೂ ಅದರ ಶಿಸ್ತಿನ ನಿರ್ವಹಣೆ ಇಂದಿನ ಅಗತ್ಯ. ಏರುತ್ತಿರುವ ಜನಸಂಖ್ಯೆ ಮತ್ತು ಬೆಳೆಯುತ್ತಿರುವ ಅಭಿವೃದ್ಧಿ ಆಶೋತ್ತರಗಳ ಭಾರವು ಈ ಆರ್ಥಿಕ ಬೆಳವಣಿಗೆಯ ಮೇಲಿದೆ. ಆದರೆ, ಸಾಧಿಸಿದ ನಂತರವೂ ಈ ಅಭಿವೃದ್ಧಿಯು ಸುಸ್ಥಿರವಾಗಿ ಇರಬೇಕಾದರೆ, ಸರ್ಕಾರ, ಕೈಗಾರಿಕೆ ಹಾಗೂ ಉದ್ಯಮ ವಲಯಗಳು ನೆಲ-ಜಲ-ಗಾಳಿಯ ಸುರಕ್ಷತೆಯತ್ತಲೂ ಕಾಳಜಿ ವಹಿಸಬೇಕಿದೆ. ಹಿಂದೆಂದಿಗಿಂತಲೂ ಇದು ಹೆಚ್ಚು ಅನಿವಾರ್ಯವಾಗುತ್ತಿರುವುದರಿಂದ ಪರಿಸರದ ಸುಸ್ಥಿರ ನಿರ್ವಹಣೆಯ ಹೊಣೆಯನ್ನು ಉದ್ಯಮಲೋಕಕ್ಕೆ ನೆನಪಿಸಲೇಬೇಕಿದೆ.


ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳು ಸಾಧಿಸುತ್ತಿರುವ ಆರ್ಥಿಕ ಪ್ರಗತಿಯನ್ನು ಹಿಂದೆಳೆದು ಕುಗ್ಗಿಸುತ್ತಿರುವ ಹಲವಾರು ಅಂಶಗಳನ್ನು ಈಗಾಗಲೇ ಗುರುತಿಸಿಯಾಗಿದೆ. ಪರಿಸರ ನಾಶದ ಸಂಗತಿ ಅವುಗಳಲ್ಲಿ ಪ್ರಮುಖವಾದದ್ದು. ಇದನ್ನು ಸ್ಥೂಲವಾಗಿ ಎರಡು ಆಯಾಮಗಳಲ್ಲಿ ಗಮನಿಸಬಹುದು. ಮೊದಲಿನದು, ಜಾಗತಿಕ ಹವಾಮಾನ ಬದಲಾವಣೆಯು ಹುಟ್ಟುಹಾಕುತ್ತಿರುವ ಸವಾಲುಗಳು. ಇನ್ನೊಂದು, ದೂರದೃಷ್ಟಿರಹಿತ ಆಡಳಿತ ನೀತಿ ಹಾಗೂ ಅಭಿವೃದ್ಧಿಯ ತಪ್ಪು ಮಾದರಿಗಳಿಂದಾಗಿ ಅನಗತ್ಯವಾಗಿ ಜರುಗುತ್ತಿರುವ ನೀರು- ನೆಲ, ಗಗನ- ಕಾನನಗಳ ಪರಿಸರ ನಾಶದ ಪರಿಣಾಮ.

ಹವಾಮಾನ ಬದಲಾವಣೆಯು ದೇಶದ ಆರ್ಥಿಕತೆಗೆ ಭಾರಿ ಹೊಡೆತವನ್ನೇ ನೀಡುತ್ತಿದೆ. ಚಂಡಮಾರುತ, ಬಿಸಿಗಾಳಿ, ನೆರೆ, ಬರದಂತಹ ನೈಸರ್ಗಿಕ ಪ್ರಕೋಪಗಳು ಪ್ರತಿವರ್ಷ ಏರುತ್ತಿವೆ. 2030ರ ವೇಳೆಗೆ ಜಗತ್ತಿನಲ್ಲಿ ಪ್ರತಿವರ್ಷ 560ಕ್ಕೂ ಮಿಕ್ಕಿ ಅಂಥ ಬೃಹತ್ ಅವಘಡಗಳು ಜರುಗಲಿವೆಯೆಂದು ವಿಶ್ವಸಂಸ್ಥೆಯ ಪರಿಸರ ಸಂಘಟನೆ (ಯು.ಎನ್.ಡಿ.ಪಿ.) ಅಂದಾಜಿಸಿದೆ. ಒಂದೊಂದು ಪ್ರಕೃತಿ ವಿಕೋಪ ಘಟಿಸಿದಾಗಲೂ ಬರಿದಾಗುವ ಗದ್ದೆ- ತೋಟ, ಕುಸಿಯುವ ಮನೆ- ಮಠ, ಬಿರಿಯುವ ರಸ್ತೆ- ಸೇತುವೆ, ಜಜ್ಜರಿತವಾಗುವ ನಗರ–ಹಳ್ಳಿಗಳು! ಈ ನಷ್ಟಗಳು ಜನಜೀವನವನ್ನು ಇನ್ನಿಲ್ಲದ ಸಂಕಷ್ಟಕ್ಕೆ ತಳ್ಳುತ್ತಿವೆ.

ಇವನ್ನೆಲ್ಲ ನಿರ್ವಹಿಸಲು ಪ್ರತಿವರ್ಷ ಜಾಗತಿಕವಾಗಿ ಹತ್ತು ಸಾವಿರ ಕೋಟಿ ಡಾಲರಿಗೂ ಮಿಕ್ಕಿ ಖರ್ಚಾಗುತ್ತಿದ್ದು, ಭವಿಷ್ಯದಲ್ಲಿ ಅದು ತ್ರಿಗುಣವಾಗಲಿದೆ ಎನ್ನುತ್ತದೆ ಅದರ ವರದಿ. ಭಾರತ ಸಹ ಸುಮಾರು ಸಾವಿರ ಕೋಟಿ ಡಾಲರ್‌ನಷ್ಟು ಹಣವನ್ನು ಪ್ರತಿವರ್ಷ ನೈಸರ್ಗಿಕ ಪ್ರಕೋಪಗಳಿಂದಾಗಿ ಕಳೆದುಕೊಳ್ಳುತ್ತಿರುವುದನ್ನು ಜಾಗತಿಕ ಹವಾಮಾನ ಸಂಸ್ಥೆ ತನ್ನ ಇತ್ತೀಚಿನ 'ಏಷ್ಯಾದ ಹವಾಮಾನ ಪರಿಸ್ಥಿತಿ ವರದಿ'ಯಲ್ಲಿ ಹೇಳಿದೆ. ತಾತ್ಪರ್ಯವಿಷ್ಟೇ. ಪರಿಸರ ನಾಶದ ವೆಚ್ಚ ಹಾಗೂ ಪರಿಣಾಮವನ್ನು ಲೆಕ್ಕಹಾಕಿದರೆ, ಸರ್ಕಾರ ಹಾಗೂ ಖಾಸಗಿ ವಲಯವು ಸೃಷ್ಟಿಸುತ್ತಿರುವ ಆರ್ಥಿಕ ಅಭಿವೃದ್ಧಿಯ ಫಲವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಸೋಲುತ್ತಿದ್ದೇವೆ. ಆರ್ಥಿಕ ಅಭಿವೃದ್ಧಿ ಎಂಬ ಹುಣಸೆಹಣ್ಣು ನೈಸರ್ಗಿಕ ಪ್ರಕೋಪಗಳ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದೆ!

ಎರಡನೇ ಬಗೆಯ ಪರಿಸರ ನಾಶವು ಸರ್ಕಾರದ ತಪ್ಪು ನೀತಿ ಹಾಗೂ ಅಭಿವೃದ್ಧಿ ಕಾಮಗಾರಿಗಳ ಅವೈಜ್ಞಾನಿಕ ಅನುಷ್ಠಾನದಿಂದಲೇ ಜರುಗುವಂಥದ್ದು. ಉದ್ಯಮಗಳು ಬೆಳೆಯಲು ಹಣ, ಮಾನವ ಸಂಪನ್ಮೂಲ ಹಾಗೂ ಉದ್ಯಮಶೀಲತೆಯ ಜೊತೆ ಭೂಮಿಯೂ ಬೇಕೆಂಬುದು ಅರ್ಥಶಾಸ್ತ್ರದ ಪ್ರಾಥಮಿಕ ಪಾಠ. ಆದರೆ, ನೆಲವನ್ನು ಬರೀ ರಿಯಲ್ ಎಸ್ಟೇಟ್ ಜಾಗದಂತೆ ನೋಡುತ್ತಿರುವ ಪ್ರಸಕ್ತ ಆರ್ಥಿಕ ನೀತಿಯಿಂದಾಗಿ, ಭೂಮಿಯೊಂದಿಗೆ ಅಂತರ್ಗತವಾಗಿರುವ ನೆಲ-ಜಲ-ಕಾಡು-ಗಾಳಿ ಪರಿಸರದ ಮಹತ್ವವೇ ಕಡೆಗಣನೆಗೆ ಒಳಗಾಗಿದೆ. ಪರಿಸರ ಸುರಕ್ಷತೆಗೆಂದೇ ರೂಪಿಸಲಾಗಿರುವ ಕಾನೂನಾತ್ಮಕ ವಿಧಿ-ನಿಷೇಧಗಳನ್ನು ಕನಿಷ್ಠ ಮಟ್ಟದಲ್ಲಿ ಪಾಲಿಸಲೂ ಬಹುಪಾಲು ಕೈಗಾರಿಕೆ ಹಾಗೂ ಉದ್ಯಮಗಳು ಸೋಲುತ್ತಿವೆ!

ಇದರ ಪರಿಣಾಮವಾದರೂ ಏನು? ಕೃಷಿ ಹಾಗೂ ಉದ್ದಿಮೆಯ ವಿಸ್ತರಣೆಯಿಂದಾಗಿ, ಅಳಿದುಳಿದ ಅಮೂಲ್ಯ ಕಾಡೂ ನಾಶವಾಗುತ್ತಿದೆ. ತ್ಯಾಜ್ಯ ಸಂಸ್ಕರಣೆಯ ಉತ್ತರದಾಯಿತ್ವವನ್ನೇ ತೋರದ ಕೈಗಾರಿಕೆಗಳಿಂದಾಗಿ ಹೊಳೆ-ಕೆರೆ, ನದಿ-ಸಮುದ್ರದ ಮಾಲಿನ್ಯ ಮಿತಿ ಮೀರುತ್ತಿದೆ. ಅಭಿವೃದ್ಧಿ ಯೋಜನೆಗಳ ಅವೈಜ್ಞಾನಿಕ, ಅಸಡ್ಡೆಯ ಕಾಮಗಾರಿಗಳಿಂದಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ಭೂಕುಸಿತಗಳಾಗುತ್ತಿವೆ. ಕೃತಕ ರಾಸಾಯನಿಕಗಳ ಒಳಸುರಿಗೆ ನಿಯಂತ್ರಣವಿಲ್ಲದೆ ಕೃಷಿಭೂಮಿ ಉತ್ಪಾದಕತೆ ಕುಸಿಯುತ್ತಿದೆ. ಭೂಮಿಯಾಳದ ಅಂತರ್ಜಲವೂ ಕೀಟನಾಶಕ ಹಾಗೂ ಭಾರಲೋಹದ ಮಾಲಿನ್ಯಕ್ಕೊಳಗಾಗಿ ಕುಡಿಯುವ ಶುದ್ಧ ನೀರೂ ದುರ್ಲಭವಾಗುತ್ತಿದೆ.



ಒಂದು ಬೃಹತ್ ಆರ್ಥಿಕತೆಯಾಗಿ ಬೆಳೆದು ನಿಂತಿರುವ ಈ ಗಳಿಗೆಯಲ್ಲೂ, ದೇಶದ ಎಂಬತ್ತು ಪ್ರತಿಶತಕ್ಕೂ ಹೆಚ್ಚಿನ ಜಲಸಂಪನ್ಮೂಲವು ಅತಿಯಾಗಿ ಮಾಲಿನ್ಯಗೊಂಡಿರುವುದನ್ನು ಕೇಂದ್ರ ಸರ್ಕಾರವೇ ಒಪ್ಪಿಕೊಂಡಿದೆ. ಉಸಿರಾಡಲೂ ಜನ ಪರದಾಡುವಷ್ಟು ಹವಾಮಾನ ಹದಗೆಟ್ಟಿರುವ ದೆಹಲಿ ಅಥವಾ ಸಣ್ಣ ಮಳೆಗೂ ನೆರೆ ಕಾಣುವ ಬೆಂಗಳೂರು- ಇವೆಲ್ಲ, ಈಗಿನ ಪರಿಸರ ತುರ್ತುಪರಿಸ್ಥಿತಿಯನ್ನು ಢಾಳಾಗಿ ತೋರುತ್ತಿರುವ ಚಿಹ್ನೆಗಳಷ್ಟೆ!

ಜಾಗತಿಕ ಹವಾಮಾನ ಬದಲಾವಣೆ ಹಾಗೂ ಆಂತರಿಕ ಪರಿಸರ ನಿರ್ವಹಣೆಯ ವೈಫಲ್ಯ- ಇವೆರಡರ ಜವಾಬ್ದಾರಿಯನ್ನು ಈಗಲಾದರೂ ಸರ್ಕಾರ ಹಾಗೂ ಖಾಸಗಿ ಕ್ಷೇತ್ರ ಜಂಟಿಯಾಗಿ ತೆಗೆದುಕೊಳ್ಳಬೇಕಿದೆ. ಪ್ರವರ್ತಕರು ಹಾಗೂ ಷೇರುದಾರರಿಗೆ ತರುವ ಲಾಭವನ್ನು ದೀರ್ಘಕಾಲ ಉಳಿಸಿಕೊಳ್ಳುವ ಸೀಮಿತ ಉದ್ದೇಶಕ್ಕಾದರೂ ಉದ್ಯಮಗಳು ಪರಿಸರದ ಅಂಶಗಳನ್ನು ಸುಸ್ಥಿರವಾಗಿ ನಿರ್ವಹಿಸಲೇಬೇಕಿದೆ. ನೀರು, ಅದಿರು, ಮರಮಟ್ಟು, ಕೃಷಿತ್ಯಾಜ್ಯದಂತಹ ಕೈಗಾರಿಕಾ ಕಚ್ಚಾವಸ್ತುಗಳ ಬಳಕೆ, ಉತ್ಪನ್ನಗಳ ಉತ್ಪಾದನಾ ಪ್ರಕ್ರಿಯೆ, ತ್ಯಾಜ್ಯಗಳ ಸಂಸ್ಕರಣೆ ಹಾಗೂ ವಿಲೇವಾರಿ, ವಾಣಿಜ್ಯ ವಸ್ತುಗಳ ಪ್ಯಾಕೇಜಿಂಗ್- ಈ ಎಲ್ಲ ಹಂತಗಳಲ್ಲಿ ಪರಿಸರ ಸಂರಕ್ಷಣಾ ಸೂತ್ರಗಳನ್ನು ಅಳವಡಿಸಿಕೊಳ್ಳಬೇಕಿದೆ. ಗಣಿಗಾರಿಕೆ, ಬಂದರು, ಹೆದ್ದಾರಿ, ರೈಲುಮಾರ್ಗ, ನಗರ ವಿಸ್ತರಣೆಯಂಥ ಯೋಜನೆಗಳಲ್ಲಿ ಪರಿಸರ ಸುರಕ್ಷತೆಗೆ ಆದ್ಯತೆ ದೊರೆಯಬೇಕಿದೆ. ಇದಕ್ಕಾಗುವ ವೆಚ್ಚವನ್ನು ಅನಗತ್ಯವೆಂದು ಪರಿಗಣಿಸದೆ, ಭವಿಷ್ಯದ ಕ್ಷೇಮಕ್ಕಾಗಿ ಮಾಡುವ ಹೂಡಿಕೆಯೆಂದು ಭಾವಿಸಬೇಕಿದೆ. ಈ ಕುರಿತ ಜಾಗತಿಕ ಒಪ್ಪಂದಗಳು ಹಾಗೂ ಈ ನೆಲದ ಕಾನೂನುಗಳನ್ನು ಪಾಲಿಸಬೇಕಿದೆ. ನಡೆಯುವ ಹಾದಿ ಹಾಗೂ ಹಿಂದೆ ಬಿಡುವ ಹೆಜ್ಜೆಗಳು ಪರಿಸರದ ಆರೋಗ್ಯಕ್ಕೆ ಸದಾ ಪೂರಕವಾಗಿರುವಂತೆ ಉದ್ಯಮಗಳು ಬಂಡವಾಳ ಹೂಡುವಾಗ ಎಚ್ಚರ ವಹಿಸಲೇಬೇಕಿದೆ. ಎಲ್ಲರೂ ಬಯಸುವ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಆಗ ಸಾಧ್ಯವಾದೀತು.

ಇವನ್ನೆಲ್ಲ ಚರ್ಚಿಸಲೆಂದೇ, ವಿಶ್ವಸಂಸ್ಥೆಯ 'ಹವಾಮಾನ ಬದಲಾವಣೆ ಕುರಿತ ಇಪ್ಪತ್ತೇಳನೆಯ ಜಾಗತಿಕ ಸಮ್ಮೇಳನ'ವು (CoP27) ಇದೇ 6ರಿಂದ 18ರವರೆಗೆ ಈಜಿಪ್ಟಿನಲ್ಲಿ ಜರುಗುತ್ತಿದೆ. ಅಲ್ಲಿಯೂ 'ಕಾಂತಾರ' ಅನುರಣಿಸಿದ್ದರೆ ಚೆನ್ನಾಗಿತ್ತೇನೋ! ಏಕೆಂದರೆ, ಆ ಚಲನಚಿತ್ರದ ಅಂತಿಮ ಆಶಯವೂ ಸಮಾಜ ಹಾಗೂ ನಿಸರ್ಗದ ನಡುವೆ ಸಮನ್ವಯದ ಸಂಬಂಧ ಇರಬೇಕೆಂಬುದೇ ಆಗಿದೆ. ಸರ್ಕಾರದ ನೀತಿ ಹಾಗೂ ಉದ್ಯಮಗಳ ಹೂಡಿಕೆಗೆ ಅಂಥ ವಿವೇಕದ ಜರೂರತ್ತಿದೆ ಈಗ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ರಾಜಕೀಯ ವ್ಯಾಕರಣ

● ಲಿಂಗರಾಜು ಡಿ.ಎಸ್.

'ರಾಜಕೀಯದಲ್ಲಿ ವ್ಯಾಕರಣದ ಪ್ರಭಾವ ಅಂತ ಪುಸ್ತಕ ಬರೀಬೇಕು ಅಂತ ಇವ್ನಿ ಕಲಾ' ಅಂದ್ರು ತುರೇಮಣೆ.

'ಅಲ್ಲಾ ಸಾ, ರಾಜಕೀಯಕ್ಕೂ ವ್ಯಾಕರಣಕ್ಕೂ ಏನು ಸಂಬಂಜ?' ಆಶ್ಚರ್ಯದಿಂದ ಕೇಳಿದೆ.

'ಸಿದ್ದಣ್ಣಗೆ ಗೊತ್ತಿಲ್ಲದ ವ್ಯಾಕರಣ ಯಾವುದದೋ? ಅವರೇ ಅಂತೆ ಏರ್‌ಪೋರ್ಟ್‌ಗೆ ನಾಮಪದ ಕೊಟ್ಟು ತೊಟ್ಟಿಲಿಗೆ ಹಾಕಿ ತೂಗಿದ್ದು!'

'ಸರಿ ಸಾ, ಈಗ ರಾಜಕೀಯದಲ್ಲಿ ಯಾವ ವ್ಯಾಕರಣ ನಡಿತಾ ಅದೆ' ಅಂತಂದೆ.

'ಇದು ಪ್ರತಿಮಾಲಂಕಾರದ ಕಾಲ ಕನೋ. ವಿಕಾಸಪುರುಷನ ಮಾತು ಕೇಳಿ ಬಸಣ್ಣನ ಮುಖಕಮಲ ಅರಳಿತು' ಇದು ರೂಪಕಾಲಂಕಾರ. ರಾಜಕಾರಣಿಗಳ ಎಲ್ಲಾ ಮಾತು ಶಬ್ದಾಲಂಕಾರವೇ' ಅಂತ ವಿವರಿಸಿದರು.

'ರಾಜಕೀಯದಲ್ಲಿ ಕ್ರಿಯಾಪದ ಇಲ್ಲುವರಾ?' ಅಂತ ಕೇಳಿದೆ. 'ಯಾಕಿಲ್ಲ? ಗುಂಡಿ ಮುಚ್ಚಲು ಬಿಬಿಎಂಪಿಗೆ ವರುಷ ಗುಂಡಿಗೆ ನಿಮಿಷ' ಅನ್ನೋ ಸಂಭಾವನಾರ್ಥಕ ಪದ ಕೇಳಿಲ್ಲವಾ?' ಅಂದರು.

'ಸ್ವರಗಳು ಅಂದ್ರೇನು ಸಾ?' ಕೇಳಿದೆ.

'ರಾಜಕೀಯದಲ್ಲಿ ಯಾರಿಗೂ ದೀರ್ಘಸ್ವರ ಇಲ್ಲ ಕಲಾ. ಹೈಕಮಾಂಡ್ ಮುಂದೆ ಎಲ್ಲರದ್ದೂ ಹ್ರಸ್ವ ಸ್ವರ' ಅಂದ್ರು ಒಗಟಾಗಿ.

'ನುಡಿಗಟ್ಟು ಅಂದ್ರೇನು ಸಾ?' ಅಂತ ಕೇಳಿದೆ.

'ಧರ್ಮಾಧಿಪತಿಗಳು, ತ್ಯಾಗಜೀವಿಗಳು ಅನ್ನೋವು ರಾಜಕೀಯ ನುಡಿಗಟ್ಟುಗಳು ಕಲಾ' ಅಂದರು. 'ವ್ಯಂಜನಗಳ ಪಾತ್ರ ಏನು?' ಅಂತ ಕೇಳಿದೆ. 'ಗಂಟಲನ್ನು ಭಾಗಶಃ ಮುಚ್ಚಿ ಖುಷಿಯಿಂದ ಉಚ್ಚಾರಣೆ ಮಾಡೊ ಅಕ್ಷರಗಳೇ ವ್ಯಂಜನಗಳು. ಉದಾಹರಣೆಗೆ ಪರ್ಸೆಂಟೇಜ್. ಇದು ವರ್ಗೀಯ ವ್ಯಂಜನ' ಅಂದ್ರು.

'ಸಂಧಿಕಾರ್ಯ ಅಂದ್ರೇನು?' ಅಂತಂದೆ.

'ಎಲೆಕ್ಷನ್ ಹತ್ತಿರ ಆದಂಗೆ ಶಾಸಕರ ಪಕ್ಷಾಂತರ ಕ್ರಿಯೆ ಶುರುವಾದಾಗ ಅದು ಒಂದು ಪಕ್ಷಕ್ಕೆ ಲೋಪಸಂಧಿ, ಇನ್ನೊಂದಕ್ಕೆ ಆಗಮಸಂಧಿ ಆಯ್ತದೆ' ಅಂತ ವಿವರಿಸಿದರು. 'ರಾಜಕೀಯದಲ್ಲಿ ಲೇಖನ ಚಿಹ್ನೆಗಳು ಇಲ್ಲುವರಾ?' ವಿಚಾರಿಸಿದೆ.

'ಅದೆ! ಎಲೆಕ್ಷನ್ನಲ್ಲಿ ಬಹುಮತ ಬರದಿದ್ರೆ ಪ್ರಶ್ನಾರ್ಥಕ. ಸಂಧಿಕಾರ್ಯಕ್ಕೆ ಅವಕಾಶ ಇರುವಷ್ಟು ಸೀಟು ಬಂದಿದ್ರೆ ಅರ್ಧವಿರಾಮ. ಸೋತ ಪಕ್ಷಕ್ಕೆ ಪೂರ್ಣವಿರಾಮ' ಅಂದ್ರು.

ಸಂಗತ

ಎಲ್ಲಕ್ಕೂ ಎಳೆತನ್ನಿ ರಾಜಕೀಯ!

ನಮ್ಮ ಬಹುತೇಕ ಸಮಸ್ಯೆಗಳಿಗೆ ರಾಜಕೀಯದ ಮೂಲಕವೇ ಪರಿಹಾರ ಕಂಡುಕೊಳ್ಳಬೇಕಿದ್ದರೂ ರಾಜಕೀಯದ ಕುರಿತು ನಕಾರಾತ್ಮಕ ಧೋರಣೆ ತಳೆಯುವುದು ಸರಿಯೇ?

● ಎಚ್.ಕೆ.ಶರತ್

'ರಾಜಕೀಯಗೊಳಿಸಬೇಡಿ', 'ರಾಜಕೀಯ ಬೆರೆಸಬೇಡಿ', 'ರಾಜಕೀಯ ಎಳೆದು ತರಬೇಡಿ'... ಇಂತಹ ಮಾತುಗಳು ನಮ್ಮ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ರಾಜಕೀಯ ಮತ್ತು ರಾಜಕಾರಣಿಗಳ ಕುರಿತು ತಮ್ಮಲ್ಲಿ ಬೇರೂರಿರುವ ಅಸಹನೆ ವ್ಯಕ್ತಪಡಿಸುವ ಸಲುವಾಗಿ ಜನಸಾಮಾನ್ಯರು ಹಾಗೂ ಸರ್ಕಾರದ ಕಾರ್ಯವೈಖರಿ ಟೀಕಿಸಲು ಮುಂದಾಗುವ ವಿರೋಧ ಪಕ್ಷದವರ ಬಾಯಿ ಮುಚ್ಚಿಸಲು ಆಳುವ ಪಕ್ಷದ ರಾಜಕಾರಣಿಗಳು ಈ ಮಾತುಗಳನ್ನು ಆಗಾಗ ಬಳಸುವುದುಂಟು.

ತಮ್ಮ ರಾಜಕೀಯ ಒಲವು- ನಿಲುವುಗಳನ್ನು ಅಭಿವ್ಯಕ್ತಪಡಿಸಲು ಸಾಹಿತಿಗಳು ಸಾಹಿತ್ಯಕ ವೇದಿಕೆಗಳನ್ನು ಬಳಸಿಕೊಂಡಾಗಲೂ 'ಸಾಹಿತ್ಯ ಕ್ಷೇತ್ರಕ್ಕೆ ರಾಜಕೀಯ ಎಳೆದು ತರಬೇಡಿ' ಎಂದು ಆಕ್ಷೇಪಿಸುವವರು ಇದ್ದಾರೆ. ಹಾಗಾದರೆ ಯಾವುದಕ್ಕೆಲ್ಲ ರಾಜಕೀಯ ಬೆರೆಸಬಾರದು? ಯಾವುದನ್ನೆಲ್ಲ ರಾಜಕೀಯಗೊಳಿಸಬಾರದು? ಯಾವುದರಲ್ಲಿ ರಾಜಕೀಯ ಮೂಗು ತೂರಿಸಬಾರದು? ಈ ಕುರಿತು ಗೆರೆ ಎಳೆಯಲು ಸಾಧ್ಯವೇ? ಈಗಾಗಲೇ ನಾವು ಎಳೆದುಕೊಂಡಿರುವ ಗೆರೆ ಸೂಕ್ತ ಸ್ಥಳದಲ್ಲಿ ಇದೆಯೇ?

ನಮ್ಮ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಿರುವುದು ರಾಜಕೀಯದ ಮೂಲಕವೇ ಎನ್ನುವ ಅಂಶವನ್ನು ಹಿನ್ನೆಲೆಗೆ ಸರಿಸಿ, ರಾಜಕೀಯದ ಕುರಿತು ನಕಾರಾತ್ಮಕ ಧೋರಣೆ ತಳೆಯುವುದು ಹೊಣೆಗೇಡಿ ವರ್ತನೆ ಅಲ್ಲವೇ? ಬಡತನ, ನಿರುದ್ಯೋಗ, ಜನರ ಆದಾಯದಲ್ಲಿ ಇಳಿಕೆ, ದುಬಾರಿಯಾಗುತ್ತಿರುವ ಶಿಕ್ಷಣ- ಆರೋಗ್ಯದ ವೆಚ್ಚ, ಪರಿಸರ ಮಾಲಿನ್ಯ, ಕೋಮುದ್ವೇಷ, ಕಾನೂನು ಪಾಲನೆ ಹಾಗೂ ಸಂಪನ್ಮೂಲಗಳ ಅಸಮರ್ಪಕ ನಿರ್ವಹಣೆ... ಹೀಗೆ ಬೆಳೆಸಬಹುದಾದ ಪಟ್ಟಿಯಲ್ಲಿ ಬರುವ ಎಲ್ಲದರ ಮೇಲೂ ಆಳುವವರು ರೂಪಿಸುವ ನೀತಿ- ನಿಯಮಗಳ ಪ್ರಭಾವ ಗಾಢವಾಗಿ ಇರುತ್ತದೆ. ಹೀಗಿರುವಾಗಲೂ 'ರಾಜಕೀಯವೆಂದರೆ ಕೆಟ್ಟದ್ದು' ಎಂಬ ಧೋರಣೆ ತಳೆದು, ಪಲಾಯನವಾದಕ್ಕೆ ಜೋತು ಬೀಳಬಹುದೇ?

ರಾಜಕೀಯ ಕೆಟ್ಟಿದೆ ಎಂದು ದೂರುವುದು ಒಟ್ಟಾರೆ ಸಮಾಜದ ಅಧಃಪತನಕ್ಕೆ ಹಿಡಿದ ಕೈಗನ್ನಡಿ ಅಲ್ಲವೇ? ಜನಪ್ರತಿನಿಧಿಗಳು ಕೆಟ್ಟಿದ್ದಾರೆಂದರೆ ಅದರ ಅರ್ಥ ಜನರೂ ಕೆಟ್ಟಿದ್ದಾರೆ ಎಂದಲ್ಲವೇ? ಚುನಾವಣೆ ವೇಳೆ ರಾಜಕಾರಣಿಗಳು ಆಮಿಷ ಒಡ್ಡಲು ಬಂದಾಗ, 'ಇವರೇನು ಸ್ವಂತ ದುಡ್ಡಲ್ಲಿ ಕೊಡ್ತಾವ್ರಾ... ನಮ್ದೇ ದುಡ್ಡಲ್ಲಿ ನಮ್ಗೆ ಕೊಡ್ತಾವ್ರೆ... ಇಸ್ಕೊಳ್ಳೋದ್ರಲ್ಲಿ ತಪ್ಪೇನಿಲ್ಲ' ಎನ್ನುವ ನಿಲುವು ತಳೆಯುವವರು ಕಾಣಸಿಗುವುದು ಅಪರೂಪವೇ?

ಗುಜರಾತ್‌ನ ಮೊರ್ಬಿಯಲ್ಲಿ ಇತ್ತೀಚೆಗೆ ನೂರಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾದ ತೂಗು ಸೇತುವೆ ಕುಸಿತಕ್ಕೆ ಆಡಳಿತದ ವಿವಿಧ ಹಂತಗಳಲ್ಲಿ ಬೇರೂರಿರುವ ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತವೇ ಪ್ರಮುಖ ಕಾರಣವಾಗಿರುವುದರ ಕುರಿತು ಯಾರಿಗೂ ಅನುಮಾನವಿಲ್ಲ. ಮೊರ್ಬಿಯಲ್ಲಿ ಕಾರ್ಯಾಂಗ ಮತ್ತು ಆಡಳಿತಾಂಗ ದುಃಸ್ಥಿತಿಯಲ್ಲಿ ಇರುವುದನ್ನು ದೇಶಕ್ಕೆ ಮನದಟ್ಟು ಮಾಡಿಕೊಟ್ಟ ಈ ದುರಂತದ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪ್ರತಿಕ್ರಿಯಿಸಿದ್ದು ಗಮನಾರ್ಹ. 'ನಾನು ಈ ಘಟನೆಯನ್ನು ರಾಜಕೀಯಗೊಳಿಸುವುದಿಲ್ಲ. ಜನರು ಜೀವ ಕಳೆದುಕೊಂಡಿದ್ದಾರೆ. ರಾಜಕೀಯಗೊಳಿಸುವುದು ಅವರಿಗೆ ತೋರುವ ಅಗೌರವ'. ಹಾಗಿದ್ದರೆ ಇಂಥ ದುರಂತಗಳನ್ನು ರಾಜಕೀಯಗೊಳಿಸಬಾರದೇ?



ಇಂತಹ ದುರಂತಗಳು ನಡೆಯದೇ ಇರುವಂತೆ ನೋಡಿಕೊಳ್ಳಲು ಕೈಗೊಳ್ಳಬೇಕಿರುವ ಮುಂಜಾಗ್ರತಾ ಕ್ರಮಗಳಿಗೂ ರಾಜಕೀಯ- ರಾಜಕಾರಣಿಗಳಿಗೂ ಸಂಬಂಧ ಇಲ್ಲವೇ? ಆಡಳಿತದಲ್ಲಿ ಭ್ರಷ್ಟಾಚಾರ ತಗ್ಗಿಸುವುದರಲ್ಲಿ ರಾಜಕೀಯದ ಪಾತ್ರವೇನೂ ಇಲ್ಲವೇ? ಹಣ- ಅಧಿಕಾರಕ್ಕಿಂತ ಜನರ ಜೀವಕ್ಕೆ ಬೆಲೆ ಕೊಡುವವರಿಗೆ ಮತ ಚಲಾಯಿಸುತ್ತೇವೆ ಎನ್ನುವ ಸಂದೇಶ ಜನರಿಂದ ರಾಜಕಾರಣಿಗಳೆಡೆಗೆ ರವಾನೆಯಾಗಬೇಕಲ್ಲವೇ? ಗಾಯಾಳುಗಳ ಯೋಗಕ್ಷೇಮ ವಿಚಾರಿಸಲು ಪ್ರಧಾನಿ ಭೇಟಿ ನೀಡಲಿದ್ದಾರೆ ಎನ್ನುವ ಕಾರಣಕ್ಕೆ, ಮೊರ್ಬಿಯಲ್ಲಿನ ಸಾರ್ವಜನಿಕ ಆಸ್ಪತ್ರೆಯನ್ನು ಸ್ವಚ್ಛಗೊಳಿಸಿ ಸಿಂಗರಿಸಿದ್ದರಲ್ಲಿ ಯಾವುದೇ ರಾಜಕೀಯ ಲಾಭ- ನಷ್ಟದ ಲೆಕ್ಕಾಚಾರ ಇರಲಿಲ್ಲವೇ? ನೀರು ಮತ್ತು ವಿದ್ಯುತ್ ಸಂಪರ್ಕವನ್ನೇ ಕಲ್ಪಿಸಿರದಿದ್ದ ಕುಡಿಯುವ ನೀರು ಶುದ್ಧೀಕರಣ ಘಟಕವೂ ಇದ್ದಕ್ಕಿದ್ದಂತೆ ಆಸ್ಪತ್ರೆಯಲ್ಲಿ ಪ್ರತ್ಯಕ್ಷವಾಗಿತ್ತು. ಈ ಕುರಿತು ಇಂಗ್ಲಿಷ್ ಸುದ್ದಿ ವಾಹಿನಿಯೊಂದು ವರದಿ ಪ್ರಸಾರ ಮಾಡಿದ ನಂತರವಷ್ಟೇ ಶುದ್ಧೀಕರಣ ಘಟಕದಲ್ಲಿ ನೀರು ಬರತೊಡಗಿದ್ದು.

'ರಾಜಕೀಯ ಹೊರತಾದದ್ದು ಯಾವುದೂ ಇಲ್ಲ' (nothing is apolitical) ಎನ್ನುವ ಹೇಳಿಕೆ ಬಹಳಷ್ಟು ಜನಪ್ರಿಯ. 'ರಾಜಕೀಯ ಬೆರೆಸಬೇಡಿ' ಎನ್ನುವ ಸೂಚನೆ ಕೂಡ ಬಹುತೇಕ ಸಂದರ್ಭಗಳಲ್ಲಿ ಯಾರದೋ ರಾಜಕೀಯ ಹಿತ ಕಾಯುವ ಕಾರ್ಯಸೂಚಿಯ ಭಾಗವೇ ಆಗಿರುತ್ತದೆ. ರಾಜಕೀಯದಿಂದ ಅಂತರ ಕಾಯ್ದುಕೊಂಡಂತೆ ವರ್ತಿಸುವ ಬದಲು, ಒಟ್ಟಾರೆ ಸಮಾಜದ ಹಿತಕ್ಕೆ ಪೂರಕವಾಗಿ ಕೆಲಸ ಮಾಡುವ ರೀತಿಯಲ್ಲಿ ರಾಜಕೀಯ ವ್ಯವಸ್ಥೆಯನ್ನು ಕಟ್ಟಿಕೊಳ್ಳುವುದು ಹೇಗೆ ಎಂಬ ಕುರಿತು ಚರ್ಚಿಸಬೇಕಲ್ಲವೇ?

ನಮ್ಮ ಬದುಕನ್ನು ರಾಜಕೀಯವು ಗಾಢವಾಗಿ ಪ್ರಭಾವಿಸುತ್ತಿದೆ ಎನ್ನುವ ವಾಸ್ತವವನ್ನು ಒಪ್ಪಿಕೊಳ್ಳುವ ಬದಲಿಗೆ, 'ಯಾರೇ ಅಧಿಕಾರಕ್ಕೆ ಬಂದರೂ ರಾಗಿ ಬೀಸೋದು ತಪ್ಪಲ್ಲ' ಎನ್ನುವ ಧೋರಣೆಗೆ ಅಂಟಿಕೊಳ್ಳುವುದು ಸೂಕ್ತವೇ? ಬೀಸಲು ನಾವು ಸಿದ್ಧರಿದ್ದರೂ, ರಾಗಿಯೇ ಸಿಗದ ಹಾಗೆ ನೋಡಿಕೊಳ್ಳುವ ಸಾಮರ್ಥ್ಯ ರಾಜಕೀಯಕ್ಕೆ ಇದೆ ಅಲ್ಲವೇ? ಒಟ್ಟಾರೆ ಸಮಾಜವಾಗಿ ನಾವು ಅಧಃಪತನ ಹೊಂದುತ್ತಿದ್ದರೆ, ಅದಕ್ಕೆ ರಾಜಕಾರಣಿಗಳನ್ನಷ್ಟೇ ದೂರುತ್ತಾ ಕಾಲ ತಳ್ಳಬಹುದೇ? ಇದರಲ್ಲಿ ನಮ್ಮದೇನೂ ಪಾತ್ರವಿಲ್ಲವೇ?

ವಾಚಕರ ವಾಣಿ

ಪರೀಕ್ಷಾ ಕೊಠಡಿ: ಮೇಲ್ವಿಚಾರಕರದೇ ಗದ್ದಲ!

ಯಾವುದೇ ಪರೀಕ್ಷೆ ನಡೆಯಲಿ, ಪರೀಕ್ಷಾ ಕೊಠಡಿಯಲ್ಲಿ ಶಾಂತ ವಾತಾವರಣ ಇರಬೇಕು. ಪರೀಕ್ಷೆ ಬರೆಯುವ ಆ ಕೆಲವು ಗಂಟೆಗಳ ಅವಧಿಯಲ್ಲಿ ಪರೀಕ್ಷಾರ್ಥಿ ಅಥವಾ ವಿದ್ಯಾರ್ಥಿಗಳಿಗೆ ಯಾರೂ ಕಿರಿಕಿರಿ ಉಂಟು ಮಾಡಬಾರದು. ಆದರೆ ಕೆಲವು ಪರೀಕ್ಷಾ ಮೇಲ್ವಿಚಾರಕರು ಪದೇ ಪದೇ ಸಮಯವನ್ನು ಹೇಳುವುದು, ಇತರ ಸಹೋದ್ಯೋಗಿಗಳೊಂದಿಗೆ ಪಿಸುಮಾತಿನಲ್ಲಿ ಮಾತನಾಡುವುದು, ಹೇಳಿದ ಸೂಚನೆಯನ್ನೇ ಮತ್ತೆ ಮತ್ತೆ ಹೇಳುವುದು, ವಿದ್ಯಾರ್ಥಿಯ ಸಣ್ಣ ತಪ್ಪನ್ನೇ ಜೋರಾಗಿ ಹೇಳಿ ಬೈಯುವುದು ಮಾಡುತ್ತಾರೆ.

ಇದು ಒಂದು ರೀತಿ ವಿದ್ಯಾರ್ಥಿಗಳಲ್ಲಿ ಗೊಂದಲ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುತ್ತದೆ. ಇದನ್ನು ಅರಿತು ಪರೀಕ್ಷಾ ಮೇಲ್ವಿಚಾರಕರು ಮೊದಲು ಶಾಂತ ರೀತಿಯಲ್ಲಿ ಕೊಠಡಿಯಲ್ಲಿ ಇರುವಂತೆ ಆಗಬೇಕು.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಅಲ್ಪ ನೀರಾವರಿ ಬೆಳೆ ನಮ್ಮದಾಗಲಿ

ತುಂಗಭದ್ರಾ ಪ್ರದೇಶದಲ್ಲಿ ಅನಿಯಂತ್ರಿತ ನೀರಾವರಿಯ ಪರಿಣಾಮವಾಗಿ ಕ್ಷಾರದ ಸಮಸ್ಯೆ ಹೆಚ್ಚಾಗಿದೆ ಎಂದು ಕೃಷಿ ತಜ್ಞ ಡಾ. ಎಂ.ಎಸ್.ಸ್ವಾಮಿನಾಥನ್ ಅವರು ಎಷ್ಟೋ ವರ್ಷಗಳ ಹಿಂದೆಯೇ ಪ್ರಸ್ತಾಪಿಸಿರುವುದು (ಪ್ರ.ವಾ., 50 ವರ್ಷಗಳ ಹಿಂದೆ, ನ. 11) ನಮ್ಮನ್ನು ಚಿಂತೆಗೀಡು ಮಾಡುವ ಸಂಗತಿ. ತುಂಗಭದ್ರಾ ಒಡಲಾಳದಲ್ಲಿ ಇಂದಿಗೂ ನಾವು ಅನಿಯಂತ್ರಿತ ನೀರಾವರಿ ಬೆಳೆಗಳನ್ನು ಬೆಳೆಯುತ್ತಿರುವುದು ಅತ್ಯಂತ ಕಳವಳಕಾರಿ. ನಮ್ಮ ಭೂಮಿಯನ್ನು ನಾವೇ ಬರಡಾಗಿಸುತ್ತಿರುವೆವೇನೊ ಎಂಬ ಚಿಂತೆ ಕಾಡುತ್ತಿದೆ.

ಮುಂದಿನ ಪೀಳಿಗೆಗೆ ಫಲವತ್ತಾದ ಭೂಮಿಯನ್ನು ಉಳಿಸುವ ದಿಸೆಯಲ್ಲಿ ಈಗಲಾದರೂ ನಾವು ಅಲ್ಪ ನೀರಾವರಿ ಬೆಳೆಗಳ ಬಗ್ಗೆ ಯೋಚಿಸುವುದು ಸೂಕ್ತ.

ಚಂದ್ರ ಹುಳ್ಳಿಹಾಳ, ಸಿಂಧನೂರು

ಸ್ಪರ್ಧೆ- ಸುದ್ದಿ

ಓಡಾಡುತ್ತಿದೆ
ಸಿದ್ದರಾಮಯ್ಯ
ಸ್ಪರ್ಧೆಯ ಸುದ್ದಿ
ಬಾದಾಮಿ, ಕೋಲಾರ,
ವರುಣ,
ಕಾಯ್ದು ನೋಡಬೇಕು
ಯಾವ ಕ್ಷೇತ್ರಕ್ಕೆ ಇದೆ
ಅವರ ಸೇವೆಯ ಋಣ!

ಮಹಾಂತೇಶ ಮಾಗನೂರ
ಬೆಂಗಳೂರು

ಶಾಲಾ ಕೊಠಡಿ: ಕೇಸರೀಕರಣ ಸಲ್ಲ

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 8,100 ಕೊಠಡಿಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಿರುವುದು ಶ್ಲಾಘನೀಯ. ಆದರೆ ಅವುಗಳಿಗೆ ಕೇಸರಿ ಬಣ್ಣ ಬಳಿಯುವುದು ವಿವಾದಕ್ಕೆ ಆಸ್ಪದ ನೀಡುತ್ತದೆ. ಸರ್ಕಾರವು ಕೇಸರೀಕರಣ ಮಾಡುತ್ತಿದೆ ಎಂಬ ವಿರೋಧ ಪಕ್ಷಗಳ ಆಪಾದನೆಗೆ ಈ ಯೋಜನೆ ಇಂಬು ನೀಡುವಂತಿದೆ.

ಸಾಮಾನ್ಯವಾಗಿ ಶಾಲೆಗಳ ಗೋಡೆಗಳಿಗೆ ಬಿಳಿ ಬಣ್ಣ ಹಚ್ಚುವುದು ಲಾಗಾಯ್ತಿನಿಂದ ನಡೆದುಬಂದಿರುವ ಪದ್ಧತಿ. ಈಗ ದಿಢೀರ್ ಎಂದು ಕೇಸರಿ ಬಣ್ಣಕ್ಕೆ ಒಲವು ತೋರಿಸಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ರಮಾನಂದ ಶರ್ಮಾ, ಬೆಂಗಳೂರು

ಯೋಧನನ್ನೇ ನುಂಗಿತು ರಸ್ತೆಗುಂಡಿ

ಮಂಡ್ಯದಲ್ಲಿ ರಸ್ತೆಗುಂಡಿ ತಪ್ಪಿಸಲು ಹೋದ ಜಿಲ್ಲೆಯ ಸಾತನೂರಿನ ನಿವೃತ್ತ ಯೋಧ ಎಸ್.ಎನ್.ಕುಮಾರ್, ಬೈಕ್‌ನಿಂದ ಕೆಳಗೆ ಬಿದ್ದಾಗ ಲಾರಿ ಹರಿದು ಮೃತಪಟ್ಟಿರುವುದು (ಪ್ರ.ವಾ., ನ. 14) ವಿಷಾದಕರ. ಸೇನೆಯಲ್ಲಿ ಇದ್ದಾಗ ಹಲವು ಸಂಕಷ್ಟಗಳನ್ನು ಎದುರಿಸಿ, ಛಲ ಬಿಡದೆ ಹೋರಾಡಿ ಬದುಕಿ ಬಂದ ಯೋಧ, ನಮ್ಮ ರಸ್ತೆಗುಂಡಿಯಿಂದ ಪಾರಾಗದೆ ಅಸುನೀಗಿದ್ದು ವಿಪರ್ಯಾಸವೇ ಸರಿ.

ವಾಹನ ಸವಾರರ ಪ್ರತಿಯೊಂದು ನಿಯಮ ಉಲ್ಲಂಘನೆಗೂ ದಂಡ ವಿಧಿಸುವ ಸರ್ಕಾರ, ಹದಗೆಟ್ಟ ರಸ್ತೆಗುಂಡಿಗಳ ಬಗ್ಗೆ ಮಾತ್ರ ಅಸಡ್ಡೆ ತೋರುತ್ತಿದೆ. ಇದರಿಂದ ಹಲವು ಮಂದಿ ಪ್ರಾಣ ತೆರುವಂತೆ ಆಗಿದೆ. ಈ ಯೋಧನ ಸಾವಿಗೆ ಸರ್ಕಾರವೇ ನೇರ ಹೊಣೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಆಹಾರದ ಪಾಲು ಸೂಕ್ತವಾಗಿ ಸಿಗಲಿ

ಸರ್ಕಾರಿ ಶಾಲಾ ಮಕ್ಕಳಿಗೆ ತಿಂಗಳಲ್ಲಿ ಎರಡು ಬಾರಿ ಅವರ ಬಯಕೆಗೆ ತಕ್ಕಂತೆ ಮೊಟ್ಟೆ, ಬಾಳೆಹಣ್ಣು, ಶೇಂಗಾ ಚಿಕ್ಕಿ ನೀಡಲಾಗುತ್ತಿದೆ. ಆದರೆ ಕೆಲ ಶಾಲೆಗಳಲ್ಲಿ ಮಗು ಮೊಟ್ಟೆಗೆ ಒಪ್ಪಿಗೆ ಕೊಟ್ಟಿದ್ದರೂ ಶೇಂಗಾ ಚಿಕ್ಕಿ ಕೊಡಲಾಗುತ್ತಿದೆ. ಇನ್ನು ಕೆಲವು ಶಾಲೆಗಳಲ್ಲಿ ತಿಂಗಳಿಗೊಮ್ಮೆ ಮಾತ್ರ ವಿತರಣೆಯಾಗುತ್ತಿದೆ. ಇದು ಹೀಗೇ ಮುಂದುವರಿದರೆ ಮಕ್ಕಳ ಅಪೌಷ್ಟಿಕತೆಯನ್ನು ನೀಗಿಸಲು ಆಗದು. ಮಕ್ಕಳಿಗೆ ಆಹಾರದ ಪಾಲು ಸರಿಯಾಗಿ ಸಿಗುವಂತೆ ಮಾಡಲು ಶಿಕ್ಷಣ ಇಲಾಖೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಸಣ್ಣಮಾರಪ್ಪ, ಚಂಗಾವರ, ಶಿರಾ

ಲಭ್ಯವಿದೆ ಪಿಡಿಎಫ್ ಪ್ರತಿ

'ಪ್ರಥಮ ಮತ್ತು ದ್ವಿತೀಯ ಪಿ.ಯು. ವಿಜ್ಞಾನ ವಿಭಾಗದ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳ ಬೆಲೆ ಹೆಚ್ಚಾಗಿದ್ದು, ಈ ಪುಸ್ತಕಗಳ ಪಿಡಿಎಫ್ ಪ್ರತಿಗಳನ್ನು ಇಲಾಖೆಯ ಜಾಲತಾಣದಲ್ಲಿ ಅಳವಡಿಸುವುದು ಅಗತ್ಯ' ಎಂದು ಡಾ. ಬಿ.ಆರ್. ಸತ್ಯನಾರಾಯಣ ಅವರು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ನ. 10). ಪ್ರಸ್ತುತ ಪದವಿ ಪೂರ್ವ ಶಿಕ್ಷಣ ಇಲಾಖೆಯ https://pue.karnataka.gov.in/ ಜಾಲತಾಣದ ಮೇಲ್ಭಾಗದಲ್ಲಿ 'ವಿದ್ಯಾರ್ಥಿಗಳ ಅಂಕಣ' ವಿಭಾಗದ 'ಪಠ್ಯಪುಸ್ತಕಗಳು' ಎಂಬ ಉಪವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು. ವಿಜ್ಞಾನ ವಿಭಾಗದ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳೂ ಒಳಗೊಂಡಂತೆ ಒಟ್ಟು 115 ಪಠ್ಯಪುಸ್ತಕಗಳನ್ನು ಮುಕ್ತ ಬಳಕೆಗೆ ಈಗಾಗಲೇ ಅಳವಡಿಸಲಾಗಿದೆ. ಆಸಕ್ತರು ಇದರ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಡಾ. ಎಚ್.ಬಿ.ಚಂದ್ರಶೇಖರ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜಾಗತಿಕ ತಾಪಮಾನ ಹೆಚ್ಚಳ

ಹವಾಮಾನ ಏರುಪೇರು



ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಈ ವರ್ಷದ ಹವಾಮಾನವು ಅತ್ಯಂತ ಅನಿರೀಕ್ಷಿತವೂ ಪ್ರತಿಕೂಲಕರವಾಗಿಯೂ ಇತ್ತು. ಜನವರಿಯಿಂದ ಸೆಪ್ಟೆಂಬರ್ ವರೆಗೆ ವಿವಿಧ ರೀತಿಯ ನಾಶ, ನಷ್ಟಗಳಿಗೆ ದೇಶವು ಸಾಕ್ಷಿಯಾಗಿದೆ. ಸಾಮಾನ್ಯವಾಗಿ ಮುಂಗಾರು ಮಳೆ ಋತುವಿನ ಅವಧಿಯಲ್ಲಿ ಹೆಚ್ಚು ಮಳೆ ಬೀಳುವುದು, ಪ್ರವಾಹ ಉಂಟಾಗುವುದು ಸಹಜ. ಆದರೆ, ಈ ವರ್ಷ ಚಳಿಗಾಲ, ಮುಂಗಾರುಪೂರ್ವ ಅವಧಿಯಲ್ಲಿಯೂ ಪ್ರತಿಕೂಲ ಹವಾಮಾನ ಉಂಟಾಗಿದೆ. 273 ದಿನಗಳ ಪೈಕಿ 242 ದಿನಗಳು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ದೇಶವು ಕಂಡಿದೆ. ದೇಶದ ಎಲ್ಲ ರಾಜ್ಯಗಳೂ ಇಂತಹ ಪರಿಸ್ಥಿತಿಯನ್ನು ಎದುರಿಸಿವೆ. ಕರ್ನಾಟಕವೂ ಇದಕ್ಕೆ ಹೊರತಲ್ಲ. ಇಲ್ಲಿ ಈ ಅವಧಿಯಲ್ಲಿ 82 ದಿನ ಪ್ರತಿಕೂಲ ಹವಾಮಾನ ಉಂಟಾಗಿದೆ.

ಈ ರೀತಿಯ ಹವಾಮಾನ ಸ್ಥಿತಿಗೆ ಜಾಗತಿಕ ತಾಪಮಾನ ಏರಿಕೆಯೇ ಕಾರಣ ಎಂದು ಪರಿಣತರು ಹೇಳುತ್ತಿದ್ದಾರೆ. ಮಹಾರಾಷ್ಟ್ರದ ಮರಾಠವಾಡ ಪ್ರದೇಶದ ಎಂಟು ಜಿಲ್ಲೆಗಳು ಸದಾ ಕಾಲವೂ ಬರದಿಂದ ನರಳುತ್ತಿರುತ್ತವೆ. ಆದರೆ, ಈ ಬಾರಿ ಅಲ್ಲಿ ಯಥೇಚ್ಛ ಮಳೆಯಾಗಿದೆ. ಹಾಗಾಗಿ, ಈ ವರ್ಷವೂ ಅಲ್ಲಿನ ರೈತರು ತಮ್ಮ ಬೆಳೆಗಳನ್ನು ಕಳೆದುಕೊಂಡರು.

ಈ ವರ್ಷ ಎಂಟು ರಾಜ್ಯಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಅಂತಹ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದು. ಆದರೆ ಸೆಪ್ಟೆಂಬರ್ ಕೊನೆಯ ವಾರದಲ್ಲಿ ವಾಡಿಕೆಗಿಂತ ಶೇ 193ರಷ್ಟು ಹೆಚ್ಚು ಮಳೆ ಬಿದ್ದಿದೆ. ಪ್ರವಾಹ ಉಂಟಾಗಿದೆ. ಅಕ್ಟೋಬರ್ 5ರಂದು ಉತ್ತರ ಪ್ರದೇಶದ ಮೂರು ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ 10,000ದಷ್ಟು ಹೆಚ್ಚು ಮಳೆಯಾಗಿದೆ.

ಭಾರತದಲ್ಲಿ ಈ ವರ್ಷ ಆಗಿರುವುದು ಇನ್ನು ಮುಂದಿನ ದಿನಗಳ ಸಹಜ ವಾಸ್ತವವೇ ಆಗಿರಲಿದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ. ಕಳೆದ 20 ವರ್ಷಕ್ಕೆ ಹೋಲಿಸಿದರೆ, ಜಗತ್ತಿನಲ್ಲಿ ಪ್ರಕೃತಿ ವಿಕೋಪಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿವೆ ಎಂಬ ಎಚ್ಚರಿಕೆಯನ್ನು ವಿಶ್ವಸಂಸ್ಥೆಯ ವರದಿಯೊಂದು ನೀಡಿದೆ. ಕಳೆದ 20 ವರ್ಷಗಳಲ್ಲಿ ಅತಿ ಹೆಚ್ಚು ಪ್ರಕೃತಿ ವಿಕೋಪಗಳು ಸಂಭವಿಸಿದ ಮೂರನೇ ದೇಶ ಭಾರತವಾಗಿದೆ. 1995ರಿಂದ 2020ರ ಅವಧಿಯಲ್ಲಿ ಭಾರತದಲ್ಲಿ 1,058 ಪ್ರಕೃತಿ ವಿಕೋಪ ಘಟನೆಗಳು ಉಂಟಾಗಿವೆ ಎಂದು ವಿಪತ್ತು ನಿರ್ವಹಣೆಯ ರಾಷ್ಟ್ರೀಯ ಸಂಸ್ಥೆ (ಎನ್‌ಐಡಿಎಂ) ಹೇಳಿದೆ.

2,755 ಪ್ರತಿಕೂಲ ಹವಾಮಾನ ಸ್ಥಿತಿಯಿಂದ ಮೃತಪಟ್ಟವರು | **47** ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆದ ಬೆಳೆಗೆ ಹಾನಿಯಾಗಿದೆ | **242** ಪ್ರತಿಕೂಲ ಹವಾಮಾನ ಇದ್ದ ದಿನಗಳು | ಜನವರಿ 1ರಿಂದ ಸೆಪ್ಟೆಂಬರ್ 30

ಮಧ್ಯ ಭಾರತ



ಸಾವು **887**


ಬೆಳೆ ನಾಶ **3.36** ಲಕ್ಷ ಎಕರೆ

273 ದಿನಗಳ ಪೈಕಿ 198 ದಿನ ಪ್ರತಿಕೂಲ ಹವಾಮಾನ ಸನ್ನಿವೇಶ ಸೃಷ್ಟಿಯಾಗಿದೆ. ಮಧ್ಯ ಪ್ರದೇಶವು ಅತಿ ಹೆಚ್ಚು ಸಂಕಷ್ಟಕ್ಕೆ ಒಳಗಾಗಿದೆ. 140 ದಿನ ಇಲ್ಲಿ ಇಂತಹ ಪ್ರತಿಕೂಲ ಸ್ಥಿತಿ ಇತ್ತು

ಈ ಪ್ರದೇಶದ ರಾಜ್ಯಗಳು

- ಗುಜರಾತ್ • ಮಧ್ಯ ಪ್ರದೇಶ
- ಗೋವಾ • ಮಹಾರಾಷ್ಟ್ರ
- ಛತ್ತೀಸಗಡ • ಒಡಿಶಾ

ವಾಯವ್ಯ ಭಾರತ



ಸಾವು **735**


ಬೆಳೆ ನಾಶ **9.8** ಲಕ್ಷ ಎಕರೆ

198 ದಿನ ಪ್ರತಿಕೂಲ ಹವಾಮಾನ ಸ್ಥಿತಿ ಇತ್ತು. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಸಮಸ್ಯೆ. 104 ದಿನ ಪ್ರತಿಕೂಲ ಹವಾಮಾನ ಸ್ಥಿತಿ ಎದುರಿಸಿದೆ.

ಈ ಪ್ರದೇಶದ ರಾಜ್ಯಗಳು

- ಜಮ್ಮು-ಕಾಶ್ಮೀರ • ಪಂಜಾಬ್
- ಹಿಮಾಚಲ ಪ್ರದೇಶ
- ಉತ್ತರಾಖಂಡ • ಹರಿಯಾಣ
- ದೆಹಲಿ • ಉತ್ತರ ಪ್ರದೇಶ
- ರಾಜಸ್ಥಾನ

ಪೂರ್ವ ಮತ್ತು ಈಶಾನ್ಯ ಭಾರತ



ಸಾವು **783**


ಬೆಳೆ ನಾಶ **6.33** ಲಕ್ಷ ಎಕರೆ

ಈ ಪ್ರದೇಶದಲ್ಲಿ 273 ದಿನಗಳ ಪೈಕಿ 171 ದಿನ ಪ್ರತಿಕೂಲ ಹವಾಮಾನ ಸನ್ನಿವೇಶ ಸೃಷ್ಟಿಯಾಗಿದೆ. ಅಸ್ಸಾಂ ಅತಿ ಹೆಚ್ಚು ಸಮಸ್ಯೆಗೆ ಒಳಗಾಗಿದೆ. 131 ದಿನ ಪ್ರತಿಕೂಲ ಹವಾಮಾನ ಸ್ಥಿತಿ ಇತ್ತು.

ಈ ಪ್ರದೇಶದ ರಾಜ್ಯಗಳು

- ಬಿಹಾರ • ಜಾರ್ಖಂಡ್
- ಸಿಕ್ಕಿಂ • ಪಶ್ಚಿಮ ಬಂಗಾಳ
- ಅರುಣಾಚಲ ಪ್ರದೇಶ
- ನಾಗಾಲ್ಯಾಂಡ್
- ಮಣಿಪುರ • ಮಿಜೋರಾಂ
- ತ್ರಿಪುರ • ಮೇಘಾಲಯ

ದಕ್ಷಿಣ ಭಾರತ



ಸಾವು **350**

ಬೆಳೆ ನಾಶ **27.83** ಲಕ್ಷ ಎಕರೆ


124 ದಿನ ಪ್ರತಿಕೂಲ ಹವಾಮಾನ ಪರಿಸ್ಥಿತಿ ದಾಖಲಾಗಿದೆ. ಕರ್ನಾಟಕವು ಅತಿ ಹೆಚ್ಚು ಸಂಕಷ್ಟಕ್ಕೆ ಒಳಗಾಗಿದೆ. 82 ದಿನಗಳಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿ ಇತ್ತು.

ಈ ಪ್ರದೇಶದ ರಾಜ್ಯಗಳು

- ತೆಲಂಗಾಣ • ಆಂಧ್ರ ಪ್ರದೇಶ
- ತಮಿಳುನಾಡು
- ಕೇರಳ • ಕರ್ನಾಟಕ

ಕರ್ನಾಟಕದಲ್ಲಿ ಪ್ರತಿಕೂಲ ಹವಾಮಾನ ಹೆಚ್ಚು


ಜನವರಿ 1ರಿಂದ ಮೇ 31



ದಕ್ಷಿಣ ಭಾಗದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಪ್ರತಿಕೂಲ ಹವಾಮಾನ ಸ್ಥಿತಿ ಅಧಿಕವಾಗಿತ್ತು. ಮುಂಗಾರು ಪೂರ್ವ ಹಾಗೂ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಭಾರಿ ಮಳೆಯಾಗಿದೆ. ಮುಂಗಾರು ಪೂರ್ವ ಅವಧಿಯಲ್ಲಿ ಅಂದರೆ ಜನವರಿ 1ರಿಂದ ಮೇ 31ರ ಅವಧಿಯಲ್ಲಿ ರಾಜ್ಯದ 25 ಜಿಲ್ಲೆಗಳು ವಾಡಿಕೆಗಿಂತ ಬಹಳ ಹೆಚ್ಚು ಮಳೆ ಕಂಡಿವೆ. ಐದು ಜಿಲ್ಲೆಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಒಂದು ಜಿಲ್ಲೆಯಲ್ಲಿ ವಾಡಿಕೆಯಷ್ಟು ಮಳೆ ಸುರಿದಿದೆ. ಈ ಅವಧಿಯಲ್ಲಿ 120 ಮಿಲಿಮೀಟರ್ ಮಳೆಯಾಗುವುದು ವಾಡಿಕೆ. ಆದರೆ 238 ಮಿಲಿಮೀಟರ್ ಮಳೆಯಾಗಿತ್ತು. ಅಂದರೆ ಸರಿಸುಮಾರು 100 ಮಿಲಿಮೀಟರ್ ಹೆಚ್ಚುವರಿ ಮಳೆ ಸುರಿದಿದೆ.

ಮುಂಗಾರು ಅವಧಿಯಲ್ಲೂ (ಜೂನ್ 1ರಿಂದ ಸೆಪ್ಟೆಂಬರ್ 30) ಮಳೆ ಜೋರಾಗಿತ್ತು. ಎಂಟು ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಮಾಣದ ಮಳೆ ಸುರಿದಿದೆ. 12 ಜಿಲ್ಲೆಗಳಲ್ಲಿ ಅಧಿಕ ಮಳೆಯಾಗಿದ್ದರೆ, 11 ಜಿಲ್ಲೆಗಳಲ್ಲಿ ವಾಡಿಕೆಯಷ್ಟೇ ಮಳೆಯಾಗಿದೆ. ಈ ಎರಡೂ ಅವಧಿಗಳಲ್ಲಿ ಮಳೆ ಕೊರತೆ ಕಂಡುಬಂದಿಲ್ಲ ಎಂದು ಹವಾಮಾನ ಇಲಾಖೆ ದತ್ತಾಂಶಗಳು ಹೇಳುತ್ತವೆ.

ಜೂನ್ 1ರಿಂದ ಸೆಪ್ಟೆಂಬರ್ 30



ಅತ್ಯಧಿಕ ಮಳೆ | ಅಧಿಕ ಮಳೆ | ವಾಡಿಕೆ ಮಳೆ

ಆಧಾರ: ಸಿಎಸ್‌ಇ, ಡೌನ್ ಟು ಅರ್ತ್, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

ಚಳಿಗಾಲದ ಅವಧಿ

- 2022ರ ಜನವರಿ ಹಾಗೂ ಫೆಬ್ರುವರಿ ತಿಂಗಳ 59 ದಿನಗಳ ಪೈಕಿ 39 ದಿನ ಪ್ರತಿಕೂಲ ಹವಾಮಾನ ಕಂಡುಬಂದಿದೆ
- ಈ ಅವಧಿಯಲ್ಲಿ 22 ಜನರು ಮೃತಪಟ್ಟಿದ್ದು, 81,999 ಎಕರೆ ಬೆಳೆಹಾನಿ ಸಂಭವಿಸಿದೆ
- 21 ರಾಜ್ಯಗಳ ಪೈಕಿ ಉತ್ತರ ಪ್ರದೇಶದಲ್ಲಿ 25 ದಿನ ಪ್ರತಿಕೂಲ ಹವಾಮಾನ ಕಂಡುಬಂದಿತ್ತು
- 1951ರ ಜನವರಿ ಬಳಿಕ 2022ರ ಜನವರಿಯಲ್ಲಿ ಅತಿ ಹೆಚ್ಚು ಮಳೆಯಾಗಿತ್ತು

ಮುಂಗಾರು ಪೂರ್ವ ಅವಧಿ

- ಮಾರ್ಚ್ ಮತ್ತು ಮೇ ನಡುವಣ 92 ದಿನಗಳ ಪೈಕಿ 81 ದಿನ ಪ್ರತಿಕೂಲ ಹವಾಮಾನ ಇತ್ತು; ರಾಜಸ್ಥಾನ ಮತ್ತು ಅಸ್ಸಾಂ ರಾಜ್ಯಗಳು ಹೆಚ್ಚು ಬಾಧಿತವಾಗಿದ್ದವು
- ಈ ಅವಧಿಯಲ್ಲಿ 302 ಜನರು ಪ್ರಾಣ ಕಳೆದುಕೊಂಡಿದ್ದರು; 2 ಲಕ್ಷ ಎಕರೆ ಫಸಲು ಹಾನಿಯಾಗಿತ್ತು
- ದೇಶದಲ್ಲಿ 51 ದಿನ ಬಿಸಿಗಾಳಿ ಇತ್ತು; ಮೇ ತಿಂಗಳಲ್ಲಿ ಉಷ್ಣಾಂಶ ಸಾಮಾನ್ಯವಾಗಿತ್ತು. ಈ ಅವಧಿಯಲ್ಲಿ ಅಧಿಕ ಮಳೆಯಾಗಿತ್ತು

ಮುಂಗಾರು ಅವಧಿ

- ಜೂನ್ ಹಾಗೂ ಸೆಪ್ಟೆಂಬರ್ ನಡುವಣ 122 ದಿನಗಳ ಪೈಕಿ 95 ದಿನ ವಾತಾವರಣದಲ್ಲಿ ಏರುಪೇರು ಇತ್ತು
- ಈ ಅವಧಿಯಲ್ಲಿ 2,431 ಜನರು ಮೃತಪಟ್ಟು, 44.4 ಲಕ್ಷ ಎಕರೆ ಬೆಳೆ ಹಾನಿಯಾಗಿತ್ತು
- 34 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಪೈಕಿ ಅಸ್ಸಾಂ ಹೆಚ್ಚು (95 ದಿನ) ಬಾಧಿತವಾಗಿತ್ತು
- ಮುಂಗಾರು ಸಾಮಾನ್ಯವಾಗಿತ್ತು. ಆಗಾಗ ಏರುಪೇರಾಗುತ್ತಿತ್ತು. 188 ಜಿಲ್ಲೆಗಳಲ್ಲಿ (ಶೇ 27) ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 70%

ಇಲ್ಲ 30%

ಭಾರತದಲ್ಲಿರುವ ಶೇ 99 ರಷ್ಟು ಮುಸ್ಲಿಮರು ಹಿಂದೂಸ್ತಾನಿಗಳೇ ಎಂದು ಆರ್‌ಎಸ್‌ಎಸ್‌ನ ಮುಖಂಡ ಇಂದ್ರೇಶ್ ಕುಮಾರ್ ಹೇಳಿರುವುದು ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 275

ಶಿವ-ಪಾರ್ವತಿ ಪಾಣಿಗ್ರಹಣ

ಶಿವನ ಗೋತ್ರ, ಕುಲ ಎಲ್ಲವೂ ಓಂಕಾರರೂಪವಾದ ನಾದವೇ ಆಗಿದೆ. ಶಿವನು ನಾದರೂಪನಾದರೆ, ನಾದವೂ ಶಿವನ ರೂಪ. ನಾದಕ್ಕೂ ಶಿವನಿಗೂ ಭೇದವೇ ಇಲ್ಲ. ಅದುವೇ ನಿಜವಾದ ತತ್ತ್ವ. ಸಗುಣನಾದ ಪರಮೇಶ್ವರನಿಂದ ನಾದವು ಮೊದಲು ಜನಿಸಿತು. ಆದುದರಿಂದ ನಾದವು ಸರ್ವೋತ್ತಮವಾದುದು. ಈ ಕಾರಣದಿಂದಲೇ ವೀಣೆಯಿಂದ ನಾನು ನಾದವನ್ನು ನುಡಿಸಿದೆ. ಹಾಗೆ ನುಡಿಸುವಂತೆ ಸರ್ವೇಶ್ವರನಾದ ಶಿವನೇ ನನ್ನ ಮನಸ್ಸಿನಲ್ಲಿ ಪ್ರೇರೇಪಿಸಿದ - ಎಂದು ನಾರದ ಹೇಳಿದ.

ಹೀಗೆ ನಾರದ ಹೇಳಿದ ಮಾತನ್ನು ಕೇಳಿ ಹಿಮವಂತ ಸಂತಸಗೊಂಡರೆ, ದೇವತೆಗಳು, ಮುನಿಗಳು 'ಚೆನ್ನಾಗಿ ಹೇಳಿದೆ' ಎಂದು ನಾರದನಿಗೆ ಧನ್ಯವಾದಗಳನ್ನು ಅರ್ಪಿಸಿದರು. ನಾರದನಿಂದ ಮಹೇಶ್ವರನ ಮಹಾಮಹಿಮೆಯನ್ನು ತಿಳಿದ ಅವರೆಲ್ಲ ಸಂತೋಷಪಟ್ಟರು. ಸರ್ವಸ್ವತಂತ್ರನಾದ, ಜಗತ್ತಿಗೆಲ್ಲ ಒಡೆಯನೂ ಆದ ಶಿವನನ್ನು ಬ್ರಹ್ಮಜ್ಞಾನದಿಂದ ಮಾತ್ರ ತಿಳಿಯಲು ಸಾಧ್ಯ ಎಂದು ಪರಸ್ಪರ ಮಾತನಾಡಿಕೊಂಡರು. ಅಲ್ಲಿದ್ದ ಪರ್ವತೋತ್ತಮರೆಲ್ಲರೂ ಸಂಭ್ರಮದಿಂದ ಹಿಮವಂತನಿಗೆ ಹೇಳಿದರು, 'ಗಿರಿರಾಜ, ಕನ್ಯಾದಾನಕ್ಕೆ ಸಿದ್ಧನಾಗು. ಇಲ್ಲಿ ವಿಮರ್ಶೆಮಾಡಬೇಕಾದುದೇನೂ ಇಲ್ಲ. ಶಂಕರನಿಗೆ ಗಿರಿಜೆಯನ್ನು ಧಾರೆ ಎರೆದುಕೊಡು' ಎಂದು ಒತ್ತಾಯಿಸಿದರು.

ಹಿಮವಂತ ಬ್ರಹ್ಮನ ಪ್ರೇರಣೆಯಂತೆ ಶಿವನಿಗೆ ಕನ್ಯಾದಾನವನ್ನು ಮಾಡಿದ. 'ಪರಮೇಶ್ವರ ಈ ನನ್ನ ಕನ್ಯೆಯನ್ನು ನಿನಗೆ ಕೊಡುತ್ತಿದ್ದೇನೆ. ಇವಳನ್ನು ಪತ್ನಿಯನ್ನಾಗಿ ಪರಿಗ್ರಹಿಸು' ಎಂದ ಗಿರಿರಾಜ, ಜಗನ್ಮಾತೆಯಾದ ತನ್ನ ಪುತ್ರಿಯನ್ನು ಶಿವನಿಗೆ ಧಾರೆಯೆರೆದು ಕೊಟ್ಟ. ಇದಕ್ಕೆ ಪ್ರತಿಯಾಗಿ ಪರಮೇಶ್ವರ ಸಹ ಲೋಕಾಚಾರದಂತೆ ಗಿರಿಜೆಯ ಕರಕಮಲವನ್ನು ಪಾಣಿಗ್ರಹಣಮಾಡಿದ. ಆಗ ಎಲ್ಲೆಡೆ ಹರ್ಷೋದ್ಗಾರ ವ್ಯಕ್ತವಾಯಿತು. ಸ್ವರ್ಗ, ಭೂಮಿ, ಆಕಾಶ ಮೊದಲಾದ ಎಲ್ಲಾ ಸ್ಥಳಗಳಲ್ಲೂ ಜಯಘೋಷ ಮೊಳಗಿತು. ಗಂಧರ್ವರು ಪ್ರೀತಿಯಿಂದ ಗಾನಮಾಡಿದರು. ಅಪ್ಸರೆಯರು ನರ್ತನ ಮಾಡಿದರು. ಪಟ್ಟಣದ ಜನರು ಸಂತೋಷದಿಂದ ಸಂಭ್ರಮಿಸಿದರು. ದೇವತೆಗಳೆಲ್ಲರೂ ಆನಂದದ ಸಮುದ್ರದಲ್ಲಿ ಮುಳುಗಿದರು.

ಈ ಸಂದರ್ಭದಲ್ಲಿ ಹಿಮವಂತ ಕನ್ಯಾದಾನಕ್ಕೆ ಯೋಗ್ಯವಾದಂತಹ ಪರಿಕರಗಳನ್ನು ಶಿವನಿಗೆ ಕೊಟ್ಟ. ಹಾಗೇ, ಒಂದು ಸಾವಿರ ಹಸುಗಳು, ನೂರು ಕುದುರೆಗಳು, ನೂರು ಆನೆಗಳು, ಸುವರ್ಣ, ಮುತ್ತುರತ್ನಗಳಿಂದ ಕೆತ್ತಲ್ಪಟ್ಟ ನೂರು ರಥಗಳು, ಕರ್ತವ್ಯನಿಷ್ಠರಾದ ದಾಸಿಯರನ್ನು ಬಳುವಳಿಯಾಗಿ ಕೊಟ್ಟ. ಇವುಗಳೊಂದಿಗೆ ಅನೇಕ ಬಗೆಯ ಸುಂದರವಾದ ರತ್ನಕಲಶಗಳನ್ನು ಸಹ ಉಡುಗೊರೆಯಾಗಿ ನೀಡಿದ. ಹಿಮವಂತನ ಬಂಧುಗಳು ಗಿರಿಜೆಯನ್ನು ಭಕ್ತಿಯಿಂದ ಪೂಜಿಸಿ, ಶಿವನಿಗೆ ವಿಧಿವತ್ತಾಗಿ ಅನೇಕ ದ್ರವ್ಯಗಳನ್ನು ಉಡುಗೊರೆಯಾಗಿ ಕೊಟ್ಟರು.

ಹೀಗೆ ಹಿಮಾಲಯ ತನ್ನ ಮಗಳಾದ ಗಿರಿಜೆಯನ್ನು ಪರಮೇಶ್ವರನಾದ ಶಿವನಿಗೆ ವಿಧಿಪೂರ್ವಕವಾಗಿ ಧಾರೆಯೆರೆದುಕೊಟ್ಟು ಕೃತಾರ್ಥನಾದ. ಇದಾದ ನಂತರ ಹಿಮವಂತ ಕೈಮುಗಿದುಕೊಂಡು ಮಧ್ಯಾಹ್ನದಲ್ಲಿ ಹೇಳಬೇಕಾದಂತಹ ಸ್ತೋತ್ರದಿಂದ ಶಿವನನ್ನು ಮಧುರವಾಗಿ ಸ್ತುತಿಸಿದ.

ವೇದವಿತ್ತುಗಳಾದ ಮುನಿಗಳು ಹಿಮವಂತನ ಅಪ್ಪಣೆಯಂತೆ ಪರ್ಯುಕ್ಷಣವೆಂಬ ಕರ್ಮವನ್ನುಮಾಡಿ 'ದೇವಸ್ಯ ತ್ವಾ ಸವಿತುಃ ಪ್ರಸವೇ' ಎಂಬ ಮಂತ್ರವನ್ನು ಉಚ್ಚರಿಸುತ್ತಾ ದಂಪತಿಗಳಿಗೆ ಪ್ರೋಕ್ಷಣಾದಿಗಳನ್ನು ಮಾಡಿದರು. ಆಗ ಅಲ್ಲಿ ಶಿವ-ಪಾರ್ವತಿಯರ ವಿವಾಹ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು.

ಇಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯ ಪಾರ್ವತೀಖಂಡದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ನಗರದ ರಸ್ತೆಯೊಂದರಲ್ಲಿ ಕಾರಿನಿಂದ ಇಳಿದು ಬರುವ ಮಹಿಳೆಯನ್ನು ಹಿಂದಿನಿಂದ ಹಿಡಿದುಕೊಳ್ಳುವ ಆಗಂತುಕನೊಬ್ಬ, ಆಕೆಯ ಕುತ್ತಿಗೆಗೆ ಚಾಕುವಿನಿಂದ ಇರಿಯುತ್ತಾನೆ. ಕೆಲವು ಬಾರಿ ಚುಚ್ಚಿದ ಬಳಿಕ ಆಕೆ ನೆಲಕ್ಕೆ ಉರುಳುತ್ತಾಳೆ. ಆಕೆಯನ್ನು ಕಾರು ಪಾರ್ಕಿಂಗ್ ಜಾಗಕ್ಕೆ ಆತ ಎಳೆದುಹಾಕುತ್ತಾನೆ. ಈ ದೃಶ್ಯವಿರುವ ಸಿಸಿಟಿವಿ ಕ್ಯಾಮರಾ ದೃಶ್ಯವೊಂದು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಸಂಚಲನ ಸೃಷ್ಟಿಸಿದೆ. #HatmanKillerInMumbai ಎಂಬ ಹ್ಯಾಷ್‌ಟ್ಯಾಗ್‌ನಡಿ 'ಕಪ್ಪು ಟೋಪಿಯ ಹಂತಕ ಮುಂಬೈನ ಅಂಧೇರಿಯಲ್ಲಿ ಮಹಿಳೆಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾನೆ' ಎಂದು ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಆದರೆ ಇದು ನಿಜವಲ್ಲ.

ಮುಂಬೈನಲ್ಲಿ ಇಂತಹ ಘಟನೆ ನಡೆದಿರುವ ಬಗ್ಗೆ ಯಾವುದೇ ವರದಿಯಾಗಿಲ್ಲ ಎಂದು ಮುಂಬೈ ಪೊಲೀಸರು ಸ್ಪಷ್ಟನೆ ನೀಡಿದ್ದಾರೆ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಇದನ್ನು ನಂಬಬೇಡಿ, ಇಂತಹ ಸುದ್ದಿಯಿಂದ ದಿಗಿಲಿಗೆ ಒಳಗಾಗಬೇಡಿ ಎಂದು ಜನರಲ್ಲಿ ಮನವಿ ಮಾಡಿದ್ದಾರೆ. ವಿಡಿಯೊದ ಕೆಳಭಾಗದಲ್ಲಿ 'ಮಾರಿಚ್' ಎಂಬ ಹೆಸರಿದ್ದು, ನಟ, ನಿರ್ಮಾಪಕ ತುಷಾರ್ ಕಪೂರ್ ಅವರ ಮುಂಬರುವ ಚಿತ್ರದ ಹೆಸರಿದು ಎಂದು ಹೇಳಲಾಗಿದೆ. ಚಿತ್ರದ ಪ್ರಚಾರಕ್ಕೆ ಇಂತಹ ವಿಧಾನವನ್ನು ಅನುಸರಿಸಿರುವ ಬಗ್ಗೆ ಸಾಮಾಜಿಕ ಜಾಲತಾಣ ಬಳಕೆದಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು 'ಮಾರಿಚ್' ಚಿತ್ರತಂಡದಿಂದ ಪ್ರತಿಕ್ರಿಯೆ ಸದ್ಯಕ್ಕೆ ಲಭ್ಯವಾಗಿಲ್ಲ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಾರ್ವಭೌಮ ಗುಣಗಳು

ಸಾರ್ವಭೌಮತೆ ನಾಲ್ಕು ಗುಣಕೆ ಗುಣರಾಜ್ಯದಲಿ |
ಧೈರ್ಯ ಮೊದಲಿನದೆರಡನೆಯದು ಮತಿಯೋಜೆ ||
ಸರ್ವದಯೆ ಮೂರನೆಯದದುವೆ ನೀತಿಯ ಮೂಲ |
ನಿರ್ಮಮತ್ವವೆ ಮುಕುಟ – ಮಂಕುತಿಮ್ಮ || 756 ||

ಪದ-ಅರ್ಥ: ಸಾರ್ವಭೌಮತೆ = ಮುಖ್ಯವಾದದ್ದು, ಹಿರಿತನ, ಮೊದಲಿನದೆರಡನೆಯದು = ಮೊದಲಿನದು + ಎರಡನೆಯದು,ಮತಿಯೋಜೆ = ಮತಿಯ + ಓಜೆ(ತೀಕ್ಷ್ಣತೆ, ಶಕ್ತಿ),ಮೂರನೆಯದದುವೆ = ಮೂರನೆಯದು + ಅದುವೆ, ನಿರ್ಮಮತ್ವವೆ = ಮಮಕಾರರಹಿತವಾದದ್ದು, ಮುಕುಟ = ಕಿರೀಟ.

ವಾಚ್ಯಾರ್ಥ: ಗುಣಗಳ ರಾಜ್ಯದಲ್ಲಿ ನಾಲ್ಕು ಗುಣ ಪ್ರಮುಖವಾದವುಗಳು. ಮೊದಲನೆಯದು ಧೈರ್ಯ, ಎರಡನೆಯದು ಬುದ್ಧಿಶಕ್ತಿ. ಸರ್ವರಲ್ಲಿ ದಯೆ ಮೂರನೆಯದು. ಅದುವೇ ನೀತಿಯ ಮೂಲ. ಇವಕ್ಕೆಲ್ಲ ಕಿರೀಟಪ್ರಾಯವಾಗಿರುವುದು ಮಮಕಾರ-ರಹಿತವಾಗಿರುವುದು.

ವಿವರಣೆ: ನಮ್ಮದೊಂದು ಸೀಮಿತವಾದ ಬದುಕು. ಸಹಸ್ರಾರು ವರ್ಷಗಳಿಂದ ಹರಿದು ಬರುತ್ತಿರುವ ಜೀವಪ್ರವಾಹದಲ್ಲಿ ನಮ್ಮದೊಂದು ಹನಿ. ಈ ಹನಿ ಹಾಗೆಯೇ ವ್ಯರ್ಥವಾಗಿ ಹರಿದು ಹೋಗಿ ಅದು ಇದ್ದದ್ದರ ಲಕ್ಷಣವೂ ಇಲ್ಲದಂತೆ ಅನಾಮಧೇಯವಾಗಿ ಕಳೆದು ಹೋಗಬೇಕೇ? ಅಥವಾ ಆ ಹನಿ ಸಾರ್ಥಕವಾಗಿ ಹರಿದು ಮಾರ್ಗದರ್ಶಕವಾಗಬೇಕೇ? ಯಾವ ಬಗೆಯ ಜೀವನ ನಡೆಸಿದರೆ, ಯಾವ ಗುಣಗಳನ್ನು ಹೊಂದಿದರೆ ಆ ಸಾರ್ಥಕತೆ ಬಂದೀತು? ಈ ರೀತಿಯ ಪ್ರಶ್ನೆಗಳು ಪ್ರತಿಯೊಬ್ಬ ಚಿಂತನಾಪರವಾದ ವ್ಯಕ್ತಿಯನ್ನು ಕಾಡುತ್ತವೆ.ಈ ಕಗ್ಗ ಇಂಥ ಬದುಕಿಗೆ ಅತ್ಯಂತ ಮುಖ್ಯವೆನ್ನಿಸಿದ ನಾಲ್ಕುಗುಣಗಳನ್ನು ತಿಳಿಸುತ್ತದೆ. ಇವು ಗುಣಗಳ ರಾಜ್ಯದಲ್ಲಿ ಪ್ರಮುಖವಾದವುಗಳು ಎನ್ನುತ್ತದೆ. ಅವುಗಳಲ್ಲಿಮೊದಲನೆಯದು ಧೈರ್ಯ. ನೀತಿಶತಕ ಮೂರು ತರಹದ ವ್ಯಕ್ತಿಗಳನ್ನು ಗುರುತಿಸುತ್ತದೆ. ಅಧಮರು ಮುಂದೆತೊಂದರೆಗಳು ಬಂದಾವೇನೋ ಎಂಬ ಚಿಂತೆಯಿಂದ ಕೆಲಸವನ್ನು ಪ್ರಾರಂಭಿಸುವುದೇ ಇಲ್ಲ. ಮಧ್ಯಮರು ಕೆಲಸವನ್ನು ಆರಂಭಿಸಿ, ಸ್ವಲ್ಪ ವಿಘ್ನಗಳು ಬಂದರೂ ಹೆದರಿ ಹಿಂದೆ ಸರಿಯುತ್ತಾರೆ. ಉತ್ತಮರು ಆತಂಕಗಳು ಬಂದರೂ ಧೃತಿಗೆಡದೆ ಮುಂದೆ ಸಾಗಿ ಅವುಗಳನ್ನು ದಾಟಿ ಯಶಸ್ಸು ಪಡೆಯುತ್ತಾರೆ. ಎಲ್ಲ ಸಾಧನೆಗಳಿಗೂ ಮೂಲ ಈ ಧೈರ್ಯ.ಎರಡನೆಯ ಅವಶ್ಯಗುಣ ನಿಶಿತವಾದ ಬುದ್ಧಿಶಕ್ತಿ. ಯಾವುದು ಸರಿ,ಯಾವುದು ತಪ್ಪು ಎಂಬುದನ್ನು ತಿಳಿಯುವುದು ವಿವೇಕ. ಪರಿಕಲ್ಪನೆಗಳನ್ನು ರೂಪಿಸುವ, ಉಳಿಸಿಕೊಳ್ಳುವ, ಗ್ರಹಿಸುವ,ನಿರ್ಣಯಿಸುವ, ಅರ್ಥಮಾಡಿಕೊಳ್ಳುವ ಸಾಮರ್ಥ್ಯವೇ ಬುದ್ಧಿಶಕ್ತಿ. ಈನಿಶಿತವಾದ ಬುದ್ಧಿಶಕ್ತಿ ನಮ್ಮೆಲ್ಲ ತೀರ್ಮಾನಗಳಿಗೆ ತಳಪಾಯ. ಮೂರನೆಯ ಆದರ್ಶಗುಣ ಸರ್ವಪ್ರಾಣಿಗಳಲ್ಲಿ ದಯೆ. ದಯೆಯಿಲ್ಲದ ಧರ್ಮವಿಲ್ಲ ಎಂದರು ಶರಣರು. ದಯಾಗುಣಮನುಷ್ಯ ಸಂಬಂಧಗಳನ್ನು ಬೆಸೆಯುತ್ತದೆ, ಎಲ್ಲರನ್ನುಒಂದುಗೂಡಿಸಿ ಭಿನ್ನತೆಯನ್ನು ಕಳೆಯುತ್ತದೆ. ಇವೆಲ್ಲಅಗತ್ಯವಾದ ಗುಣಗಳಿಗೆ ಕಿರೀಟಪ್ರಾಯವಾದದ್ದು ನಿರ್ಮಮತೆ. ಪ್ರತಿಯೊಂದರಲ್ಲೂ ನಾನು, ನನ್ನದು ಎಂಬ ಮಮಕಾರ,ಸಿದ್ಧಿಯ ಶಿಖರವನ್ನು ಮರೆಮಾಚಿಬಿಡುತ್ತದೆ. ಭಗವದ್ಗೀತೆಇದನ್ನು ಒತ್ತಿ ಹೇಳುತ್ತದೆ. ಯಾವ ಮನುಷ್ಯ ಅತಿಯಾದಕಾಮನೆಗಳನ್ನು ತೊರೆದು, ಅಹಂಕಾರವನ್ನು ಕಳೆದುಕೊಂಡು, ಬಂಧಿಸುವ ಮಮಕಾರದಿಂದ ಬಿಡುಗಡೆ ಹೊಂದುತ್ತಾನೋ, ಅವನು ಮಾತ್ರ ಶಾಂತಿಯನ್ನು ಪಡೆಯುತ್ತಾನೆ. ಅವನಿಗೆ ಮಾತ್ರ ಬ್ರಹ್ಮಾನಂದದ ಶಾಂತಿ. ಅದಕ್ಕೇ ಇದು ಸರ್ವಗುಣಗಳಿಗೆ ಹಿರಿದಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ನವೆಂಬರ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಸಪ್ತಮಿ ಗಂ. 29-50 ನಕ್ಷತ್ರ: ಪುಷ್ಯ ಗಂ. 16-13 ಯೋಗ: ಶುಕ್ಲ ಗಂ. 24-31, ಕರಣ: ವಿಷ್ಟಿ ಗಂ. 16-39, ತುಲಾ ಮಾಸದ 28 ನೇ ದಿನ. ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-33 **ಸೂರ್ಯಾಸ್ತ :** 05-57

ಮುಸ್ಲಿಂ ದಿನಾಂಕ : 19 ರಬಿಯುಸ್ಸಾನಿ

ಅದೃಷ್ಟ ಸಂಖ್ಯೆ : 1, 10

ಮೇಷ: ಕೃಷಿ ಕಾರ್ಯಗಳು ಬಿಡುವಿಲ್ಲದೇ ನಡೆಯುವುದು. ಹರಿತವಾದ ವಸ್ತುಗಳಿಂದ ಅನಾಹುತಗಳಾಗುವ ಸಂಭವವಿದೆ. ಎಚ್ಚರಿಕೆಯಿಂದ ಇರುವುದು ಉತ್ತಮ.ತಂದೆಯವರ ಮಾತಿನಂತೆ ನಡೆಯುವುದು ನಿಮ್ಮ ಬಾಳಿಗೆ ಶ್ರೇಯಸ್ಕರ.

ವೃಷಭ: ಈ ದಿನದ ದೂರ ಪ್ರಯಾಣವನ್ನು ಸಾಧ್ಯವಾದಲ್ಲಿ ಮುಂದೂಡುವುದು ಉತ್ತಮ, ಇಲ್ಲವಾದಲ್ಲಿ ರಾಹುಕಾಲದಲ್ಲಿ ಸಂಚರಿಸಬೇಡಿ. ಮದುವೆಯಂತಹ ಶುಭಸಮಾರಂಭಗಳಿಗಾಗಿ ಜವಳಿ ವ್ಯಾಪಾರ ಮಾಡುವುದು ಸರಿಯಲ್ಲ.

ಮಿಥುನ: ಕೇವಲ ವ್ಯವಹಾರಿಕವಾಗಿರುವುದು ಸರಿಯಲ್ಲ. ಮಾನವೀಯತೆ ಬೆಳೆಸಿಕೊಳ್ಳಿರಿ. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಮೇಲೆ ಅಧಿಕವಾದ ಶ್ರಮವಹಿಸಿ.ವಿದ್ಯಾರ್ಜನೆಯಲ್ಲಿ ಉತ್ತಮವಾದ ಹಂತ ತಲುಪಲು ಸಾಧ್ಯ.

ಕರ್ಕಾಟಕ: ಉದ್ಯೋಗದ ಅನಿವಾರ್ಯತೆಯನ್ನು ಬಿಟ್ಟು ದೇಹದ ಆರೋಗ್ಯದ ಬಗೆಗೆ ಕಾಳಜಿ ವಹಿಸುವುದು ಒಳ್ಳೆಯದು. ಜನರನ್ನು ಆಕರ್ಷಿಸುವ ಕಲೆ ಇಲ್ಲಿದೆ.ಆ ತಂತ್ರಗಾರಿಕೆಯನ್ನು ಬಳಸಿಕೊಳ್ಳುವುದುದರಿಂದ ಲಾಭ ಗಳಿಸುವಿರಿ.

ಸಿಂಹ: ನೀವು ಕಂಡ ನಿಮ್ಮ ಕನಸುಗಳಿಗೆ ಹಿರಿಯರ ಬೆಂಬಲ ಒದಗಿಬರಲಿದೆ, ಹಾಗೂ ಸಂಗಾತಿಯ ಅಭಿಪ್ರಾಯಗಳಿಗೂ ಗಮನಹರಿಸಿ. ಒಳಾಂಗಣ ವಿನ್ಯಾಸಗಾರರಿಗೆ ಬೇಡಿಕೆ ಬರಲಿದೆ. ಮಕ್ಕಳಿಂದ ನಿಮಗೆ ಸಂತೋಷವಾಗುವುದು.

ಕನ್ಯಾ: ಬದುಕಿನ ಧನ್ಯತೆಗೆ ಅಚಲವಾದ ನಂಬಿಕೆಯೇ ಮುಖ್ಯವೆಂದು ಅನಿಸುವುದು. ಶೀತಬಾಧೆಯಿಂದ ಬಳಲುವಂತಾಗಬಹುದು. ಅಧಿಕಾರಿಗಳ ಕೈಗೊಂಬೆಯಾಗಿರುವ ನಿಮಗೆ ಈ ದಿನ ಜವಾಬ್ದಾರಿಗಳು ಹೆಚ್ಚುವುದು.

ತುಲಾ: ಎಂಜಿನಿಯರಿಂಗ್ ಕೆಲಸಗಾರರು ತಮ್ಮ ಕಾರ್ಯದಲ್ಲಿ ಚಾಣಕ್ಯ ನೀತಿ ಅನುಸರಿಸುವುದರಿಂದ ವ್ಯವಹಾರದಲ್ಲಿ ಪ್ರಶಂಸೆ ಹಾಗೂ ಯಶಸ್ಸು ಕಾಣುವಿರಿ. ರಾಜಕೀಯ ವ್ಯಕ್ತಿಗಳಿಗೆ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟವಿರುವುದು.

ವೃಶ್ಚಿಕ: ಈ ದಿನ ನಿಮ್ಮ ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಹೆಚ್ಚು ಇರುವುದಿಲ್ಲ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಯಾವುದೇ ಹಣಕಾಸಿನ ಮಧ್ಯಸ್ಥಿಕೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ.

ಧನು: ಸರಕಾರಿ ಕಚೇರಿಗಳಿಗೆ ಅಲೆದಾಟವಾದರೂ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ನಿಮ್ಮ ಪ್ರಾಮಾಣಿಕವಾದ ಪ್ರಯತ್ನಬಲ ಹಾಗೂ ನಿಮ್ಮ ಒಳ್ಳೆಯತನ ಈ ದಿನದಂದು ನಿಮ್ಮ ಕೆಲಸದಲ್ಲಿ ಉಪಯೋಗಕ್ಕೆ ಬರದು.

ಮಕರ: ನೀವೆಣಿಸಿದ ರೀತಿಯಲ್ಲೇ ನಿಮ್ಮ ವೈವಾಹಿಕ ಜೀವನದ ದಾರಿ ಪ್ರಾರಂಭವಾಗಲಿದೆ. ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ನಿಮಗೆ ಜಯ ಸಿಗುವುದು ಖಂಡಿತ. ಕೌಟುಂಬಿಕವಾದ ಶುಭ ಸಮಾಚಾರ ಕೇಳಿಬರಲಿದೆ.

ಕುಂಭ: ತೆಗೆದುಕೊಂಡ ನಿರ್ಧಾರದ ಬಗ್ಗೆ ಅನುಮಾನಗಳು ಎದುರಾಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಂಡು ಸಂತೋಷ ಹೊಂದುವಿರಿ. ಶ್ರೀಆಂಜನೇಯ ಸ್ವಾಮಿಯ ದರ್ಶನದಿಂದ ಕಾರ್ಯ ಸಿದ್ಧಿ

ಮೀನ: ವೃತ್ತಿಯಲ್ಲಿ ಅನುಸರಿಸುತ್ತಿರುವ ಮಾರ್ಗದ ಬಗ್ಗೆ ಇನ್ನೊಮ್ಮೆ ಪರಿಶೀಲನೆ ನಡೆಸಿ ಮುಂದೆ ಸಾಗಿ. ಆರ್ಥಿಕ ಬಲದ ಕೊರತೆ ಆಕಾಂಕ್ಷೆಯನ್ನು ಅಡ್ಡಗಟ್ಟಬಹುದು. ಸಾಲ ತೆಗೆದುಕೊಳ್ಳುವ ನಿರ್ಧಾರ ಸರಿಯಲ್ಲ.

ಪದಬಂಧ 5139


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಮುಟ್ಟಿದರೆ ತಗಲಿಕೊಳ್ಳುವ ಸ್ವಭಾವ (2)
4.ಬೇರೆಯವರನ್ನು ಆಶ್ರಯಿಸಿರುವವನು(5)
5.ದುಃಖ ಹೀಗೆ ಬಂದಿದೆ (3)
6.ಹೂವಿನಲ್ಲಿರುವ ಹುಡಿಯಿದು (3)
8.ಮಂಕ ಹಿಡಿದಿರುವ ಕಪ್ಪೆ (3)
9.ಮನಸ್ಸಿಗೆ ತಾಗುವಂಥದ್ದು (5)
10.ತಡ ಎಂದು ಹೀಗೆನ್ನಿ (3)
11.ಕುದುರೆಯನ್ನೇರುವ ಬಳೆ (3)
14.ಕ್ಷೇಮಕ್ಕೊಂದು ಪರ್ಯಾಯ ಪದ (3)
15. ಹಿತವನ್ನು ಕುರಿತು ಚಿಂತಿಸುವವ ತಿರುಗಿದ್ದಾನಲ್ಲಾ! (5)
16.ಚಕ್ಕಡಿ ಇಲ್ಲಿದೆ (2)

ಮೇಲಿಂದ ಕೆಳಕ್ಕೆ

1.ಅಪ್ಪನ ಈ ರೂಪ ಬಹಳ ವಿರಳ! (4)
2.ನಾವೆಯನ್ನು ನಡೆಸುವವನು (3)
3.ರುಚಿಕಟ್ಟಾದ ಅಡುಗೆ (4)
7.ಮನವನ್ನು ಸೆಳೆದ ಲಕ್ಷ್ಯ (3)
8.ಕರಿಯ ಹತ್ತಿರವಿರಿಸಿದ ಬುಟ್ಟಿ (3)
10.ಅಂಕುಶವಿದ್ದರೂ ಹತೋಟಿಯಿಲ್ಲದ್ದು!(4)
12.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
13.ಸೈನ್ಯದ ಒಂದು ದಳ (3)



5138ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪ್ರಯಾಸ 3.ಅಳ್ಳಕ
5.ಕಲೆ 6.ಖರೀದಿಸು
7.ನದೀಮುಖಜಭೂಮಿ
10.ಆಕಸ್ಮಿಕ 11.ಸಂತ
13.ಟಗರು 14.ಹರಣ

ಮೇಲಿಂದ ಕೆಳಕ್ಕೆ:

1.ಪ್ರತಿ 2.ಸಬಲೆ
4.ಕನಸು 5.ಕದನ
6.ಖನಿಜ 8.ಮುದುಕ
9.ಮಿಡಿತ 10.ಆರ್ಭಟ
11.ಸಂದೇಹ 12.ಗುಣ

ಸುಡೊಕು 5525

9		5		8		4		
	8		7		5		1	9
7		1		6		2		
							3	2
3	6		5		7	8	9	
		8					4	7
		7		5		1		3
5			9		8		2	4
2		3					8	


5524 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,349
ಇಂದಿನ ಅಂತ್ಯ	18,329
▼	20
ದಿನದ ಕನಿಷ್ಠ	18,311

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹540
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1380 (1395)
ಸೂರ್ಯಕಾಂತಿ (ರಿಫೈನ್ಡ್)	₹1550 (1570)
ಪಾಮೋಲಿನ್	₹980 (997)

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ	₹8100-8100
ತರೀಕೆರೆ	₹13000-13000
ತುರುವೇಕೆರೆ	₹12900-13100

ಅಡುಗೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಆಮದು ಮೌಲ್ಯವು 2022ರ ಅಕ್ಟೋಬರ್‌ಗೆ ಕೊನೆಗೊಂಡ ವರ್ಷದಲ್ಲಿ ₹ 1.57 ಲಕ್ಷ ಕೋಟಿಗೆ ತಲುಪಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 34.18ರಷ್ಟು ಏರಿಕೆ ಆಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಸೋಮವಾರ ತಿಳಿಸಿದೆ.

2021ರ ಅಕ್ಟೋಬರ್‌ಗೆ ಕೊನೆಗೊಂಡ ವರ್ಷದಲ್ಲಿ ₹ 1.17 ಲಕ್ಷ ಕೋಟಿ ಮೌಲ್ಯದ ಅಡುಗೆ ಎಣ್ಣೆ ಆಮದಾಗಿತ್ತು. ಪ್ರಮಾಣದ ಲೆಕ್ಕದಲ್ಲಿ 131.3 ಲಕ್ಷ ಟನ್‌ನಿಂದ 140.3 ಲಕ್ಷ ಟನ್ (ಶೇ 6.85) ಏರಿಕೆ ಆಗಿದೆ.

ಮೊದಲ ಎರಡು ತ್ರೈಮಾಸಿಕಗಳಲ್ಲಿ ಆಮದು ನಿಧಾನವಾಗಿ ಹೆಚ್ಚಾಗಿತ್ತು. ಮೂರನೇ ತ್ರೈಮಾಸಿಕದಲ್ಲಿ ತುಸು ಇಳಿಕೆ ಕಂಡಿತ್ತು. ಆದರೆ ನಾಲ್ಕನೇ ತ್ರೈಮಾಸಿಕದಲ್ಲಿ ಆಮದು ಪ್ರಮಾಣವು ಮತ್ತೆ ಏರಿಕೆ ಕಂಡಿತು.

ಆಮದು ವಿವರ (ಲಕ್ಷ ಟನ್)		
ಎಣ್ಣೆ	2020-21	2021-22
ತಾಳೆ ಎಣ್ಣೆ	83.21	79.15
ಸೋಯಾಬೀನ್	28.66	41.71
ಸೂರ್ಯಕಾಂತಿ	18.94	19.44

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಇಳಿಕೆ ಆಗಿದ್ದು ಹಾಗೂ ಇಂಡೊನೇಷ್ಯಾ ದೇಶವು ತಾಳೆ ಎಣ್ಣೆ ರಫ್ತು ಮೇಲೆ ವಿಧಿಸಿದ್ದ ನಿಷೇಧ ಹಿಂಪಡೆದಿದ್ದರಿಂದ ಭಾರತವು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲು ಸಾಧ್ಯವಾಯಿತು ಎಂದು ಒಕ್ಕೂಟವು ಮಾಹಿತಿ ನೀಡಿದೆ.

ತಾಳೆ ಎಣ್ಣೆ ದರದಲ್ಲಿ ಭಾರಿ ಏರಿಳಿತ ಕಂಡಿದ್ದರಿಂದ ಆಮದು ಮೇಲೆ ಪರಿಣಾಮ ಆಗಿದೆ ಎಂದು ಒಕ್ಕೂಟವು ಹೇಳಿದೆ.

ಮುಂಬೈ ಧಾರಣೆ

ಶೇಂಗಾ

14–11–2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1350 (1360)
ಪಾಮ್ ವಾರದ ಡೆಲಿವರಿ	978 (995)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,300 (52,200)
ಬೆಳ್ಳಿ ಕೆ.ಜಿ 61,600 (61,500)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ಓದಿ

19 ತಿಂಗಳ ಕನಿಷ್ಠ ಮಟ್ಟಕ್ಕೆ ತಗ್ಗಿದ ಸಗಟು ಹಣದುಬ್ಬರ

ಇಳಿಕೆ ಕಂಡ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಲ್ಲಿ ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 6.77ಕ್ಕೆ ಇಳಿಕೆಯಾಗಿದೆ. ಇದೇ ಅವಧಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು 19 ತಿಂಗಳ ಕನಿಷ್ಠ ಮಟ್ಟವಾದ ಶೇ 8.39ಕ್ಕೆ ತಗ್ಗಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 7.41ರಷ್ಟು ಇತ್ತು. ಇದು ಶೇ 6.77ಕ್ಕೆ ಇಳಿಕೆ ಆಗಿರುವುದು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ತುಸು ಸಮಾಧಾನ ತರುವಂತಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸಲು ಆರ್‌ಬಿಐ ಹೆಣಗುತ್ತಿದೆ. ಅಕ್ಟೋಬರ್‌ನಲ್ಲಿ ದಾಖಲಾಗಿರುವ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೂರು ತಿಂಗಳ ಕನಿಷ್ಠ.


ಕಚ್ಚಾ ತೈಲ, ಕಬ್ಬಿಣದ ಅದಿರು ಮತ್ತು ಉಕ್ಕಿನ ಬೆಲೆ ಜಾಗತಿಕ ಮಾರುಕಟ್ಟೆಗಳಲ್ಲಿ ತಗ್ಗಿದೆ. ದೇಶಿ ಮಾರುಕಟ್ಟೆಗಳಲ್ಲಿ ವಸ್ತುಗಳ ಪೂರೈಕೆ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳು ಹಣದುಬ್ಬರ ಹೆಚ್ಚಳವನ್ನು ನಿಯಂತ್ರಣದಲ್ಲಿ ಇರಿಸಲು ನೆರವಾಗಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

'ಗೋಧಿ ಹಾಗೂ ಅಕ್ಕಿಯ ಪೂರೈಕೆಯನ್ನು ದೇಶಿ ಮಾರುಕಟ್ಟೆಯಲ್ಲಿ ಸ್ಥಿರವಾಗಿ ಇರಿಸಲು ಮತ್ತು ಬೆಲೆಯನ್ನು ನಿಯಂತ್ರಿಸಲು ಕೇಂದ್ರವು ಕ್ರಮ ಕೈಗೊಂಡಿದೆ. ಇದರ ಪರಿಣಾಮವು ಮುಂದಿನ ತಿಂಗಳುಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಅನುಭವಕ್ಕೆ ಬರುವ ನಿರೀಕ್ಷೆ ಇದೆ' ಎಂದು ಸಚಿವಾಲಯ ತಿಳಿಸಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 6ಕ್ಕಿಂತ ಕಡಿಮೆ ಇರಿಸಲೇಬೇಕಿರುವ ಹೊಣೆ ಆರ್‌ಬಿಐ ಮೇಲಿದೆ. ಆದರೆ, ಜನವರಿಯಿಂದಲೂ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಹೆಚ್ಚಿದೆ. ತನ್ನ ವೈಫಲ್ಯಕ್ಕೆ ಕಾರಣವೇನು ಎಂಬುದನ್ನು ವಿವರಿಸಿ ಆರ್‌ಬಿಐ ಕೇಂದ್ರಕ್ಕೆ ವರದಿ ಸಲ್ಲಿಸಿದೆ. ಕೇಂದ್ರ ವಾಣಿಜ್ಯ ಸಚಿವಾಲಯವು ಸಗಟು ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ. ಸಗಟು ಹಣದುಬ್ಬರ ಪ್ರಮಾಣವು ಸತತ ಐದು ತಿಂಗಳಿಂದ ಇಳಿಕೆಯ ಹಾದಿಯಲ್ಲಿ ಇದೆ.

ಚಿಲ್ಲರೆ ಹಣದುಬ್ಬರದ ಕುರಿತು ಪ್ರತಿಕ್ರಿಯೆ ನೀಡಿರುವ ಕ್ರಿಸಿಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞ ಧರ್ಮಕೀರ್ತಿ ಜೋಷಿ, 'ಮುಂದಿನ ದಿನಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ತಗ್ಗುವ ನಿರೀಕ್ಷೆ ಇದೆ' ಎಂದು ಹೇಳಿದ್ದಾರೆ.

'ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 7.41ರಷ್ಟು ಇದ್ದಿದ್ದು, ಅಕ್ಟೋಬರ್‌ನಲ್ಲಿ ಶೇ 6.77ಕ್ಕೆ ಇಳಿಕೆಯಾಗಿದೆ. ಇದು ಹಣದುಬ್ಬರ ಪ್ರಮಾಣವು ಗರಿಷ್ಠ ಮಟ್ಟವನ್ನು ತಲುಪಿ ಆಗಿದೆ ಎಂಬುದನ್ನು ಹೇಳುತ್ತಿದೆ. ಮುಂದಿನ ದಿನಗಳಲ್ಲಿ ಚಿಲ್ಲರೆ ಹಣದುಬ್ಬರ ಹಾಗೂ ಸಗಟು ಹಣದುಬ್ಬರ ಇಳಿಕೆ ಆಗಬಹುದು' ಎಂದು ಸಿಪಿಎಐ ಸಂಸ್ಥೆಯ ಅಧ್ಯಕ್ಷ ನರೇಂದರ್ ವಾಧ್ವಾ ಹೇಳಿದ್ದಾರೆ.



ಸ್ಮಾರ್ಟ್‌ಫೋನ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಸ್ಮಾರ್ಟ್‌ಫೋನ್ ಮಾರಾಟ 2022ರ ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಶೇ 10ರಷ್ಟು ಇಳಿಕೆ ಆಗಿದ್ದು 4.3 ಕೋಟಿಯಷ್ಟು ಆಗಿದೆ. ಮೂರು ವರ್ಷಗಳ ಕನಿಷ್ಠ ಮಟ್ಟ ಇದಾಗಿದೆ. ಮಾರುಕಟ್ಟೆ ಸಂಶೋಧನಾ ಸಂಸ್ಥೆ ಇಂಟರ್‌ನ್ಯಾಷನಲ್ ಡೇಟಾ ಕಾರ್ಪೊರೇಷನ್ (ಐಡಿಸಿ) ಈ ಮಾಹಿತಿ ನೀಡಿದೆ.

ಮಾರಾಟ ಆಗಿರುವ ಒಟ್ಟು ಫೋನ್‌ಗಳಲ್ಲಿ 5ಜಿ ಸ್ಮಾರ್ಟ್‌ಫೋನ್‌ಗಳ ಸಂಖ್ಯೆ 1.60 ಕೋಟಿ. ಬೇಡಿಕೆ ಕಡಿಮೆ ಇರುವುದು ಹಾಗೂ ಸ್ಮಾರ್ಟ್‌ಫೋನ್‌ಗಳ ಬೆಲೆ ಏರಿಕೆಯು ಹಬ್ಬದ ಖರೀದಿ ಮೇಲೆ ನಕಾರಾತ್ಮಕ ಪರಿಣಾಮ ಬೀರಿತು ಎಂದು ವರದಿಯಲ್ಲಿ ತಿಳಿಸಿದೆ. ಶಿಯೋಮಿ ಶೇ 21.2ರಷ್ಟು ಮಾರುಕಟ್ಟೆ ಪಾಲು ಹೊಂದಿದ್ದು ಮೊದಲ ಸ್ಥಾನದಲ್ಲಿದೆ. ಸ್ಯಾಮ್ಸಂಗ್ ಎರಡನೇ ಸ್ಥಾನ ಪಡೆದುಕೊಂಡಿದೆ. ಪ್ರೀಮಿಯಂ ವಿಭಾಗದಲ್ಲಿ ಶೇ 63ರಷ್ಟು ಮಾರುಕಟ್ಟೆ ಪಾಲು ಹೊಂದುವ ಮೂಲಕ ಆ್ಯಪಲ್ ಮೊದಲ ಸ್ಥಾನದಲ್ಲಿದೆ.

ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ

ಜಿಎಸ್‌ಟಿಗೆ ಇಂಧನ: ಕೇಂದ್ರ ಸಿದ್ಧ



ಶ್ರೀನಗರ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಕೇಂದ್ರ ಸರ್ಕಾರ ಸಿದ್ಧವಿದೆ. ಆದರೆ, ರಾಜ್ಯಗಳು ಇದಕ್ಕೆ ಒಪ್ಪುವ ಸಾಧ್ಯತೆ ಕಡಿಮೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಸೋಮವಾರ ಹೇಳಿದ್ದಾರೆ.

'ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಜಿಎಸ್‌ಟಿ ಅಡಿ ತರಲು ರಾಜ್ಯಗಳು ಒಪ್ಪಬೇಕು. ರಾಜ್ಯಗಳು ಒಪ್ಪಿದರೆ ನಾವು ಸಿದ್ಧರಿದ್ದೇವೆ. ನಾವು ಸದಾ ಸಿದ್ಧರಿದ್ದೇವೆ. ಆದರೆ, ಇದನ್ನು ಹೇಗೆ ಅನುಷ್ಠಾನಗೊಳಿಸುವುದು ಎನ್ನುವ ಸಮಸ್ಯೆ ಇದೆ. ಹಣಕಾಸು ಸಚಿವಾಲಯಕ್ಕೆ ಈ ಪ್ರಶ್ನೆಗೆ ಉತ್ತರ ನೀಡಬೇಕಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮದ್ಯ ಮತ್ತು ಇಂಧನ ರಾಜ್ಯಗಳ ಪಾಲಿಗೆ ವರಮಾನದ ಪ್ರಮುಖ ಮೂಲಗಳಾಗಿವೆ. ಹೀಗಾಗಿ ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲು ಅವು ಒಪ್ಪುವ ಸಂಭವ ಇಲ್ಲ ಎಂದು ಪುರಿ ಹೇಳಿದ್ದಾರೆ.

ಇಂಧನವನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಕುರಿತು ಜಿಎಸ್‌ಟಿ ಮಂಡಳಿಯಲ್ಲಿ ಚರ್ಚೆ ನಡೆಸುವಂತೆ ಕೇರಳ ಹೈಕೋರ್ಟ್ ಸಲಹೆ ನೀಡಿದೆ. ಆದರೆ, ಆ ರಾಜ್ಯದ ಹಣಕಾಸು ಸಚಿವರೇ ಅದನ್ನು ಒಪ್ಪಿಲ್ಲ ಎಂದು ಸಚಿವ ಪುರಿ ಹೇಳಿದ್ದಾರೆ.

'ಬಿವೈಡಿ–ಆಟ್ಟೊ3' ಬೆಲೆ ₹ 33.99 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿವೈಡಿ ಇಂಡಿಯಾ ಕಂಪನಿಯು ತನ್ನ ಇ-ಎಸ್‌ಯುವಿ 'ಬಿವೈಡಿ–ಆಟ್ಟೊ3'ಯ (BYD--ATTO3) ಎಕ್ಸ್ ಷೋರೂಂ ಬೆಲೆಯನ್ನು ₹ 33.99 ಲಕ್ಷಕ್ಕೆ ನಿಗದಿ ಮಾಡಿದೆ.

ಅಕ್ಟೋಬರ್ 11ರಂದು ಬುಕಿಂಗ್ ಆರಂಭವಾಗಿದ್ದು, ಈವರೆಗೆ 1,500 ಗ್ರಾಹಕರು ಬುಕ್ ಮಾಡಿದ್ದಾರೆ. ಈ ವಾಹನವು ಅಲ್ಟ್ರಾ-ಸೇಫ್ ಬ್ಲೇಡ್ ಬ್ಯಾಟರಿ ಹೊಂದಿದ್ದು, 50 ನಿಮಿಷಗಳಲ್ಲಿ ಶೇಕಡ 80ರಷ್ಟು ಚಾರ್ಜ್ ಆಗುತ್ತದೆ ಎಂದು ಕಂಪನಿ ತಿಳಿಸಿದೆ.



ಬಿವೈಡಿ ಆಟ್ಟೊ3

ಎಲ್2 ಅಡ್ವಾನ್ಸ್ಡ್ ಡ್ರೈವಿಂಗ್ ಅಸಿಸ್ಟನ್ಸ್ ಸಿಸ್ಟಮ್ (ಎಡಿಎಎಸ್), 7 ಏರ್‌ಬ್ಯಾಗ್ಸ್, ಪ್ಯಾನರಾಮಿಕ್ ಸನ್‌ರೂಫ್, 12.8 ಇಂಚು ಅಡಾಪ್ಟಿವ್ ರೊಟೇಟಿಂಗ್ ಸ್ಕ್ರೀನ್, ಎನ್‌ಎಫ್‌ಸಿ ಕಾರ್ಡ್ ಕೀ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಮೊದಲ ಹಂತದಲ್ಲಿ ವಾಹನಗಳ ವಿತರಣೆಯು 2023ರ ಜನವರಿಯಿಂದ ಆರಂಭ ಆಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದ 21 ನಗರಗಳಲ್ಲಿ ಒಟ್ಟು 24 ಷೋರೂಂಗಳನ್ನು ತೆರೆಯಲು ಕಂಪನಿ ಯೋಜನೆ ರೂಪಿಸಿದೆ. 2023ರ ಅಂತ್ಯದ ವೇಳೆಗೆ ಕನಿಷ್ಠ 53 ಷೋರೂಂಗಳನ್ನು ಹೊಂದುವ ಗುರಿ ಇರುವುದಾಗಿ ಬಿವೈಡಿ ಇಂಡಿಯಾದ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ವಿಭಾಗದ ಹಿರಿಯ ಉಪಾಧ್ಯಕ್ಷ ಸಂಜಯ್ ಗೋಪಾಲಕೃಷ್ಣನ್ ತಿಳಿಸಿದ್ದಾರೆ.

ಜಪಾನ್‌ನಲ್ಲಿ 6.1 ತೀವ್ರತೆಯ ಭೂಕಂಪ

ಟೋಕಿಯೊ (ಎಎಫ್‌ಪಿ): ಸೋಮವಾರ ಜಪಾನ್ ಕೇಂದ್ರ ಭಾಗದಲ್ಲಿ 6.1 ತೀವ್ರತೆಯ ಭೂಕಂಪ ಸಂಭವಿಸಿದೆ. ರಾಜಧಾನಿ ಟೋಕಿಯೊ ಸೇರಿದಂತೆ ಇತರೆ ನಗರಗಳಲ್ಲಿ ಕಂಪನದ ಅನುಭವವಾಗಿದೆ.

ಜಪಾನ್ ಕಾಲಮಾನ ಸಂಜೆ 5 ಗಂಟೆ ಸುಮಾರಿಗೆ ಆಗ್ನೇಯ ಭಾಗದ ಟೋಬಾದಲ್ಲಿ ಭೂಕಂಪ ಸಂಭವಿಸಿದೆ ಎಂದು ಅಲ್ಲಿನ ಹವಾಮಾನ ಸಂಸ್ಥೆ ತಿಳಿಸಿದೆ.

ಸಾರ್ವಜನಿಕ ಸುದ್ದಿವಾಹಿನಿ ಎನ್‌ಎಚ್‌ಕೆ ಪ್ರಕಾರ, ಫುಕುಶಿಮಾ ಪರಮಾಣು ಸ್ಥಾವರಗಳಲ್ಲಿ ಯಾವುದೇ ಹಾನಿಯ ವರದಿ ಆಗಿಲ್ಲ.

ಬಾಂಬ್ ಸ್ಫೋಟ: ಮಹಿಳೆ ಬಂಧನ

ಇಸ್ತಾಂಬುಲ್ (ಎಪಿ): ಇಲ್ಲಿನ ಜನಪ್ರಿಯ ಪಾದಚಾರಿ ಮಾರ್ಗವಾದ ಇಸ್ತಿಕಾಲ್ ಅವೆನ್ಯೂದಲ್ಲಿ ಸಂಭವಿಸಿದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಸಿರಿಯಾದ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಟರ್ಕಿಯೆ ಗೃಹಸಚಿವ ಸುಲೇಮಾನ್ ಸೋಯ್ಲು ಸೋಮವಾರ ತಿಳಿಸಿದ್ದಾರೆ.

ಬಂಧಿತ ಮಹಿಳೆಗೆ ಕುರ್ದಿಶ್ ಉಗ್ರರೊಂದಿಗೆ ನಂಟು ಇರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದೂ ಹೇಳಿದ್ದಾರೆ.

ಮಳೆ ಹಾನಿ: ಸ್ಟಾಲಿನ್ ಪರಿಶೀಲನೆ

ಕಡಲೂರು (ಪಿಟಿಐ): ಭಾರಿ ಮಳೆಯಿಂದಾಗಿ ಬೆಳೆ ಹಾನಿ ಸಂಭವಿಸಿರುವ ತಮಿಳುನಾಡಿನ ಕಡಲೂರು ಮತ್ತು ಮೈಲಾಡುತುರೈ ಜಿಲ್ಲೆಗಳಿಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸೋಮವಾರ ಭೇಟಿ ನೀಡಿ ಪರಿಶೀಲಿಸಿದರು.

ಬೆಳೆ ಹಾನಿಯಿಂದಾಗಿರುವ ನಷ್ಟದ ಪ್ರಮಾಣವನ್ನು ಅಂದಾಜಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಸ್ಟಾಲಿನ್ ಅವರು ತಿಳಿಸಿದ್ದಾರೆ.

ಬೆಳೆ ಹಾನಿ ಸಂಭವಿಸಿರುವ ರೈತರಿಗೆ ಎಕರೆಗೆ ₹30 ಸಾವಿರ ಪರಿಹಾರ ನೀಡಬೇಕು ಎಂದು ವಿರೋಧ ಪಕ್ಷದ ನಾಯಕ ಕೆ.ಪಳನಿಸ್ವಾಮಿ ಭಾನುವಾರ ಆಗ್ರಹಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಟಾಲಿನ್, ವಿರೋಧ ಪಕ್ಷಗಳು ಸರ್ಕಾರವನ್ನು ಟೀಕಿಸಲು ಮತ್ತು ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿವೆ. ಅದರ ಬಗ್ಗೆ ಚಿಂತಿಸುವುದಿಲ್ಲ ಎಂದಿದ್ದಾರೆ.

ಕಡಲೂರು ಮತ್ತು ಮೈಲಾಡುತುರೈ ಸೇರಿದಂತೆ 24 ಜಿಲ್ಲೆಗಳ 45,826 ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಜಲಾವೃತವಾಗಿದೆ ಎಂದು ಕಂದಾಯ ಮತ್ತು ವಿಪತ್ತು ನಿರ್ವಹಣೆ ಸಚಿವ ಕೆ.ಕೆ.ಎಸ್.ಎಸ್.ಆರ್. ರಾಮಚಂದ್ರನ್ ವಿವರಿಸಿದ್ದಾರೆ.



ಭಾರಿ ಮಳೆಯಿಂದಾಗಿ ಚೆನ್ನೈನ ಮುಗಲಿವಾಕ್ಕಂನಲ್ಲಿ ರಸ್ತೆಗಳು ಜಲಾವೃತಗೊಂಡಿದ್ದು, ಜನರು ಬೋಟ್ ಮೂಲಕ ಸೋಮವಾರ ಸುರಕ್ಷಿತ ಸ್ಥಳಕ್ಕೆ ತೆರಳಿದರು –ಪಿಟಿಐ ಚಿತ್ರ

ಒಂಬತ್ತು ಜಿಲ್ಲೆಗಳ 52,751 ಮಂದಿಗೆ 99 ಪರಿಹಾರ ಶಿಬಿರಗಳಲ್ಲಿ ಆಶ್ರಯ ನೀಡಲಾಗಿದೆ ಎಂದೂ ತಿಳಿಸಿದ್ದಾರೆ.

ಮುಖ್ಯಮಂತ್ರಿ ಅವರು ಪ್ರವಾಹಪೀಡಿತ ಪ್ರದೇಶಗಳ ಜನರಿಗೆ ₹4,100 ಹಾಗೂ 10 ಕೆ.ಜಿ. ಅಕ್ಕಿ ವಿತರಿಸಿದರು. ಸಚಿವ ಸಂಪುಟದ ಹಿರಿಯ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳು ಜೊತೆಗಿದ್ದರು.

ಈಶಾನ್ಯ ಮುಂಗಾರಿನ ಪರಿಣಾಮ ತಮಿಳುನಾಡಿನಾದ್ಯಂತ ಭಾರಿ ಮಳೆ ಸುರಿದಿತ್ತು.

ಸಂಕ್ಷಿಪ್ತ ಸುದ್ದಿ

ಹೆಚ್ಚುವರಿ ಜವಾಬ್ದಾರಿ ವಹಿಸಿಕೊಂಡ ಬ್ರಿಟನ್ ರಾಜ

ಲಂಡನ್ (ಪಿಟಿಐ): ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ತಮ್ಮ 74ನೇ ಹುಟ್ಟುಹಬ್ಬದ ಅಂಗವಾಗಿ ವಿಂಡ್ಸರ್ ಗ್ರೇಟ್ ಪಾರ್ಕ್‌ನ 'ಪಾರ್ಕ್ ರೇಂಜರ್' ಆಗಿ ಹೆಚ್ಚುವರಿ ಜವಾಬ್ದಾರಿ ವಹಿಸಿಕೊಂಡರು.

'ರಾಜ ಮೂರನೇ ಚಾರ್ಲ್ಸ್ ಅವರು ಅಧಿಕೃತವಾಗಿ ವಿಂಡ್ಸರ್ ಗ್ರೇಟ್ ಪಾರ್ಕ್‌ನ ಪಾರ್ಕ್ ರೇಂಜರ್ ಆಗಿದ್ದಾರೆ. ಇದಕ್ಕೂ ಮುನ್ನ ಚಾರ್ಲ್ಸ್ ಅವರ ತಂದೆ ಫಿಲಿಪ್ ಈ ಹುದ್ದೆ ವಹಿಸಿಕೊಂಡಿದ್ದರು' ಎಂದು ಬಕ್ಕಿಂಗ್‌ಹ್ಯಾಮ್ ಪ್ಯಾಲೇಸ್ ಪ್ರಕಟಣೆ ಮೂಲಕ ತಿಳಿಸಿದೆ.

ಯುದ್ಧದ ಕೊನೆಗೊಳ್ಳುವಿಕೆಯ ಆರಂಭ: ಝೆಲೆನ್‌ಸ್ಕಿ

ಕೆರ್ಸಾನ್ (ಉಕ್ರೇನ್) (ಎಪಿ): ಕೆರ್ಸಾನ್‌ನನ್ನು ರಷ್ಯಾದಿಂದ ಹಿಂಪಡೆದುಕೊಳ್ಳುವುದು 'ಯುದ್ಧದ ಕೊನೆಗೊಳ್ಳುವಿಕೆಯ ಆರಂಭ' ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಸೋಮವಾರ ಇಲ್ಲಿ ಸೈನಿಕರನ್ನು ಭೇಟಿ ಮಾಡಿ ತಿಳಿಸಿದ್ದಾರೆ.

ಕೆರ್ಸಾನ್‌ನ ವಿಮೋಚನೆ ಕಳೆದ ಒಂಬತ್ತು ತಿಂಗಳಿನಲ್ಲಿ ಉಕ್ರೇನ್‌ನ ಅತಿದೊಡ್ಡ ಜಯವಾಗಿದೆ. ಉಕ್ರೇನ್‌ನ ಸೈನ್ಯ ತುಂಬಾ ಬಲಶಾಲಿಯಾಗಿದ್ದು, ರಷ್ಯಾ ಆಕ್ರಮಿಸಿಕೊಂಡಿರುವ ಪ್ರದೇಶಗಳನ್ನು ಹಿಂಪಡೆಯುವಲ್ಲಿ ಯಶಸ್ವಿಯಾಗುತ್ತಿದೆ ಎಂದು ಝೆಲೆನ್‌ಸ್ಕಿ ತಿಳಿಸಿದ್ದಾರೆ.

ವಿವಿಯಲ್ಲಿ ಗುಂಡಿನ ದಾಳಿ: 7 ಸಾವು

ಚಾರ್ಲೊಟೆಸ್ವಿಲ್ಲೆ / ಯುಎಸ್ (ಎಪಿ): ವರ್ಜೀನಿಯಾ ವಿಶ್ವವಿದ್ಯಾಲಯದ ಪಾರ್ಕಿಂಗ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಏಳು ಜನ ಮೃತರಾಗಿದ್ದು, ಇಬ್ಬರು ಗಾಯಗೊಂಡಿರುವ ಘಟನೆ ಭಾನುವಾರ ರಾತ್ರಿ ನಡೆದಿದೆ. ಶಂಕಿತ ವಿದ್ಯಾರ್ಥಿಗಾಗಿ ಪೊಲೀಸರು ಶೋಧ ನಡೆಸಿದ್ದಾರೆ ಎಂದು ವಿವಿ ಅಧ್ಯಕ್ಷ ಜಿಮ್ ರಯಾನ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಚಿತ್ರದುರ್ಗ	
ಆಪಿ	45739-46199
ಬೆಟ್ಟೆ	36119-36579
ಕೆಂಪುಗೋಟು	29209-29610
ರಾಶಿ	45229-45669
ಕುಮಟ	
ಚಿಪ್ಪು	26589-33089
ಕೋಕ	16869-30009
ಫ್ಯಾಕ್ಟರಿ	11019-20299
ಹೊಸಚಾಲಿ	28169-32506
ಹಳೆಚಾಲಿ	37269-40899
ಸಾಗರ	
ಬಿಳಿಗೋಟು	22699-30529
ಚಾಲಿ	31300-37609
ಕೋಕ	21219-32989
ಕೆಂಪುಗೋಟು	15699-35899
ರಾಶಿ	36690-47899
ಸಿಪ್ಪೆಗೋಟು	10000-19589
ಶಿವಮೊಗ್ಗ	
ಬೆಟ್ಟೆ	48069-51000
ಗೊಬರಲು	17000-36369
ಹೊಸತು	45139-46699
ರಾಶಿ	40200-47519
ಸರಕು	53690-67199
ಸಿದ್ದಾಪುರ	
ಬಿಳಿಗೋಟು	27699-34149
ಚಾಲಿ	36709-40899
ಕೋಕ	26119-32099
ಕೆಂಪುಗೋಟು	32699-32699
ರಾಶಿ	45109-46299
ತಟ್ಟಿಬೆಟ್ಟೆ	39069-40009
ಶಿರಸಿ	
ಬೆಟ್ಟೆ	38899-46629
ಬಿಳಿಗೋಟು	24069-36099
ಚಾಲಿ	34699-42352
ರಾಶಿ	32919-47000
ಯಲ್ಲಾಪುರ	
ಬಿಳಿಗೋಟು	25009-34869
ಚಾಲಿ	37520-41590
ಕೋಕ	18099-29601
ರಾಶಿ	45870-51899
ಕೆಂಪುಗೋಟು	26699-34319
ತಟ್ಟಿಬೆಟ್ಟೆ	38142-44390

ದ. ಆಫ್ರಿಕಾದಲ್ಲಿ ಭಾರತ ಮೂಲದ ಬಾಲಕಿಯ ಅಪಹರಣ: ಪ್ರತಿಭಟನೆ

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿರುವ ರೈಲ್ಯಾಂಡ್ಸ್ ಪ್ರಾಥಮಿಕ ಶಾಲೆಯಲ್ಲಿ ಅಭ್ಯಸಿಸುತ್ತಿರುವ 8 ವರ್ಷದ ಭಾರತ ಮೂಲದ ವಿದ್ಯಾರ್ಥಿನಿ ಅಬಿರಾ ದೇಖ್ತಾಳ ಅಪಹರಣವಾಗಿ 10 ದಿನಗಳಾದರೂ ಪೊಲೀಸರು ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸ್ಥಳೀಯರು ಪ್ರತಿಭಟನೆ ಮಾಡಿದ್ದಾರೆ.

ನ.4ರಂದು ಬೆಳಿಗ್ಗೆ ತನ್ನ ಸ್ನೇಹಿತೆಗಾಗಿ ಕಾಯುತ್ತಿದ್ದಾಗ ಅಪರಿಚಿತರು ಅಪಹರಿಸಿದ್ದಾರೆ. ಆದರೆ ಈವರೆಗೆ ಆಕೆಯ ಬಗ್ಗೆ ಹಾಗೂ ಆರೋಪಿಗಳ ಕುರಿತು ಯಾವುದೇ ಮಾಹಿತಿ ದೊರೆತಿಲ್ಲ. ಇದರಿಂದ ಕೋಪಗೊಂಡ ಗೇಟ್ಸ್‌ವಿಲ್ಲೆ ನಿವಾಸಿಗಳು ಅಥ್ಲೋನ್ ಪೊಲೀಸ್ ಠಾಣೆಯವರೆಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ ಶಾಲೆ ಬಳಿ ವಿದ್ಯಾರ್ಥಿಗಳು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ. ಅಬಿರಾಳ ಪೋಷಕರು ಕೆಲ ವರ್ಷಗಳ ಹಿಂದೆ ಭಾರತದಿಂದ ಕೇಪ್‌ಟೌನ್‌ಗೆ ತೆರಳಿದ್ದು, ಆಕೆಯ ತಂದೆ ನಗರದಲ್ಲಿ ಮೊಬೈಲ್ ಫೋನ್ ಅಂಗಡಿ ಇಟ್ಟುಕೊಂಡಿದ್ದಾರೆ.



ಮಹಾರಾಷ್ಟ್ರದ ಹಿಂಗೋಲಿ ಜಿಲ್ಲೆಯಲ್ಲಿ ಸೋಮವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಅಪಾರ ಬೆಂಬಲಿಗರೊಂದಿಗೆ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಹೆಜ್ಜೆ ಹಾಕಿದರು –ಪಿಟಿಐ ಚಿತ್ರ

ಚುನಾವಣಾ ಪ್ರಚಾರಕ್ಕೆ ರಾಹುಲ್

ಪ್ರಜಾವಾಣಿ ವಾರ್ತೆ

ಜನತಂತ್ರದ ಹಬ್ಬ 2022

ನವದೆಹಲಿ: ಇತ್ತೀಚೆಗೆ ನಡೆದ ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಇದೇ 22ರಂದು ಗುಜರಾತ್‌ನ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸೆಪ್ಟೆಂಬರ್ 7ರಿಂದ ಆರಂಭವಾಗಿರುವ ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಯಲ್ಲಿ ಸಕ್ರಿಯವಾಗಿರುವ ರಾಹುಲ್ ಗಾಂಧಿ, ಗುಜರಾತಿನ ಸೌರಾಷ್ಟ್ರಕ್ಕೆ ಪ್ರಯಾಣಿಸಲಿದ್ದಾರೆ. ಕಾಂಗ್ರೆಸ್ ಬಲಿಷ್ಠವಾಗಿರುವ ಸೌರಾಷ್ಟ್ರದಲ್ಲಿ ರಾಹುಲ್ ತಮ್ಮ ಮೊದಲ ಭೇಟಿಯಲ್ಲಿಯೇ ಎರಡು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಎರಡನೇ ಹಂತದ ಚುನಾವಣೆಗೂ ಮುನ್ನ ರಾಹುಲ್ ಮತ್ತೊಮ್ಮೆ ಗುಜರಾತಿಗೆ ಭೇಟಿ ನೀಡಲಿದ್ದು, ಆಗಲೂ ಎರಡು ಸಾರ್ವಜನಿಕ ರ‍್ಯಾಲಿಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯವಾಗಿರುವ ಗುಜರಾತ್‌ನ ಚುನಾವಣಾ ಪ್ರಚಾರದಲ್ಲಿ ರಾಹುಲ್ ಉಪಸ್ಥಿತಿಯ ಅಗತ್ಯವಿದೆ. ಒಂದು ವೇಳೆ ಅವರು ಗೈರಾದರೆ, ಅದು ತಪ್ಪು ಸಂದೇಶ ರವಾನಿಸುತ್ತದೆ ಎಂಬ ಚರ್ಚೆ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರಲ್ಲಿ ನಡೆಯುತ್ತಿತ್ತು.

ವೀಕ್ಷಕರ ನೇಮಕ: ಕರ್ನಾಟಕದವರಾದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಲೋಕಸಭೆಯ ಮಾಜಿ ಸದಸ್ಯ ಕೆ.ಎಚ್. ಮುನಿಯಪ್ಪ ಸೇರಿದಂತೆ ಐವರು ನಾಯಕರನ್ನು ಕಾಂಗ್ರೆಸ್ ಗುಜರಾತ್‌ನ ಐದು ವಲಯಗಳಿಗೆ ಚುನಾವಣಾ ವೀಕ್ಷಕರನ್ನಾಗಿ ಸೋಮವಾರ ನೇಮಿಸಿದೆ.

ಬಿ.ಕೆ. ಹರಿಪ್ರಸಾದ್ (ಉತ್ತರ), ಮುಕುಲ್ ವಾಸ್ನಿಕ್ (ದಕ್ಷಿಣ), ಮೋಹನ್ ಪ್ರಕಾಶ್ (ಸೌರಾಷ್ಟ್ರ), ಪೃಥ್ವಿರಾಜ್ ಚೌಹಾಣ್ (ಮಧ್ಯ ಗುಜರಾತ್) ಚುನಾವಣಾ ವೀಕ್ಷಕರಾಗಿದ್ದಾರೆ. ಈ ಐವರು ವೀಕ್ಷಕರು, ರಾಜಸ್ಥಾನದ ಮುಖ್ಯಮಂತ್ರಿಯೂ ಆದ ಕೇಂದ್ರ ವೀಕ್ಷಕ ಅಶೋಕ್ ಗೆಹಲೋತ್ ಅವರಿಗೆ ವರದಿ ಮಾಡಿಕೊಳ್ಳುವರು. ಇವರ ಜತೆಗೆ ಕಾಂಗ್ರೆಸ್ 26 ಲೋಕಸಭಾ ಕ್ಷೇತ್ರಗಳಲ್ಲಿ 32 ವೀಕ್ಷಕರನ್ನೂ ನೇಮಿಸಿದೆ.

2024ರ ಲೋಕಸಭಾ ಚುನಾವಣಾ ಕಾರ್ಯಪಡೆಯ ಸದಸ್ಯರು ಭಾಗವಹಿಸಿದ್ದ ಭಾರತ್ ಜೋಡೊ ಯಾತ್ರೆಯ ಪರಾಮರ್ಶೆ ಸಭೆಯಲ್ಲಿ, ರಾಹುಲ್ ಗಾಂಧಿ ಅವರು ಗುಜರಾತ್ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುವ ಕುರಿತು ಪ್ರಸ್ತಾಪಿಸಲಾಯಿತು.

ಇಂದಿನಿಂದ ಜಿ–20 ಶೃಂಗಸಭೆ • ಬಾಲಿ ತಲುಪಿದ ಪ್ರಧಾನಿ ಮೋದಿ • ವಿಶ್ವ ನಾಯಕರು ಭಾಗಿ

ಜಾಗತಿಕ ಸವಾಲುಗಳ ಚರ್ಚೆಗೆ ವೇದಿಕೆ

ಬಾಲಿ (ಇಂಡೊನೇಷ್ಯಾ) (ಪಿಟಿಐ): ಜಿ–20 ಗುಂಪಿನ ಶೃಂಗಸಭೆಗೆ ಮಂಗಳವಾರ ಇಲ್ಲಿ ಚಾಲನೆ ಸಿಗಲಿದ್ದು, ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸೇರಿದಂತೆ ವಿಶ್ವ ನಾಯಕರ ಸಮಾಗಮಕ್ಕೆ ಇದು ಸಾಕ್ಷಿಯಾಗಲಿದೆ.

ಜಾಗತಿಕ ಬೆಳವಣಿಗೆ, ಆಹಾರ ಮತ್ತು ಇಂಧನ ಭದ್ರತೆ, ಪರಿಸರ, ಆರೋಗ್ಯ ಮತ್ತು ಡಿಜಿಟಲ್ ರೂಪಾಂತರ ಸೇರಿದಂತೆ ಹಲವು ಮಹತ್ವದ ವಿಚಾರಗಳ ಕುರಿತ ಚರ್ಚೆಗೂ ಸಭೆ ವೇದಿಕೆ ಕಲ್ಪಿಸಲಿದೆ.

ಸಭೆಯಲ್ಲಿ ಭಾಗವಹಿಸುತ್ತಿರುವ ಜಾಗತಿಕ ನಾಯಕರು, ಉಕ್ರೇನ್‌ನಲ್ಲಿ ಬೆಳೆಯುವ ಗೋಧಿಯನ್ನು ಕಪ್ಪು ಸಮುದ್ರ ಮಾರ್ಗವಾಗಿ ರಫ್ತು ಮಾಡುವ ಕುರಿತ ಒಪ್ಪಂದ ನವೀಕರಿಸುವಂತೆ ರಷ್ಯಾ ಮೇಲೆ ಒತ್ತಡ ಹೇರುವ ಸಾಧ್ಯತೆ ಹೆಚ್ಚಿದೆ. ರಷ್ಯಾವು ಉಕ್ರೇನ್ ಮೇಲೆ ಯುದ್ಧ ಸಾರಿರುವುದರಿಂದ ಆಗುತ್ತಿರುವ ದುಷ್ಪರಿಣಾಮಗಳ ಕುರಿತೂ ಸಭೆಯಲ್ಲಿ ಚರ್ಚೆ ನಡೆಯುವ ನಿರೀಕ್ಷೆ ಇದೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಸಭೆಯಿಂದ ದೂರ ಉಳಿದಿದ್ದಾರೆ. ಅವರ ಬದಲು ವಿದೇಶಾಂಗ ಸಚಿವ ಸರ್ಗಿ ಲಾವ್ರೊವ್ ಸಭೆಗೆ ಹಾಜರಾಗಲಿದ್ದಾರೆ.

ಪ್ರಧಾನಿ ಮೋದಿ ಅವರು ಸೋಮವಾರ ಬಾಲಿ ತಲುಪಿದ್ದಾರೆ. ವಿಮಾನ ನಿಲ್ದಾಣದಲ್ಲಿ ಸಾಂಪ್ರದಾಯಿಕ ಮತ್ತು ವರ್ಣರಂಜಿತ ಸ್ವಾಗತ ಸ್ವೀಕರಿಸಿರುವ ಅವರು ಜಾಗತಿಕ ಸಮಸ್ಯೆಗಳ ಕುರಿತು ವಿಶ್ವ ನಾಯಕರೊಂದಿಗೆ ಚರ್ಚಿಸಲು ಎದುರು ನೋಡುತ್ತಿರುವುದಾಗಿ ಹೇಳಿದ್ದಾರೆ.

'ಸಭೆಯ ವೇಳೆ ಹಲವು ರಾಷ್ಟ್ರಗಳ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿ ಉಭಯ ರಾಷ್ಟ್ರಗಳ ನಡುವಣ ಬಾಂಧವ್ಯ ಗಟ್ಟಿಗೊಳಿಸಲು ಮುಂದಾಗುತ್ತೇನೆ' ಎಂದು ತಿಳಿಸಿದ್ದಾರೆ.

ಮೋದಿ ಅವರು ಚೀನಾ ಅಧ್ಯಕ್ಷ ಷಿ–ಜಿನ್‌ಪಿಂಗ್ ಜೊತೆ ಪ್ರತ್ಯೇಕವಾಗಿ ಸಭೆ ನಡೆಸಲಿದ್ದಾರೆಯೇ ಇಲ್ಲವೆ ಎಂಬುದು ಇನ್ನೂ ಖಾತರಿಯಾಗಿಲ್ಲ. ಒಂದೊಮ್ಮೆ ಉಭಯ ನಾಯಕರ ನಡುವೆ ಸಭೆ ನಡೆದರೆ ಅದು 2020ರ ಗಾಲ್ವಾನ್ ಕಣಿವೆ ಸಂಘರ್ಷದ ನಂತರ ನಡೆಯುವ ಮೊದಲ ಸಭೆ ಆಗಿರಲಿದೆ.

ಭಾರತವು ಡಿಸೆಂಬರ್ 1ರಂದು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಳ್ಳಲಿದೆ. ಈ ಕುರಿತು ಮಾತನಾಡಿರುವ ಮೋದಿ, 'ಮುಂದಿನ ಸಭೆಯಲ್ಲಿ ಪಾಲ್ಗೊಳ್ಳುವಂತೆ ಎಲ್ಲಾ ನಾಯಕರನ್ನೂ ವೈಯಕ್ತಿಕವಾಗಿ ಆಹ್ವಾನಿಸುತ್ತೇನೆ' ಎಂದಿದ್ದಾರೆ.

ಮಂಗಳವಾರ ಮೋದಿ ಇಂಡೊನೇಷ್ಯಾದಲ್ಲಿರುವ ಭಾರತೀಯರನ್ನು ಭೇಟಿಯಾಗಲಿದ್ದಾರೆ. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಾಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ವರ್ಣರಂಜಿತ ಸ್ವಾಗತ ಕೋರಲಾಯಿತು – ಪಿಟಿಐ ಚಿತ್ರ

'ಇಂಧನ ಭದ್ರತೆ: ತ್ಯಾಗ ಮಾಡಲು ಭಾರತ ಸಿದ್ಧವಿಲ್ಲ'

ನವದೆಹಲಿ: 'ಹವಾಮಾನ ಬದಲಾವಣೆಗೆ ಹೊಂದಿಕೊಳ್ಳಲು ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳನ್ನು ಎದುರಿಸುವುದಕ್ಕಾಗಿ ಅಭಿವೃದ್ಧಿಶೀಲ ದೇಶಗಳಿಗೆ ನೀಡಲು ಉದ್ದೇಶಿಸಿರುವ 'ಹವಾಮಾನ ಹಣಕಾಸು' ನೆರವು ಒದಗಿಸಲು ಶ್ರೀಮಂತ ರಾಷ್ಟ್ರಗಳು ಪದೇ ಪದೇ ವಿಫಲವಾಗಿವೆ. ಹೀಗಿರುವಾಗ ತುರ್ತು ಉಪಶಮನದ ಹೆಸರಿನಲ್ಲಿ ಭಾರತವು ಇಂಧನ ಭದ್ರತೆ ತ್ಯಾಗ ಮಾಡಲು ಸಿದ್ಧವಿಲ್ಲ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ.

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ (ಸಿಒಪಿ–27) ಪಾಲ್ಗೊಂಡಿರುವ ಅವರು ಶ್ರೀಮಂತ ರಾಷ್ಟ್ರಗಳ ಮೇಲೆ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

'ಪ್ರತಿಬಾರಿಯೂ ಹೊಸ ಒಪ್ಪಂದಗಳು ನಡೆದಾಗ, ವೈಜ್ಞಾನಿಕ ವರದಿಗಳು ಬಹಿರಂಗವಾದಾಗ ಅಭಿವೃದ್ಧಿಶೀಲ ರಾಷ್ಟ್ರಗಳಿಂದಲೇ ಹೆಚ್ಚಿನ ಕ್ರಮವನ್ನು ಬಯಸಲಾಗುತ್ತದೆ. ಹೀಗೆ ನಿರಂತರವಾಗಿ 'ಗೋಲ್ ಪೋಸ್ಟ್' ಬದಲಾಯಿಸುತ್ತಿದ್ದರೆ ನಿರೀಕ್ಷಿತ ಫಲಿತಾಂಶ ಸಿಗುವುದಿಲ್ಲ' ಎಂದಿದ್ದಾರೆ.

ಮುಖ್ಯಾಂಶಗಳು

- 2 ದಿನ ನಡೆಯಲಿರುವ ಸಭೆ
- ಡಿ.1ರಂದು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಲಿರುವ ಭಾರತ
- ಸಭೆಯಿಂದ ದೂರ ಉಳಿದಿರುವ ರಷ್ಯಾ ಅಧ್ಯಕ್ಷ ಪುಟಿನ್

ತೈವಾನ್ ಮೇಲಿನ ದಬ್ಬಾಳಿಕೆ: ಬೈಡನ್ ಕಳವಳ

ನುಸಾ ಡುವಾ (ಇಂಡೊನೇಷ್ಯಾ): ತೈವಾನ್ ಮೇಲೆ ಚೀನಾದ ದಬ್ಬಾಳಿಕೆ ಮತ್ತು ಆಕ್ರಮಣಕಾರಿ ನಿಲುವು ಹೆಚ್ಚಾಗುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕಳವಳ ವ್ಯಕ್ತಪಡಿಸಿದ್ದಾರೆ.

ಜೋ ಬೈಡನ್ ಅವರು ಅಧಿಕಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಷಿ ಜಿನ್‌ಪಿಂಗ್ ಅವರನ್ನು ಬಾಲಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ ಎಂದು ಶ್ವೇತಭವನದ ಮೂಲಗಳು ತಿಳಿಸಿವೆ.

ಸುಮಾರು ಮೂರು ಗಂಟೆ ನಡೆದ ಸಭೆಯಲ್ಲಿ ಪರಮಾಣುಬಾಂಬ್ ದಾಳಿಯು ಎಂದಿಗೂ ಎರಡು ದೇಶಗಳ ನಡುವೆ ನಡೆಯಬಾರದು. ಈ ದಾಳಿಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ಬೈಡನ್ ಹೇಳಿದ್ದಾರೆ.

ಎಎಪಿ ಉಸ್ತುವಾರಿ ಸೇರಿ ಇಬ್ಬರು ವಶಕ್ಕೆ

ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆ • ಇ.ಡಿ. ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿಯ ಅಬಕಾರಿ ನೀತಿ ಹಗರಣದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆ ಸಂಬಂಧ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಆಮ್ ಆದ್ಮಿ ಪಕ್ಷದ (ಎಎಪಿ) ಸಂವಹನ ವಿಭಾಗದ ಉಸ್ತುವಾರಿ ವಿಜಯ್ ನಾಯರ್ ಹಾಗೂ ಹೈದರಾಬಾದ್‌ನ ಉದ್ಯಮಿ ಅಭಿಷೇಕ್ ಬೋಯಿನಪಲ್ಲಿ ಅವರನ್ನು ತನ್ನ ಕಸ್ಟಡಿಗೆ ಪಡೆದಿದೆ.

ಇದೇ ಪ್ರಕರಣ ಸಂಬಂಧ ಪ್ರತ್ಯೇಕ ತನಿಖೆ ಕೈಗೊಂಡಿರುವ ಸಿಬಿಐ, ಇಬ್ಬರ ಮೇಲೂ ಎಫ್‌ಐಆರ್ ದಾಖಲಿಸಿತ್ತು. ನಾಯರ್ ಅವರನ್ನು ಸೆಪ್ಟೆಂಬರ್‌ನಲ್ಲಿ ಹಾಗೂ ಬೋಯಿನಪಲ್ಲಿ ಅವರನ್ನು ಹೋದ ತಿಂಗಳು ಬಂಧಿಸಿತ್ತು.

ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳಿಬ್ಬರನ್ನೂ ತನ್ನ ಸುಪರ್ದಿಗೆ ನೀಡುವಂತೆ ಇ.ಡಿ, ದೆಹಲಿಯ ನ್ಯಾಯಾಲಯಕ್ಕೆ ಸೋಮವಾರ ಮನವಿ ಮಾಡಿತ್ತು. ವಿಶೇಷ ನ್ಯಾಯಾಧೀಶ ಎಂ.ಕೆ. ನಾಗಪಾಲ್ ಅವರು ಇದನ್ನು ಮಾನ್ಯ ಮಾಡಿದ್ದು, ಆರೋಪಿಗಳನ್ನು 5 ದಿನಗಳವರೆಗೆ ತನಿಖಾ ಸಂಸ್ಥೆಯ ವಶಕ್ಕೆ ಒಪ್ಪಿಸಿದ್ದಾರೆ.

ಸಿಬಿಐ ಪ್ರಕರಣದಲ್ಲಿ ನ್ಯಾಯಾಲಯವು ಇಬ್ಬರಿಗೂ ತಲಾ ₹2 ಲಕ್ಷದ ವೈಯುಕ್ತಿಯ ಬಾಂಡ್ ಆಧಾರದ ಮೇಲೆ ಜಾಮೀನು ಮಂಜೂರು ಮಾಡಿದೆ.

'ದೆಹಲಿ ಅಬಕಾರಿ ನೀತಿ ರೂಪಿಸುವ ಹಾಗೂ ಅದನ್ನು ಅನುಷ್ಠಾನಗೊಳಿಸುವ ಕಾರ್ಯದಲ್ಲಿ ತೊಡಗಿದ್ದ ಆರೋಪಿಗಳು ಹಾಗೂ ಇತರರ ಹೇಳಿಕೆಯ ಆಧಾರದಲ್ಲಿ ಇವರನ್ನು ಬಂಧಿಸಲಾಗಿದೆ. ಇವರ ಮೇಲಿನ ಆರೋಪ ಸಾಬೀತುಪಡಿಸಲು ಅಗತ್ಯವಿರುವ ಸಾಕ್ಷ್ಯಗಳನ್ನೂ ಇ.ಡಿ ಕಲೆಹಾಕಿದೆ' ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಪ್ರಕರಣ ಸಂಬಂಧ ಇ.ಡಿ ಅಧಿಕಾರಿಗಳು ಒಟ್ಟು 169 ಕಡೆ ಶೋಧ ಕಾರ್ಯ ಕೈಗೊಂಡಿದ್ದರು. ಅಬಕಾರಿ ನೀತಿಯನ್ನು ಅಧಿಕೃತವಾಗಿ ಬಹಿರಂಗ ಪಡಿಸುವುದಕ್ಕೂ ಮುನ್ನವೇ (45 ದಿನಗಳ ಮುಂಚೆ) ಆರೋಪಿಗಳು ಅದನ್ನು ಕೆಲ ಮದ್ಯ ಉತ್ಪಾದಕ ಕಂಪನಿಗಳಿಗೆ ಸೋರಿಕೆಮಾಡಿದ್ದರು. ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸೇರಿದಂತೆ ಈ ಹಗರಣದಲ್ಲಿ ಭಾಗಿಯಾಗಿರುವ ಅತಿ ಗಣ್ಯ ವ್ಯಕ್ತಿಗಳು ಡಿಜಿಟಲ್ ಸಾಕ್ಷ್ಯ ನಾಶಪಡಿಸುವ ಸಲುವಾಗಿ ಒಟ್ಟು 140 ಮೊಬೈಲ್‌ಗಳನ್ನು ಬದಲಾಯಿಸಿದ್ದರು. ಇದು ತಾನು ನಡೆಸಿರುವ ತನಿಖೆಯಿಂದ ಪತ್ತೆಯಾಗಿದೆ' ಎಂದು ಸ್ಥಳೀಯ ನ್ಯಾಯಾಲಯಕ್ಕೆ ಇ.ಡಿ ಮಾಹಿತಿ ನೀಡಿದೆ.

ಮಾಧ್ಯಮ ಪ್ರಕಟಣೆಗಳನ್ನು ಸಲ್ಲಿಸಿ: ಹೈಕೋರ್ಟ್

'ಹಗರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಎಲ್ಲಾ ಪ್ರಕಟಣೆ ಹಾಗೂ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ದೆಹಲಿ ಹೈಕೋರ್ಟ್ ಸೋಮವಾರ ಸಿಬಿಐ ಹಾಗೂ ಇ.ಡಿಗೆ ನಿರ್ದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ತನಿಖಾ ಸಂಸ್ಥೆಗಳು ಮಾಧ್ಯಮಗಳಿಗೆ ಸೋರಿಕೆ ಮಾಡಿವೆ. ಅದರಿಂದ ನನ್ನ ಹಕ್ಕಿಗೆ ಧಕ್ಕೆಯಾಗಿದೆ ಎಂದು ಪ್ರಕರಣದ ಆರೋಪಿ ವಿಜಯ್ ನಾಯರ್ ಅವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಯಶವಂತ್ ವರ್ಮಾ ಅವರಿದ್ದ ನ್ಯಾಯಪೀಠ ಇದರ ವಿಚಾರಣೆ ನಡೆಸಿತು.

'ತನಿಖಾ ಸಂಸ್ಥೆಗಳು ತಾವು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಪ್ರಕಟಣೆ ಹಾಗೂ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಳಿಕ ಅವುಗಳನ್ನು ಪರಿಶೀಲಿಸಲಾಗುತ್ತದೆ. ಅವುಗಳ ಆಧಾರದಲ್ಲೇ ದೃಶ್ಯ ಮಾಧ್ಯಮಗಳು ಸುದ್ದಿ ಬಿತ್ತರಿಸಿವೆಯೇ ಅಥವಾ ತಮ್ಮ ಕಲ್ಪನೆಗೆ ಅನುಸಾರವಾಗಿ ಸುದ್ದಿ ಮಾಡಿವೆಯೇ ಎಂಬುದನ್ನು ಪರಿಶೀಲಿಸಲಾಗುತ್ತದೆ' ಎಂದು ಹೇಳಿರುವ ನ್ಯಾಯಾಲಯ, ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿದೆ.

ಮುಖ್ಯಾಂಶಗಳು

- ಸಿಬಿಐ ದಾಖಲಿಸಿದ್ದ ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು
- ಆರೋಪಿಗಳು 5 ದಿನಗಳವರೆಗೆ ಇ.ಡಿ ಕಸ್ಟಡಿಗೆ

ಪೂಜಾಸ್ಥಳಗಳ ಕಾಯ್ದೆ: ವಿಸ್ತೃತ ವರದಿಗೆ ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 'ಪ್ರಾರ್ಥನಾ ಸ್ಥಳಗಳ ಕಾಯ್ದೆ 1991'ರ ಕೆಲ ನಿಬಂಧನೆಗಳ ಕ್ರಮಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಡಿಸೆಂಬರ್ 12ರ ಒಳಗೆ ವಿಸ್ತೃತವಾದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ಪ್ರಾರ್ಥನಾ ಮತ್ತು ಪೂಜಾ ಸ್ಥಳಗಳ ಸ್ವರೂಪದ ಬದಲಾವಣೆಯನ್ನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದನ್ನು ಕಾಯ್ದೆಯ ಕೆಲ ನಿಬಂಧನೆಗಳಡಿ ನಿರ್ಬಂಧಿಸಲಾಗಿದೆ. ಇದರ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ.



ಕೇಂದ್ರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ತಕ್ಷಣಕ್ಕೆ ಇದಕ್ಕೆ ಉತ್ತರಿಸಲಾಗದು. ಸರ್ಕಾರದ ಜೊತೆಗೆ ಚರ್ಚಿಸಬೇಕು. ಅದಕ್ಕೆ ಸಮಯ ಬೇಕು' ಎಂದರು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಅವರಿದ್ದ ಪೀಠವು ಇದನ್ನು ಮಾನ್ಯ ಮಾಡಿತು.

ಬಳಿಕ, 'ಡಿಸೆಂಬರ್ 12ರ ಒಳಗೆ ಸವಿವರ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಈ ಮಾಹಿತಿಯನ್ನು ಸಂಬಂಧಿಸಿದವರಿಗೂ ತಿಳಿಸಬೇಕು' ಎಂದು ಕೇಂದ್ರಕ್ಕೆ ಸೂಚಿಸಿದ ಪೀಠವು, 2023ರ ಜನವರಿ ಮೊದಲ ವಾರ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿತು.

ಅರ್ಜಿ ಸಲ್ಲಿಸಿರುವ ರಾಜ್ಯಸಭೆ ಸದಸ್ಯ, ಬಿಜೆಪಿ ನಾಯಕ ಸುಬ್ರಹ್ಮಣಿಯನ್ ಸ್ವಾಮಿ ಅವರು, ಅಯೋಧ್ಯೆಯ ರಾಮಮಂದಿರ ಸ್ಥಳದ ವಿವಾದದಂತೆ, ಕಾಶಿ ಮತ್ತು ಮಥುರಾ ಅನ್ನು ಈ ಕಾಯ್ದೆಯಿಂದ ಹೊರಗಿಡಲಾಗಿದೆ. ಈ ಕಾಯ್ದೆಯನ್ನೇ ರದ್ದುಪಡಿಸಬೇಕು ಎಂದು ನಾನು ಕೋರುತ್ತಿಲ್ಲ. ಉಲ್ಲೇಖಿಸಿದ ಎರಡೂ ದೇವಸ್ಥಾನಗಳನ್ನು ಕಾಯ್ದೆಯ ವ್ಯಾಪ್ತಿಗೆ ಸೇರ್ಪಡೆಗೊಳಿಸಿ ಉಳಿಸಿಕೊಳ್ಳಬೇಕು' ಎಂದು ಪೀಠಕ್ಕೆ ಮನವಿ ಮಾಡಿದರು.

ಅರ್ಜಿಯ ವಿಚಾರಣೆಯ ವೇಳೆ ಈ ಮನವಿಯನ್ನು ಪರಿಗಣಿಸಲಾಗುವುದು ಎಂದು ಪೀಠ ಪ್ರತಿಕ್ರಿಯಿಸಿತು. ಇದಕ್ಕೂ ಮೊದಲು ಪೀಠವು, ಈ ಸಂಬಂಧ ಪ್ರತಿಕ್ರಿಯೆ ದಾಖಲಿಸಲು ಅಕ್ಟೋಬರ್ 31ರವರೆಗೂ ಕೇಂದ್ರಕ್ಕೆ ಸಮಯಾವಕಾಶ ನೀಡಿತ್ತು.

ವಕೀಲ ಅಶ್ವಿನಿ ಉಪಾಧ್ಯಾಯ ಅವರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಉಲ್ಲೇಖಿತ ಕಾಯ್ದೆಯ 2, 3 ಮತ್ತು 4ನೇ ಸೆಕ್ಷನ್‌ಗಳನ್ನು ಕೈಬಿಡಬೇಕು ಎಂದು ಕೋರಿದ್ದಾರೆ. ಇದು, ಪೀಠದ ಎದುರು ವಿಚಾರಣೆಯಲ್ಲಿದೆ.

'ಯಾವುದೇ ವ್ಯಕ್ತಿ ಅಥವಾ ಧರ್ಮಕ್ಕೆ ಸೇರಿರುವ ಗುಂಪು ನಿರ್ದಿಷ್ಟ ಪ್ರಾರ್ಥನಾ ಹಾಗೂ ಪೂಜಾ ಸ್ಥಳದ ಹಕ್ಕಿಗಾಗಿ ಕೋರ್ಟ್‌ನಿಂದ ಪರಿಹಾರ ಕೋರುವ ಅವಕಾಶಗಳನ್ನು ಈ ಸೆಕ್ಷನ್‌ಗಳು ಕಸಿದುಕೊಳ್ಳಲಿವೆ' ಎಂದು ಅವರು ಪ್ರತಿಪಾದಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಚಿವರಿಂದ ಮುರ್ಮು ಅವಹೇಳನ: ಮಮತಾ ಕ್ಷಮೆಯಾಚನೆ

ಕೋಲ್ಕತ್ತ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಬಗ್ಗೆ ತಮ್ಮ ಸಂಪುಟದ ಸದಸ್ಯ ಅಖಿಲ್ ಗಿರಿ ನೀಡಿದ್ದ ಅವಹೇಳನಕಾರಿ ಹೇಳಿಕೆಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಕ್ಷಮೆಯಾಚಿಸಿದ್ದಾರೆ.

'ನಾವು ರಾಷ್ಟ್ರಪತಿ ಬಗ್ಗೆ ಅಪಾರ ಗೌರವ ಹೊಂದಿದ್ದೇವೆ. ವೈಯಕ್ತಿಕವಾಗಿ ನನಗೆ ಅವರು ಅತ್ಯಂತ ಪ್ರಿಯರು. ಅವರು ಒಳ್ಳೆಯ ಮಹಿಳೆ. ಅಖಿಲ್ ಗಿರಿ ಅವರು ಆಡಿದ ಮಾತುಗಳಿಗೆ ನಾನು ಕ್ಷಮೆ ಕೋರುವೆ. ಗಿರಿಯವರು ತಪ್ಪು ಮಾಡಿದ್ದಾರೆ. ಪಕ್ಷವು ಈಗಾಗಲೇ ಅವರ ಹೇಳಿಕೆಯನ್ನು ಖಂಡಿಸಿದ್ದು, ಎಚ್ಚರಿಕೆಯನ್ನೂ ನೀಡಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಷ್ಟ್ರಪತಿ ನೋಡಲು ಹೇಗೆ ಕಾಣುತ್ತಾರೆ ಎಂದು ಗಿರಿ ಹೇಳಿದ್ದ ಮಾತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ವಿವಾದ ಉಂಟಾಗುತ್ತಿದ್ದಂತೆಯೇ ಅವರು ಕ್ಷಮೆಯನ್ನೂ ಯಾಚಿಸಿದ್ದರು.

ಗೌರವ್ ದ್ವಿವೇದಿ ಪ್ರಸಾರ ಭಾರತಿ ಸಿಇಒ

ನವದೆಹಲಿ (ಪಿಟಿಐ): ಹಿರಿಯ ಐಎಎಸ್ ಅಧಿಕಾರಿ ಗೌರವ್ ದ್ವಿವೇದಿ ಅವರನ್ನು 'ಪ್ರಸಾರ ಭಾರತಿ'ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (ಸಿಇಒ) ಸೋಮವಾರ ನೇಮಕ ಮಾಡಲಾಗಿದೆ.

ದ್ವಿವೇದಿ ಅವರು ಛತ್ತೀಸಗಡ ಕೇಡರ್‌ನ 1995ನೇ ಬ್ಯಾಚ್ ಅಧಿಕಾರಿ. ಇದಕ್ಕೂ ಮುನ್ನ ಇವರು ಸರ್ಕಾರದ MyGovIndia ದಲ್ಲಿ ಸಿಇಒ ಆಗಿದ್ದರು.

ನೇತಾಜಿ ಜಯಂತಿಗೆ ಸಾರ್ವಜನಿಕ ರಜೆ: ಪಿಐಎಲ್ ವಜಾ

ನವದೆಹಲಿ (ಪಿಟಿಐ): ನೇತಾಜಿ ಸುಭಾಷ್‌ಚಂದ್ರ ಬೋಸ್ ಜನ್ಮದಿನವನ್ನು (ಜ.23) ರಾಷ್ಟ್ರೀಯ ರಜಾದಿನವೆಂದು ಘೋಷಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಜಾಗೊಳಿಸಿದ ಸುಪ್ರೀಂ ಕೋರ್ಟ್, ಈ ಅರ್ಜಿಯನ್ನು 'ಪಿಐಎಲ್ ಅಣಕ' ಎಂದು ಕರೆದಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪಾರ್ದಿವಾಲಾ ಪೀಠ ಈ ಮನವಿಯನ್ನು ತಿರಸ್ಕರಿಸಿತು. 'ನೇತಾಜಿ ಅವರ ಸೇವೆ ಗುರುತಿಸಲು ಉತ್ತಮ ಮಾರ್ಗವೆಂದರೆ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದಂತೆಯೇ ಕಠಿಣ ಪರಿಶ್ರಮ ಪಡುವುದು' ಎಂದು ಹೇಳಿದೆ.

ಕರಾವಳಿ ರಕ್ಷಣಾ ತಾಲೀಮು ಇಂದಿನಿಂದ

ಮುಂಬೈ (ಪಿಟಿಐ): ಭಾರತೀಯ ನೌಕಾಪಡೆಯ ವೆಸ್ಟರ್ನ್ ನೇವಾಲ್ ಕಮಾಂಡ್ ಇದೇ 15 ಮತ್ತು 16ರಂದು ಕರಾವಳಿ ರಕ್ಷಣಾ ತಾಲೀಮು ಹಮ್ಮಿಕೊಂಡಿದೆ.

'ಎರಡು ದಿನಗಳ 'ಸೀ ವಿಜಿಲ್ 2022' ಕಾರ್ಯಕ್ರಮದಲ್ಲಿ ಭಾರತೀಯ ಕರಾವಳಿ ರಕ್ಷಣಾ ಪಡೆ (ಐಸಿಜಿ), ಗುಜರಾತ್, ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕದ ಪೊಲೀಸರು, ಕಸ್ಟಮ್ಸ್ ಸಿಬ್ಬಂದಿ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯವರು, ಮೀನುಗಾರಿಕೆ ಇಲಾಖೆಯ ಸಿಬ್ಬಂದಿ, ಬಂದರು ಅಧಿಕಾರಿಗಳು, ತೈಲ ನಿರ್ವಹಣೆ ಏಜೆನ್ಸಿಗಳು, ಲೈಟ್‌ಹೌಸ್ ಮತ್ತು ಲೈಟ್‌ಶಿಪ್‌ಗಳ ಮಹಾ ನಿರ್ದೇಶಕರು ಹಾಗೂ ರಾಜ್ಯ ಮತ್ತು ಕೇಂದ್ರದ ಇತರ ಏಜೆನ್ಸಿಗಳು ಪಾಲ್ಗೊಳ್ಳಲಿವೆ' ಎಂದು ಕಮಾಂಡ್ ಕೋಸ್ಟಲ್ ಸೆಕ್ಯೂರಿಟಿ ಅಧಿಕಾರಿ ಕ್ಯಾಪ್ಟನ್ ಸುನಿಲ್ ಮೆನನ್ ಸೋಮವಾರ ಹೇಳಿದ್ದಾರೆ.

ಸ್ಫೋಟ: ರೈಲು ಸಂಚಾರ ಪುನರಾರಂಭ

ಉದಯಪುರ/ಜೈಪುರ (ಪಿಟಿಐ): ಉದಯಪುರ–ಅಹಮದಾಬಾದ್ ನಡುವಿನ ರೈಲು ಹಳಿಗಳನ್ನು ದುರಸ್ತಿ ಮಾಡಲಾಗಿದ್ದು, ಸೋಮವಾರ ರೈಲು ಸಂಚಾರ ಪುನರಾರಂಭಗೊಂಡಿದೆ. ಭಾನುವಾರ ನಸುಕಿನ ವೇಳೆ ಈ ಮಾರ್ಗದ ಜವಾರ್ ಮತ್ತು ಖವಾರ್ ಚಂದಾ ಪ್ರದೇಶಗಳ ನಡುವಿನ ಸೇತುವೆಯೊಂದರ ಬಳಿ ಸ್ಫೋಟ ಸಂಭವಿಸಿತ್ತು.

'ಪರಿಣತ ಪ್ರಾಧ್ಯಾಪಕರ' ನೇಮಕಾತಿ: ಕಾನೂನುಗಳಲ್ಲಿ ಬದಲಾವಣೆಗೆ ಸೂಚನೆ

ನವದೆಹಲಿ (ಪಿಟಿಐ): ದೇಶದ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ವಿವಿಧ ಕ್ಷೇತ್ರಗಳ 'ಪರಿಣತ ಪ್ರಾಧ್ಯಾಪಕ'ರನ್ನು (ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್–ಪಿಒಪಿ) ಸೇವೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪೂರಕವಾಗಿ ತಮ್ಮ ಕಾಯ್ದೆ ಮತ್ತು ಸುಗ್ರೀವಾಜ್ಞೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸೂಚಿಸಿದೆ.

ಉನ್ನತ ಶಿಕ್ಷಣ ಸಂಸ್ಥೆಗಳು ವಿವಿಧ ಕ್ಷೇತ್ರಗಳ ತಜ್ಞರನ್ನು ನೇಮಿಸಿಕೊಳ್ಳಲು ಅನುವು ಮಾಡಿಕೊಡಲು ಯುಜಿಸಿ 'ಪ್ರೊಫೆಸರ್ಸ್ ಆಫ್ ಪ್ರಾಕ್ಟೀಸ್' ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಿದೆ. ಅವರನ್ನು ತೊಡಗಿಸಿಕೊಳ್ಳುವ ಸಂಬಂಧ ಈಗಾಗಲೇ ಮಾರ್ಗಸೂಚಿಯನ್ನೂ ಹೊರಡಿಸಿದೆ ಎಂದು ಯುಜಿಸಿ ಕಾರ್ಯದರ್ಶಿ ಪಿ.ಕೆ.ಠಾಕೂರ್ ಎಲ್ಲ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ತಿಳಿಸಿದ್ದಾರೆ. ಈ ಸಂಬಂಧ ತೆಗೆದುಕೊಂಡ ಕ್ರಮಗಳ ಕುರಿತ ವರದಿಯನ್ನು ಸಲ್ಲಿಸುವಂತೆಯೂ ಸೂಚಿಸಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ಪರಿಣತ ಪ್ರಾಧ್ಯಾಪಕರು' ಕೆಟಗರಿಯಡಿ ನೇಮಕಗೊಳ್ಳುವವರಿಗೆ ಔಪಚಾರಿಕ ಶೈಕ್ಷಣಿಕ ಅರ್ಹತೆ ಮತ್ತು ಅಗತ್ಯ ಸಂಖ್ಯೆಯಷ್ಟು ಸಂಶೋಧನಾ ಕೃತಿಗಳನ್ನು ಪ್ರಕಟಿಸಿರಬೇಕು ಎಂಬ ಅರ್ಹತೆಗಳು ಕಡ್ಡಾಯವಾಗಿರುವುದಿಲ್ಲ ಎಂದು ಯುಜಿಸಿ ಕಳೆದ ತಿಂಗಳು ಪ್ರಕಟಿಸಿದ್ದ ಮಾರ್ಗಸೂಚಿಯಲ್ಲಿ ತಿಳಿಸಿತ್ತು.

'ಪರಿಣತ ಪ್ರಾಧ್ಯಾಪಕರ' ಸಂಖ್ಯೆಯು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಮಂಜೂರಾದ ಒಟ್ಟು ಹುದ್ದೆಗಳ ಶೇ 10ಕ್ಕಿಂತ ಹೆಚ್ಚಿರಬಾರದು. ಉದ್ದಿಮೆಗಳಿಂದ ಹಣಕಾಸು ನೆರವು ಹೊಂದಿರುವ, ಸಂಸ್ಥೆಗಳೇ ಸಂಪನ್ಮೂಲ ಭರಿಸುತ್ತಿರುವ ಹಾಗೂ ಗೌರವ ಬೋಧಕರ ವರ್ಗಗಳಡಿ 'ಪರಿಣತ ಪ್ರಾಧ್ಯಾಪಕರ'ನ್ನು ನೇಮಕ ಮಾಡಿಕೊಳ್ಳಬಹುದು. ಈ 'ಪ್ರಾಧ್ಯಾಪಕ'ರ ಗರಿಷ್ಠ ಸೇವಾವಧಿ ಮೂರು ವರ್ಷ ಮೀರಬಾರದು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಒಂದು ವರ್ಷದವರೆಗೆ ಸೇವಾವಧಿಯನ್ನು ವಿಸ್ತರಿಸಬಹುದು ಎಂದು ಮಾರ್ಗಸೂಚಿಗಳಲ್ಲಿ ಹೇಳಲಾಗಿತ್ತು.

ವಿಶ್ವದ ಹಲವೆಡೆ ಚಾಲ್ತಿ

ಈಗಾಗಲೇ ವಿಶ್ವದ ಹಲವೆಡೆ 'ಪರಿಣತ ಪ್ರಾಧ್ಯಾಪಕ' (ಪಿಒಪಿ) ಹುದ್ದೆಗಳು ಚಾಲ್ತಿಯಲ್ಲಿವೆ. ಮೆಸ್ಸಾಚುಸೆಟ್ಸ್ ತಾಂತ್ರಿಕ ಸಂಸ್ಥೆ (ಎಂಐಟಿ), ಹಾರ್ವರ್ಡ್ ವಿಶ್ವವಿದ್ಯಾಲಯ, ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯ, ಲಂಡನ್ನಿನ ಎಸ್‌ಒಎಎಸ್ ವಿಶ್ವವಿದ್ಯಾಲಯ, ಕಾರ್ನೆಲ್ ವಿಶ್ವವಿದ್ಯಾಲಯ, ಹೆಲ್ಸಿಂಕಿ ವಿಶ್ವವಿದ್ಯಾಲಯ ಸೇರಿದಂತೆ ಹಲವೆಡೆ ಈ ಹುದ್ದೆಗಳಿವೆ. ಭಾರತದ ದೆಹಲಿ, ಮದ್ರಾಸ್ ಮತ್ತು ಗುವಾಹಟಿ ವಿಶ್ವವಿದ್ಯಾಲಯಗಳಲ್ಲೂ ಈ ಹುದ್ದೆಗಳಿವೆ ಎಂದು ಯುಜಿಸಿ ತಿಳಿಸಿದೆ.

ನವಲಖಾ: ಆದೇಶವಾದರೂ ಜಾರಿಯಾಗದ ಗೃಹ ಬಂಧನ

ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್– ಮಾವೊ ನಡುವೆ ಸಂಪರ್ಕ ಪ್ರಕರಣದಲ್ಲಿ ಜೈಲಿನಲ್ಲಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ (70) ಅವರನ್ನು ಗೃಹ ಬಂಧನದಲ್ಲಿರಿಸಲು ಸುಪ್ರೀಂ ಕೋರ್ಟ್ ಅನುಮತಿ ನೀಡಿ ನಾಲ್ಕು ದಿನಗಳೇ ಕಳೆದರೂ, ಆ ಕುರಿತ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

2020ರ ಏಪ್ರಿಲ್‌ನಲ್ಲಿ ನವಲಖಾ ಅವರನ್ನು ಬಂಧಿಸಲಾಗಿತ್ತು. ವಿವಿಧ ಕಾಯಿಲೆಗಳಿಂದ ನರಳುತ್ತಿರುವ ಅವರು ಗೃಹಬಂಧನಕ್ಕೆ ಕೋರಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಕುರಿತು ನವೆಂಬರ್ 10ರಂದು ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಮುಂದಿನ 48 ಗಂಟೆಗಳಲ್ಲಿ ನವಲಖಾ ಅವರನ್ನು ಒಂದು ತಿಂಗಳ ಮಟ್ಟಿಗೆ ಗೃಹಬಂಧನದಲ್ಲಿರಿಸುವಂತೆ ಆದೇಶಿಸಿತ್ತು. ಇದಕ್ಕೆ ಕೆಲ ಷರತ್ತುಗಳನ್ನು ವಿಧಿಸಿತ್ತು.

'ನವಲಖಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡುವ ಸಂಬಂಧ ಮುಂಬೈನ ವಿಶೇಷ ಎನ್‌ಐಎ ನ್ಯಾಯಾಲಯದಲ್ಲಿ ಸೋಮವಾರ ಪ್ರಕ್ರಿಯೆಗಳು ಆರಂಭವಾಗಿವೆ' ಎಂದು ಅವರ ವಕೀಲರು ತಿಳಿಸಿದ್ದಾರೆ.

ನ್ಯಾಯಾಧೀಶರ ಸೂಚನೆ ಮೇರೆಗೆ ಸೆಷನ್ಸ್ ನ್ಯಾಯಾಲಯದ ನೋಂದಣಿ ವಿಭಾಗವು ನವಲಖಾ ಅವರ ವಕೀಲರು ಸಲ್ಲಿಸಿರುವ ಶ್ಯೂರಿಟಿ ಪತ್ರಗಳನ್ನು ಪರಿಶೀಲಿಸಿ ಕೆಲ ಆಕ್ಷೇಪಣೆಗಳನ್ನು ಎತ್ತಿದೆ. ಕ್ರಿಮಿನಲ್ ಮ್ಯಾನುಯಲ್ ಪ್ರಕಾರ ಸಲ್ಲಿಸಬೇಕಾದ ಪ್ರಮಾಣ ಪತ್ರಗಳು ಮತ್ತು ಅಗತ್ಯ ದಾಖಲೆಗಳನ್ನು ಸಲ್ಲಿಸಿಲ್ಲ ಎಂದು ಅದು ಹೇಳಿದೆ. ಈ ದಾಖಲೆಗಳನ್ನು ಪಡೆಯಲು ತಿಂಗಳೇ ಬೇಕಾಗುತ್ತದೆ ಎಂದು ನವಲಖಾ ಅವರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸುವಂತೆ ಎನ್‌ಐಎಗೆ ಸೂಚಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಮಂಗಳವಾರಕ್ಕೆ ಮುಂದೂಡಿದರು.

ಕೇರಳ: ಕೆಯುಎಫ್‌ಒಎಸ್ ಕುಲಪತಿ ನೇಮಕ ರದ್ದು

ಕೊಚ್ಚಿ: ಮೀನುಗಾರಿಕೆ ಮತ್ತು ಸಾಗರ ಅಧ್ಯಯನಗಳ ಕೇರಳ ವಿಶ್ವವಿದ್ಯಾಲಯದ (ಕೆಯುಎಫ್‌ಒಎಸ್) ಕುಲಪತಿ ನೇಮಕಾತಿಯನ್ನು ಕೇರಳ ಹೈಕೋರ್ಟ್ ಸೋಮವಾರ ರದ್ದುಗೊಳಿಸಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳನ್ನು ಪಾಲಿಸದೆ ಈ ವಿಶ್ವವಿದ್ಯಾಲಯಕ್ಕೆ ಕುಲಪತಿಯನ್ನು ನೇಮಕಗೊಳಿಸಲಾಗಿತ್ತು ಎಂದು ಮುಖ್ಯ ನ್ಯಾಯಮೂರ್ತಿ ಎಸ್. ಮಣಿಕುಮಾರ್ ಮತ್ತು ನ್ಯಾಯಮೂರ್ತಿ ಶಾಜಿ ಪಿ. ಚಾಲಿ ಅವರಿದ್ದ ನ್ಯಾಯಪೀಠ ಹೇಳಿದೆ.

ಕುಲಪತಿ ನೇಮಕಾತಿಗಾಗಿ ಮೂವರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಹೆಸರನ್ನು ಕುಲಾಧಿಪತಿಗೆ ಕಳುಹಿಸಬೇಕೆಂಬ ಯುಜಿಸಿಯ ನಿಯಮವನ್ನು ಇಲ್ಲಿ ಪಾಲಿಸದೆ ಡಾ. ಕೆ.ರಿಜಿ ಜಾನ್ ಅವರನ್ನು ಕುಲಪತಿಯಾಗಿ ನೇಮಕ ಮಾಡಲಾಗಿದೆ ಎಂದೂ ನ್ಯಾಯಾಲಯ ತಿಳಿಸಿದೆ.

ನೂತನ ಕುಲಪತಿಯನ್ನು ನೇಮಕಗೊಳಿಸಲು ಶೋಧನಾ ಸಮಿತಿ ರಚಿಸುವ ಪ್ರಕ್ರಿಯೆಯನ್ನು ಕುಲಾಧಿಪತಿ ಆರಂಭಿಸಬೇಕು ಮತ್ತು ಯುಜಿಸಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದೂ ನ್ಯಾಯಾಲಯ ಸೂಚಿಸಿದೆ.

ಕೆಯುಎಫ್‌ಒಎಸ್ ಕುಲಪತಿ ನೇಮಕ ಪ್ರಶ್ನಿಸಿ ಹೈಕೋರ್ಟ್‌ಗೆ ಎರಡು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಕುಲಪತಿ ರಿಜಿ ಜಾನ್ ಅವರ ರಾಜೀನಾಮೆ ಕೇಳಿದ್ದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರ ಇತ್ತೀಚಿನ ಕ್ರಮವನ್ನು ನ್ಯಾಯಾಲಯ ಸಮರ್ಥಿಸಿದಂತಾಗಿದೆ.

ಕತ್ತರಿಸಿದ ಮೃತದೇಹದ ಭಾಗಗಳನ್ನು ದೆಹಲಿಯ ಹಲವೆಡೆ ಬಿಸಾಡಿದ್ದ..!

ಪ್ರೇಯಸಿ ಕೊಂದು, 35 ಭಾಗಗಳಾಗಿ ಕತ್ತರಿಸಿದ

ಪ್ರಜಾವಾಣಿ ವಾರ್ತೆ

ನವದೆಹಲಿ/ಮುಂಬೈ: ವ್ಯಕ್ತಿಯೊಬ್ಬ ಪ್ರೇಯಸಿಯ ಕತ್ತುಸೀಳಿ ಕೊಂದು, ಆಕೆಯ ದೇಹವನ್ನು ಸುಮಾರು 35 ಭಾಗಗಳಾಗಿ ಕತ್ತರಿಸಿ ಮೂರು ವಾರಗಳ ಕಾಲ ಫ್ರಿಡ್ಜ್‌ನಲ್ಲಿಟ್ಟು, ನಗರದಾದ್ಯಂತ ಹಲವು ದಿನಗಳ ಕಾಲ ಎಸೆದಿರುವ ಭೀಕರ ಕೃತ್ಯ ಬೆಳಕಿಗೆ ಬಂದಿದೆ ಎಂದು ದೆಹಲಿ ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಶ್ರದ್ಧಾ ವಾಲ್ಕರ್ ಮೃತ ಮಹಿಳೆ. ಅಫ್ತಾಬ್ ಅಮೀನ್ ಪೂನಾವಾಲ (29) ಮತ್ತು ಶ್ರದ್ಧಾ ವಾಲ್ಕರ್ ಮುಂಬೈನ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುವ ವೇಳೆ ಪರಸ್ಪರ ಪರಿಚಿತರಾಗಿ ಪ್ರೀತಿ ಮಾಡುತ್ತಿದ್ದರು. ಇವರ ಪ್ರೀತಿಗೆ ಕುಟುಂಬಸ್ಥರು ವಿರೋಧ ವ್ಯಕ್ತಪಡಿಸಿದ್ದರಿಂದ ಇಬ್ಬರೂ ದಕ್ಷಿಣ ದೆಹಲಿಯ ಮೆಹ್ರೌಲಿಗೆ ಬಂದು ನೆಲೆಸಿದ್ದರು. ಈ ನಡುವೆ ಮೇ 18ರಂದು ಮದುವೆ ವಿಷಯದಲ್ಲಿ ನಡೆದ ವಾಗ್ವಾದ ಶ್ರದ್ಧಾ ಕೊಲೆಯಲ್ಲಿ ಅಂತ್ಯವಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಹತ್ಯೆ ಬಳಿಕ ಮೃತದೇಹವನ್ನು 35 ಭಾಗಗಳಾಗಿ ಕತ್ತರಿಸಿದ್ದ ಪೂನಾವಾಲ, ಅವುಗಳನ್ನು ಸಂಗ್ರಹಿಸಿಡಲು 300 ಲೀಟರ್ ಸಾಮರ್ಥ್ಯದ ಫ್ರಿಡ್ಜ್ ಖರೀದಿಸಿದ್ದ. ನಂತರ 18 ದಿನಗಳ ಕಾಲ ಮಧ್ಯರಾತ್ರಿ ಎರಡು ಗಂಟೆಗೆ ಎದ್ದು ಮೃತದೇಹದ ಭಾಗಗಳನ್ನು ನಗರದ ವಿವಿಧ ಭಾಗಗಳಲ್ಲಿ ಎಸೆದು ಬರುತ್ತಿದ್ದ. ಕಳೇಬರದ ಕೊಳೆತ ವಾಸನೆ ಮರೆಮಾಚಲು ಸುವಾಸನೆ ಬೀರುವ ಊದುಬತ್ತಿ ಮತ್ತು ರೂಮ್ ಫ್ರೆಶ್‌ನರ್ ಬಳಕೆ ಮಾಡುತ್ತಿದ್ದ' ಎಂದು ತಿಳಿಸಿದ್ದಾರೆ.

ದೆಹಲಿ ಮಹಿಳಾ ಆಯೋಗದಿಂದ ನೋಟಿಸ್: ಶ್ರದ್ಧಾ ಹತ್ಯೆ ಪ್ರಕರಣದಲ್ಲಿ ಆರೋಪಿ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ನ.18ರ ಒಳಗಾಗಿ ವರದಿ ಸಲ್ಲಿಸುವಂತೆ ದೆಹಲಿ ಮಹಿಳಾ ಆಯೋಗ, ನಗರ ಪೊಲೀಸ್‌ಗೆ ನೋಟಿಸ್ ರವಾನಿಸಿದೆ. ಪ್ರಕರಣದ ಎಫ್‌ಐಆರ್ ಪ್ರತಿ ಹಾಗೂ ಮತ್ತಿತರ ದಾಖಲೆಗಳನ್ನೂ ಆಯೋಗ ಕೇಳಿದೆ.

6 ತಿಂಗಳ ನಂತರ ಪ್ರಕರಣ ಬೆಳಕಿಗೆ

ಶ್ರದ್ಧಾ ಬಾಲ್ಯದ ಸ್ನೇಹಿತರು ಕಳೆದ ಸೆಪ್ಟೆಂಬರ್‌ನಲ್ಲಿ ಆಕೆಯ ಸಹೋದರನಿಗೆ ಕರೆ ಮಾಡಿ, ಹಲವು ತಿಂಗಳಿನಿಂದ ಶ್ರದ್ಧಾಗೆ ಕರೆ ಹೋಗುತ್ತಿಲ್ಲ ಎಂದು ತಿಳಿಸಿದ್ದರು. ನಂತರ ಶ್ರದ್ಧಾ ಕುಟುಂಬಸ್ಥರು ಪೂನಾವಾಲಗೆ ಕರೆ ಮಾಡಿ ಶ್ರದ್ಧಾ ಬಗ್ಗೆ ವಿಚಾರಿಸಿದ್ದರು. ಆಗ ಪೂನಾವಾಲ, 'ನಾವು ಕೆಲ ತಿಂಗಳ ಹಿಂದೆಯೇ ಬೇರೆ ಬೇರೆ ಆಗಿದ್ದೇವೆ' ಎಂದು ತಿಳಿಸಿದ್ದ. ನಂತರ ಕುಟುಂಬಸ್ಥರು ನಾಪತ್ತೆ ಪ್ರಕರಣ ದಾಖಲಿಸಿದ್ದರು.

ಈ ದೂರಿನ ಅನ್ವಯ ಪೂನಾವಾಲನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಭೀಕರ ಹತ್ಯೆಯ ಬಗ್ಗೆ ಬಾಯ್ಬಿಟ್ಟಿದ್ದಾನೆ. ಸದ್ಯ ಪೂನಾವಾಲನನ್ನು 5 ದಿನಗಳ ಕಾಲ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಅಫ್ತಾಬ್



ಶ್ರದ್ಧಾ ವಾಲ್ಕರ್

ಅಮೆರಿಕದಲ್ಲಿ ಉನ್ನತ ಶಿಕ್ಷಣ: ಭಾರತೀಯರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ತೆರಳಿದ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯು ಈ ವರ್ಷವೂ ಏರಿಕೆಯಾಗಿದೆ ಎಂದು 'ಓಪನ್ ಡೋರ್ಸ್' ತನ್ನ 2021–22ರ ವರದಿಯಲ್ಲಿ ಹೇಳಿದೆ.


ಈ ಶೈಕ್ಷಣಿಕ ವರ್ಷದಲ್ಲಿ ಸುಮಾರು 2 ಲಕ್ಷ ಭಾರತೀಯ ವಿದ್ಯಾರ್ಥಿಗಳು ಅಮೆರಿಕಕ್ಕೆ ತೆರಳಿದ್ದಾರೆ. ಈ ಪ್ರಮಾಣವು ಕಳೆದ ವರ್ಷಕ್ಕಿಂತ ಶೇ 19ರಷ್ಟು ಹೆಚ್ಚಿದೆ. ಅಮೆರಿಕದಲ್ಲಿ ಓದುತ್ತಿರುವ ವಿದೇಶಿ ವಿದ್ಯಾರ್ಥಿಗಳ ಪೈಕಿ ಶೇ 21ರಷ್ಟು ಮಂದಿ ಭಾರತೀಯರು ಎಂದು ವರದಿಯಲ್ಲಿ ಹೇಳಲಾಗಿದೆ.

ಇಂಗ್ಲೆಂಡ್ ತಂಡದ ಮಾದರಿ ಅನುಸರಿಸಲು ಸಲಹೆ

‘ಪ್ರತ್ಯೇಕ ನಾಯಕ ಅಥವಾ ಕೋಚ್ ಬೇಕೇ ಎಂಬುದರ ಬಗ್ಗೆ ನನಗೆ ಖಚಿತತೆ ಇಲ್ಲ. ಆಯ್ಕೆ ಮಾಡುವ ತಂಡದ ಮೇಲೆ ಎಲ್ಲವೂ ಅವಲಂಬಿತವಾಗಿದೆ’ ಎಂದರು ಕುಂಬ್ಳೆ.

ಟೆಸ್ಟ್, ಟಿ20ಗೆ ಪ್ರತ್ಯೇಕ ತಂಡ ಅಗತ್ಯ: ಅನಿಲ್ ಕುಂಬ್ಳೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಯಶಸ್ಸು ಸಾಧಿಸಬೇಕಾದರೆ ಭಾರತವು ಟೆಸ್ಟ್ ಮತ್ತು ನಿಗದಿತ ಓವರ್‌ಗಳ ಮಾದರಿಗೆ (ಏಕದಿನ ಮತ್ತು ಟಿ20) ಪ್ರತ್ಯೇಕ ತಂಡಗಳನ್ನು ಹೊಂದುವುದು ಅಗತ್ಯ ಎಂದು ಕ್ರಿಕೆಟಿಗ ಅನಿಲ್ ಕುಂಬ್ಳೆ ಸಲಹೆ ನೀಡಿದ್ದಾರೆ.



‘ಖಂಡಿತವಾಗಿಯೂ ಎರಡು ಪ್ರತ್ಯೇಕ ತಂಡಗಳನ್ನು ಹೊಂದುವುದು ಅಗತ್ಯ. ಚುಟುಕು ಕ್ರಿಕೆಟ್‌ನಲ್ಲಿ ಯಶಸ್ಸು ಸಾಧಿಸಲು ಟಿ20 ಪರಿಣತರು ಬೇಕು. ಈಗಿನ ಇಂಗ್ಲೆಂಡ್ ತಂಡ ಹಾಗೂ ಕಳೆದ ಟಿ20 ವಿಶ್ವಕಪ್ ಚಾಂಪಿಯನ್ ಆಸ್ಟ್ರೇಲಿಯಾ ಅದನ್ನು ಈಗಾಗಲೇ ತೋರಿಸಿಕೊಟ್ಟಿದೆ. ನಿಗದಿತ ಓವರ್‌ಗಳ ಮಾದರಿಯಲ್ಲಿ ಹೆಚ್ಚಿನ ಆಲ್‌ರೌಂಡರ್‌ಗಳು ತಂಡದಲ್ಲಿರಬೇಕು’ ಎಂದು ‘ಇಎಸ್‌ಪಿಎನ್ ಕ್ರಿಕ್‌ಇನ್ಫೋ’ಗೆ ತಿಳಿಸಿದ್ದಾರೆ.

‘ಇಂಗ್ಲೆಂಡ್ ತಂಡದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ 7ನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡುವರು. 7ನೇ ಕ್ರಮಾಂಕದಲ್ಲಿ ಅಂತಹ ಶ್ರೇಷ್ಠ ಬ್ಯಾಟರ್‌ಅನ್ನು ಹೊಂದಿರುವ ಇನ್ನೊಂದು ತಂಡ ಇಲ್ಲ. ಆಸ್ಟ್ರೇಲಿಯಾ ಪರ ಮಾರ್ಕಸ್ ಸ್ಟೊಯಿನಿಸ್ ಆರನೇ ಕ್ರಮಾಂಕದಲ್ಲಿ ಆಡಲು ಬರುವರು. ಕೆಳ ಕ್ರಮಾಂಕದವರೆಗೂ ಶ್ರೇಷ್ಠ ಬ್ಯಾಟರ್‌ಗಳು ಇರುವ ತಂಡವನ್ನು ಕಟ್ಟಬೇಕಿದೆ’ ಎಂದರು.

ಪ್ರತ್ಯೇಕ ಕೋಚ್ ಇರಲಿ: ಆಸ್ಟ್ರೇಲಿಯಾದ ಮಾಜಿ ಆಲ್‌ರೌಂಡರ್ ಟಾಮ್ ಮೂಡಿ ‘ ಎಲ್ಲ ತಂಡಗಳೂ ‘ವೈಟ್ ಬಾಲ್’ ಮತ್ತು ’ರೆಡ್ ಬಾಲ್’ ಮಾದರಿಗೆ ಪ್ರತ್ಯೇಕ ಕೋಚ್‌ಅನ್ನು ನೇಮಿಸುವ ಚಿಂತನೆ ಮಾಡಬೇಕಿದೆ ಎಂದಿದ್ದಾರೆ.

25 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ; ನ.30 ರಂದು ಪ್ರದಾನ

ಅಚಂತ ಶರತ್‌ಗೆ ಖೇಲ್‌ರತ್ನ ಗೌರವ

ನವದೆಹಲಿ (ಪಿಟಿಐ): ಟೇಬಲ್ ಟೆನಿಸ್ ದಿಗ್ಗಜ ಆಟಗಾರ ಅಚಂತ ಶರತ್ ಕಮಲ್ ಅವರು ಕ್ರೀಡಾಕ್ಷೇತ್ರದ ಸಾಧಕರಿಗೆ ನೀಡುವ ಅತ್ಯುನ್ನತ ಗೌರವ ‘ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ’ಗೆ ಭಾಜನರಾಗಿದ್ದಾರೆ.

ಬ್ಯಾಡ್ಮಿಂಟನ್ ಆಟಗಾರರಾದ ಲಕ್ಷ್ಯ ಸೇನ್, ಎಚ್.ಎಸ್.ಪ್ರಣಯ್, ಮಹಿಳಾ ಬಾಕ್ಸರ್ ನಿಖತ್ ಜರೀನ್, ಅಥ್ಲೀಟ್‌ಗಳಾದ ಎಲ್ದೋಸ್ ಪಾಲ್ ಮತ್ತು ಅವಿನಾಶ್ ಸಬ್ಳೆ ಒಳಗೊಂಡಂತೆ 25 ಮಂದಿ ಈ ಸಾಲಿನ ಅರ್ಜುನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭ ರಾಷ್ಟ್ರಪತಿ ಭವನದಲ್ಲಿ ನ.30 ರಂದು ನಡೆಯಲಿದೆ.

ಪ್ರಶಸ್ತಿ ವಿಜೇತರ ವಿವರ: ಮೇಜರ್ ಧ್ಯಾನ್‌ಚಂದ್ ಖೇಲ್‌ರತ್ನ: ಅಚಂತಾ ಶರತ್ ಕಮಲ್ (ಟೇಬಲ್ ಟೆನಿಸ್)

ಅರ್ಜುನ: ಸೀಮಾ ಪೂನಿಯಾ (ಅಥ್ಲೆಟಿಕ್ಸ್), ಎಲ್ದೋಸ್ ಪಾಲ್ (ಅಥ್ಲೆಟಿಕ್ಸ್), ಅವಿನಾಶ್ ಸಬ್ಳೆ (ಅಥ್ಲೆಟಿಕ್ಸ್), ಲಕ್ಷ್ಯ ಸೇನ್ (ಬ್ಯಾಡ್ಮಿಂಟನ್), ಎಚ್.ಎಸ್.ಪ್ರಣಯ್ (ಬ್ಯಾಡ್ಮಿಂಟನ್), ಅಮಿತ್ (ಬಾಕ್ಸಿಂಗ್), ನಿಖತ್ ಜರೀನ್ (ಬಾಕ್ಸಿಂಗ್), ಭಕ್ತಿ ಕುಲಕರ್ಣಿ (ಚೆಸ್), ಆರ್.ಪ್ರಗ್ನಾನಂದ (ಚೆಸ್), ದೀಪ್ ಗ್ರೇಸ್ ಎಕ್ಕಾ (ಹಾಕಿ), ಸುಶೀಲಾ ದೇವಿ (ಜುಡೊ), ಸಾಕ್ಷಿ ಕುಮಾರಿ (ಕಬಡ್ಡಿ), ನಯನ್ಮೋಣಿ ಸೈಕಿಯಾ (ಲಾನ್ ಬಾಲ್), ಸಾಗರ್ ಕೈಲಾಸ್ (ಮಲ್ಲಕಂಬ), ಇಳವೇನಿಲ್ ವಲರಿವನ್ (ಶೂಟಿಂಗ್), ಓಂಪ್ರಕಾಶ್ ಮಿತರ್ವಲ್ (ಶೂಟಿಂಗ್), ಶ್ರೀಜಾ ಅಕುಲಾ (ಟಿಟಿ), ವಿಕಾಸ್ ಠಾಕೂರ್ (ವೇಟ್‌ಲಿಫ್ಟಿಂಗ್), ಅನ್ಶು (ಕುಸ್ತಿ), ಸರಿತಾ (ಕುಸ್ತಿ), ಪರ್ವೀನ್ (ವುಶು), ಮಾನಸಿ ಗಿರೀಶ್‌ಚಂದ್ರ ಜೋಷಿ (ಪ್ಯಾರಾ ಬ್ಯಾಡ್ಮಿಂಟನ್), ತರುಣ್ ಧಿಲ್ಲೋನ್ (ಪ್ಯಾರಾ ಬ್ಯಾಡ್ಮಿಂಟನ್), ಸ್ವಪ್ನಿಲ್ ಸಂಜಯ್ ಪಾಟೀಲ್ (ಪ್ಯಾರಾ ಈಜು), ಜೆರ್ಲಿನ್ ಅನಿಕಾ (ಡೆಫ್ ಬ್ಯಾಡ್ಮಿಂಟನ್)

ದ್ರೋಣಾಚಾರ್ಯ: ಜೀವನ್‌ಜ್ಯೋತ್ ಸಿಂಗ್ ತೇಜ (ಆರ್ಚರಿ), ಮೊಹಮ್ಮದ್ ಅಲಿ ಖಮರ್ (ಬಾಕ್ಸಿಂಗ್), ಸುಮಾ ಸಿದ್ಧಾರ್ಥ್ ಶಿರೂರು (ಪ್ಯಾರಾ ಶೂಟಿಂಗ್), ಸುಜೀತ್ ಮಾನ್ (ಕುಸ್ತಿ)

ದ್ರೋಣಾಚಾರ್ಯ (ಜೀವಮಾನ ಸಾಧನೆ ವಿಭಾಗ): ದಿನೇಶ್ ಲಾಡ್ (ಕ್ರಿಕೆಟ್), ಬಿಮಲ್ ಪ್ರಫುಲ್ಲಾ ಘೋಷ್ (ಫುಟ್‌ಬಾಲ್), ರಾಜ್ ಸಿಂಗ್ (ಕುಸ್ತಿ)

ಧ್ಯಾನ್‌ಚಂದ್: ಸಿ.ಅಶ್ವಿನಿ ಅಕ್ಕುಂಜಿ (ಅಥ್ಲೆಟಿಕ್ಸ್), ಬಿ.ಸಿ.ಸುರೇಶ್ (ಕಬಡ್ಡಿ), ಧರಂವೀರ್ ಸಿಂಗ್ (ಹಾಕಿ), ನೀರ್ ಬಹಾದೂರ್ (ಪ್ಯಾರಾ ಅಥ್ಲೆಟಿಕ್ಸ್)

ರಾಷ್ಟ್ರೀಯ ಖೇಲ್ ಪ್ರೋತ್ಸಾಹನ್ ಪುರಸ್ಕಾರ: ಟ್ರಾನ್ಸ್‌ಸ್ಟೇಡಿಯಾ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್, ಕಳಿಂಗಾ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ, ಲಡಾಖ್ ಸ್ಕಿ ಆ್ಯಂಡ್ ಸ್ನೋಬೋರ್ಡ್ ಅಸೋಸಿಯೇಷನ್.



ಅಚಂತ ಶರತ್ ಕಮಲ್

ಅಶ್ವಿನಿ, ಸುರೇಶ್‌ಗೆ ‘ಧ್ಯಾನ್‌ಚಂದ್’

ಅಂತರರಾಷ್ಟ್ರೀಯ ಅಥ್ಲೀಟ್, ಕೋಚ್ ಆಗಿರುವ ಕರ್ನಾಟಕದ ಅಶ್ವಿನಿ ಅಕ್ಕುಂಜಿ ಮತ್ತು ಕಬಡ್ಡಿ ಆಟಗಾರ ಬಿ.ಸಿ.ಸುರೇಶ್ ಅವರು ಜೀವಮಾನದ ಸಾಧನೆಗೆ ನೀಡುವ ಧ್ಯಾನ್‌ಚಂದ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.




ಅಶ್ವಿನಿ ಅಕ್ಕುಂಜಿ



ಸುಮಾ ಶಿರೂರು

ಪ್ಯಾರಾ ಶೂಟಿಂಗ್ ಕೋಚ್ ಕರ್ನಾಟಕದ ಸುಮಾ ಶಿರೂರು ಅವರು ಕೋಚಿಂಗ್ ಕ್ಷೇತ್ರದ ಸಾಧಕರಿಗೆ ನೀಡುವ ದ್ರೋಣಾಚಾರ್ಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.



ಬಿ.ಸಿ.ಸುರೇಶ್

‘ಕಬಡ್ಡಿ ಕ್ರೀಡೆಗೆ ನೀಡಿರುವ ಕೊಡುಗೆ ಗುರುತಿಸಿ ಪ್ರಶಸ್ತಿ ನೀಡಿರುವುದು ಸಂತಸ ಉಂಟುಮಾಡಿದೆ’ ಎಂದು ಬಿ.ಸಿ.ಸುರೇಶ್ ಪ್ರತಿಕ್ರಿಯಿಸಿದ್ದಾರೆ.

‘ಧ್ಯಾನ್‌ಚಂದ್ ಹೆಸರಿನಲ್ಲಿ ಪ್ರಶಸ್ತಿ ದೊರೆತಿರುವುದು ಸಂತಸ ಉಂಟುಮಾಡಿದೆ. ಇದಕ್ಕಾಗಿ ನನ್ನ ಕೋಚ್‌ಗಳು, ಹೆತ್ತವರು, ಎಸ್‌ಎಐ ಮತ್ತು ಎಎಫ್‌ಐಗೆ ಕೃತಜ್ಞತೆ ಸಲ್ಲಿಸುವೆ. ಜೀವನದಲ್ಲಿ ಏಳುಬೀಳುಗಳು ಉಂಟಾಗಿದ್ದ ಸಮಯದಲ್ಲೂ ಭರವಸೆ ಕೈಬಿಟ್ಟರಲಿಲ್ಲ’ ಎಂದು ಬೆಂಗಳೂರಿನ ಎಸ್‌ಎಐನಲ್ಲಿ ಕೋಚ್ ಆಗಿರುವ ಅಶ್ವಿನಿ ಸಂತಸ ಹಂಚಿಕೊಂಡರು.

ಸುದ್ದಿ 2 ನಿಮಿಷ

ಐಒಎ ಅಥ್ಲೀಟ್‌ಗಳ ಸಮಿತಿಗೆ ಮೇರಿ ಕೋಮ್ ಆಯ್ಕೆ

ನವದೆಹಲಿ (ಪಿಟಿಐ): ಮಹಿಳಾ ಬಾಕ್ಸರ್ ಮೇರಿ ಕೋಮ್, ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಮತ್ತು ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಸೇರಿ 10 ಮಂದಿ ಕ್ರೀಡಾಪಟುಗಳು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಥ್ಲೀಟ್‌ಗಳ ಸಮಿತಿಯ ಸದಸ್ಯರಾಗಿ ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

ವಿಂಟರ್ ಒಲಿಂಪಿಯನ್ ಶಿವ ಕೇಶವನ್, ಶೂಟರ್ ಗಗನ್ ನಾರಂಗ್, ಟೇಬಲ್ ಟೆನಿಸ್ ಪಟು ಅಚಂತ ಶರತ್ ಕಮಲ್, ಹಾಕಿ ಆಟಗಾರ್ತಿ ರಾಣಿ ರಾಂಪಾಲ್, ಫೆನ್ಸರ್ ಭವಾನಿ ದೇವಿ, ರೋವರ್ ಬಜರಂಗ್ ಲಾಲ್ ಮತ್ತು ಮಾಜಿ ಶಾಟ್‌ಪಟ್ ಪಟು ಒ.ಪಿ. ಖರಾನಾ ಅಪೆಕ್ಸ್ ಸಮಿತಿಗೆ ಆಯ್ಕೆಯಾದ ಇನ್ನುಳಿದ ಅಥ್ಲೀಟ್‌ಗಳು.



ಚುನಾವಣೆಗೆ ಈ ಹತ್ತು ಮಂದಿ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಮುಂಬರುವ ಐಒಎ ಚುನಾವಣೆಗೆ ಚುನಾವಣಾಧಿಕಾರಿಯಾಗಿರುವ ಉಮೇಶ್ ಸಿನ್ಹಾ ಅವರು ಅಥ್ಲೀಟ್‌ಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಪ್ರಕಟಿಸಿದರು.

ಮಾಜಿ ಶೂಟಿಂಗ್ ಪಟು ಅಭಿನವ್ ಬಿಂದ್ರಾ ಮತ್ತು ಹಾಕಿ ತಂಡದ ಮಾಜಿ ನಾಯಕ ಸರ್ದಾರ್ ಸಿಂಗ್ ಕ್ರಮವಾಗಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಏಷ್ಯಾ ಒಲಿಂಪಿಕ್ ಕೌನ್ಸಿಲ್‌ನ ಸದಸ್ಯರಾಗಿರುವುದರಿಂದ ಅವರೂ ಐಒಎನ ಅಥ್ಲೀಟ್‌ಗಳ ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ.

ಹಾಕಿ: ವಿವೇಕ್ 5 ಗೋಲು

ಬೆಂಗಳೂರು: ವಿವೇಕ್ ಉತ್ತಪ್ಪ ಗಳಿಸಿದ ಐದು ಗೋಲುಗಳ ಬಲದಿಂದ ಜರ್ಮನೈಟ್ ಹಾಕಿ ಅಕಾಡೆಮಿ ತಂಡವು ರಾಜ್ಯ ಸಿ ಡಿವಿಷನ್ ಹಾಕಿ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಸಾಧಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಜರ್ಮನೈಟ್ 8–2ರಿಂದ ಆಂಗ್ಲೊ ಇಂಡಿಯನ್ ಹಾಕಿ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ಪಂದ್ಯದ ಮೊದಲ ನಿಮಿಷದಲ್ಲೇ ವಿವೇಕ್ ಕೈಚಳಕ ತೋರಿದರು. ಬಳಿಕ 4, 29, 40 ಮತ್ತು 46ನೇ ನಿಮಿಷಗಳಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು. ಕರಣ್ (14ನೇ ನಿ.), ಗಣೇಶ ಮಂಜುನಾಥ್ (30ನೇ ನಿ.) ಮತ್ತು ಮಾರ್ಕ್ (41ನೇ ನಿ.) ಅವರು ವಿಜೇತ ತಂಡಕ್ಕಾಗಿ ಗೋಲು ಗಳಿಸಿದರು.

ಆಂಗ್ಲೊ ಇಂಡಿಯನ್ ತಂಡದ ಪರ ಶೆಲ್ಟನ್ (21ನೇ ನಿ.) ಮತ್ತು ಮಾರ್ಕ್ ಫರ್ನಾಂಡೀಸ್ (33ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಡೆಕಾಥ್ಲಾನ್ ಕ್ಲಬ್ 2–0ಯಿಂದ ಗರುಡ ಕ್ಲಬ್ ವಿರುದ್ಧ ಗೆದ್ದಿತು. ಡೆಕಾಥ್ಲಾನ್ ಪರ ಆಶಿಕ್ ಉತ್ತಪ್ಪ (6ನೇ ನಿ.) ಮತ್ತು ನಿಖಿಲ್ (32ನೇ ನಿ.) ಗೋಲು ದಾಖಲಿಸಿದರು.

ಟಿ20 ವಿಶ್ವಕಪ್‌ನ ‘ಪ್ರಭಾವಿಗಳ ತಂಡ’ದಲ್ಲಿ ಸ್ಥಾನ

ವಿರಾಟ್, ಸೂರ್ಯಗೆ ಗೌರವ

ಮೆಲ್ಬರ್ನ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶ್ರೇಷ್ಠ ಪ್ರದರ್ಶನ ನೀಡಿದ ಆಟಗಾರರನ್ನು ಆಯ್ಕೆ ಮಾಡಿ ಐಸಿಸಿ ಪ್ರಕಟಿಸಿದ ‘ವಿಶ್ವಕಪ್‌ನ ಪ್ರಭಾವಿಗಳ ತಂಡ‘ ದಲ್ಲಿ ಭಾರತದ ವಿರಾಟ್ ಕೊಹ್ಲಿ ಮತ್ತು ಸೂರ್ಯಕುಮಾರ್ ಯಾದವ್ ಸ್ಥಾನ ಪಡೆದಿದ್ದಾರೆ.

ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಿಗೆ 12ನೇ ಆಟಗಾರನಾಗಿ ಸ್ಥಾನ ದೊರೆತಿದೆ. ವಿಶ್ವಕಪ್ ಗೆದ್ದ ಇಂಗ್ಲೆಂಡ್‌ನ ನಾಲ್ವರು ಮತ್ತು ‘ರನ್ನರ್ಸ್ ಅಪ್’ ಪಾಕಿಸ್ತಾನದ ಇಬ್ಬರು ಆಟಗಾರರು ಇದ್ದಾರೆ.

‘ಈ ವಿಶ್ವಕಪ್ ಟೂರ್ನಿಯ ಶ್ರೇಷ್ಠ ಆಟಗಾರರನ್ನು ಸೇರಿಸಿಕೊಂಡು ಪ್ರಕಟಿಸಿರುವ ತಂಡದಲ್ಲಿ ಆರು ದೇಶಗಳ ಆಟಗಾರರು ಸ್ಥಾನ ಪಡೆದಿದ್ದಾರೆ’ ಎಂದು ಐಸಿಸಿಯ ಪ್ರಕಟಣೆ ತಿಳಿಸಿದೆ.

ಕೊಹ್ಲಿ ಅವರು ಟೂರ್ನಿಯಲ್ಲಿ 98.66ರ ಸರಾಸರಿಯಲ್ಲಿ ಒಟ್ಟು 296 ರನ್ ಕಲೆಹಾಕಿದ್ದಾರೆ. ನಾಲ್ಕು ಅರ್ಧಶತಕಗಳನ್ನು ಗಳಿಸಿದ್ದಾರೆ. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಅಜೇಯ 82 ರನ್ ಗಳಿಸಿ ಗೆಲುವಿಗೆ ಕಾರಣರಾಗಿದ್ದರು.

ಸೂರ್ಯಕುಮಾರ್ ಯಾದವ್ ಮೂರು ಅರ್ಧಶತಕಗಳು ಸೇರಿದಂತೆ ಒಟ್ಟು 239 ರನ್ ಪೇರಿಸಿದ್ದಾರೆ. ಅವರು 189.68 ಸ್ಟ್ರೈಕ್ ರೇಟ್ ಹೊಂದಿದ್ದಾರೆ.

ಇಂಗ್ಲೆಂಡ್‌ನ ಆರಂಭಿಕ ಬ್ಯಾಟರ್‌ಗಳಾದ ಜೋಸ್ ಬಟ್ಲರ್, ಅಲೆಕ್ಸ್ ಹೇಲ್ಸ್ ಹಾಗೂ ಬೌಲರ್‌ಗಳಾದ ಸ್ಯಾಮ್ ಕರನ್, ಮಾರ್ಕ್ ವುಡ್ ಅವರು ತಂಡದಲ್ಲಿದ್ದಾರೆ. ಕರನ್ ಅವರು ಫೈನಲ್‌ನ ಪಂದ್ಯಶ್ರೇಷ್ಠ ಅಲ್ಲದೆ ಟೂರ್ನಿಯ ಶ್ರೇಷ್ಠ ಆಟಗಾರ ಗೌರವ ಪಡೆದುಕೊಂಡಿದ್ದರು.



ವಿರಾಟ್ ಕೊಹ್ಲಿ (ಎಡ) ಹಾಗೂ ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ಪಾಕಿಸ್ತಾನದ ಆಲ್‌ರೌಂಡರ್ ಶಾದಾಬ್ ಖಾನ್ ಮತ್ತು ವೇಗದ ಬೌಲರ್ ಶಾಹೀನ್ ಶಾ ಅಫ್ರಿದಿಗೆ ಅವಕಾಶ ದೊರೆತಿದೆ. ಜಿಂಬಾಬ್ವೆಯ ಆಲ್‌ರೌಂಡರ್ ಸಿಕಂದರ್ ರಝಾ ಅವರು ಪ್ರಮುಖ ಆಟಗಾರರನ್ನು ಹಿಂದಿಕ್ಕಿ ‘ಪ್ರಭಾವಿಗಳ ತಂಡ‘ದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ರಝಾ ಅವರು ಟೂರ್ನಿಯಲ್ಲಿ 219 ರನ್ ಗಳಿಸಿದ್ದಲ್ಲದೆ, 10 ವಿಕೆಟ್ ಪಡೆದುಕೊಂಡಿದ್ದಾರೆ.

ತಂಡ ಹೀಗಿದೆ


ಅಲೆಕ್ಸ್ ಹೇಲ್ಸ್, ಜೋಸ್ ಬಟ್ಲರ್, ಸ್ಯಾಮ್ ಕರನ್, ಮಾರ್ಕ್ ವುಡ್ (ಇಂಗ್ಲೆಂಡ್), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ (ಭಾರತ), ಗ್ಲೆನ್ ಫಿಲಿಪ್ಸ್ (ನ್ಯೂಜಿಲೆಂಡ್), ಸಿಕಂದರ್ ರಝಾ (ಜಿಂಬಾಬ್ವೆ), ಶಾದಾಬ್ ಖಾನ್, ಶಾಹೀನ್ ಶಾ ಅಫ್ರಿದಿ (ಪಾಕಿಸ್ತಾನ), ಎನ್ರಿಕ್ ನಾರ್ಕಿಯಾ (ದಕ್ಷಿಣ ಆಫ್ರಿಕಾ). 12ನೇ ಆಟಗಾರ: ಹಾರ್ದಿಕ್ ಪಾಂಡ್ಯ (ಭಾರತ)

ಶಮಿ– ಅಖ್ತರ್ ‘ಟ್ವೀಟ್’ ಸಮರ

ನವದೆಹಲಿ: ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಪಾಕಿಸ್ತಾನ ತಂಡ ಇಂಗ್ಲೆಂಡ್ ವಿರುದ್ಧ ಸೋತ ಬೆನ್ನಲ್ಲೇ ಪಾಕಿಸ್ತಾನದ ಮಾಜಿ ವೇಗಿ ಶೋಯೆಬ್ ಅಖ್ತರ್ ಮತ್ತು ಭಾರತದ ವೇಗದ ಬೌಲರ್ ಮೊಹಮ್ಮದ್ ಶಮಿ ಮಧ್ಯೆ ‘ಟ್ವೀಟ್’ ಸಮರ ನಡೆದಿದೆ.



ಅಖ್ತರ್



ಶಮಿ

ಭಾನುವಾರ ನಡೆದ ಫೈನಲ್‌ನಲ್ಲಿ ಪಾಕ್ ತಂಡ ಸೋತಾಗ ಅಖ್ತರ್ ಅವರು, ‘ಒಡೆದ ಹೃದಯ‘ದ ಇಮೋಜಿ ಪೋಸ್ಟ್ ಮಾಡಿದ್ದರು.

ಅಖ್ತರ್ ಮಾಡಿದ್ದ ಟ್ವೀಟ್‌ಅನ್ನು ರಿಟ್ವೀಟ್ ಮಾಡಿದ್ದ ಶಮಿ, ‘ಸಾರಿ ಬ್ರದರ್, ಇದನ್ನೇ ಕರ್ಮ ಎಂದು ಕರೆಯುತ್ತಾರೆ’ ಲೇವಡಿ ಮಾಡಿದ್ದಾರೆ.

ಶಮಿ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಅಖ್ತರ್, ಭಾರತದ ವೀಕ್ಷಕ ವಿವರಣೆಕಾರ ಹರ್ಷ ಭೋಗ್ಲೆಅವರ ಫೋಟೊ ಹಾಗೂ ಅವರು ಮಾಡಿದ್ದ ಟ್ವೀಟ್‌ವೊಂದನ್ನು ಪೋಸ್ಟ್ ಮಾಡಿದ್ದಾರೆ. ‘ಕೆಲವು ತಂಡಗಳು 137 ರನ್‌ಗಳ ಮೊತ್ತವನ್ನೂ ಡಿಫೆಂಡ್ ಮಾಡುತ್ತಿದ್ದವು. ಪಾಕಿಸ್ತಾನಕ್ಕೆ ಶ್ರೇಯ ಸಲ್ಲಬೇಕು. ಅತ್ಯುತ್ತಮ ಬೌಲಿಂಗ್ ವಿಭಾಗವನ್ನು ಹೊಂದಿದೆ’ ಎಂದು ಭೋಗ್ಲೆ ಅವರು ಪಾಕ್ ತಂಡದ ಹೋರಾಟವನ್ನು ತಮ್ಮ ಟ್ವೀಟ್‌ನಲ್ಲಿ ಹೊಗಳಿದ್ದರು.

ಸೆಮಿಫೈನಲ್‌ನಲ್ಲಿ ಭಾರತ ತಂಡ, ಇಂಗ್ಲೆಂಡ್ ವಿರುದ್ಧ ಸೋತ ರೀತಿಗೆ ಅಖ್ತರ್ ವ್ಯಂಗ್ಯವಾಡಿದ್ದರು. ಅದಕ್ಕೆ ಫೈನಲ್‌ನಲ್ಲಿ ಪಾಕ್ ಸೋತಾಗ ಶಮಿ, ‘ಕರ್ಮ’ ಪದ ಬಳಸಿ ಅಖ್ತರ್‌ಗೆ ತಿರುಗೇಟು ನೀಡಿದ್ದಾರೆ.

ಟೆಸ್ಟ್‌ನಿಂದ ನಿವೃತ್ತಿ: ವಾರ್ನರ್ ಸುಳಿವು

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಅವರು ಟೆಸ್ಟ್ ಮಾದರಿ ಕ್ರಿಕೆಟ್‌ನಿಂದ ಮುಂದಿನ ವರ್ಷ ನಿವೃತ್ತಿ ಪಡೆಯುವ ಸುಳಿವು ನೀಡಿದ್ದಾರೆ. ಸೀಮಿತ ಓವರ್‌ಗಳ ಮಾದರಿಯಲ್ಲಿ ಮುಂದುವರಿಯುವ ಸಾಧ್ಯತೆಯಿದೆ.

‘ಇನ್ನು ಕನಿಷ್ಠ 12 ತಿಂಗಳು ಮಾತ್ರ ನಾನು ಟೆಸ್ಟ್ ಮಾದರಿಯಲ್ಲಿ ಮುಂದುವರಿಯಬಹುದು‘ ಎಂದು ಕಾರ್ಯಕ್ರಮವೊಂದರಲ್ಲಿ ಅವರು ಹೇಳಿದ್ದಾರೆ.

36 ವರ್ಷದ ವಾರ್ನರ್ 96 ಟೆಸ್ಟ್ ಪಂದ್ಯಗಳಿಂದ 46.52ರ ಸರಾಸರಿಯಲ್ಲಿ 7,817 ರನ್ ಗಳಿಸಿದ್ದಾರೆ. ಅದರಲ್ಲಿ 24 ಶತಕಗಳು, 34 ಅರ್ಧಶತಕಗಳಿವೆ.

ಚೆಸ್: ಅನದ್ಕತ್‌ಗೆ ಪ್ರಶಸ್ತಿ

ಬೆಂಗಳೂರು: ಗುಜರಾತ್‌ನ ಅನದ್ಕತ್ ಕರ್ತವ್ಯ ಅವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆ ಆಯೋಜಿಸಿದ್ದ ಆನ್‌ಲೈನ್ ಚೆಸ್ ಟೂರ್ನಿಯ ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಭಾನುವಾರ ಕೊನೆಗೊಂಡ ಟೂರ್ನಿಯಲ್ಲಿ ಅನದ್ಕತ್ ಅವರು 8.5 ಪಾಯಿಂಟ್ಸ್ ಗಳಿಸಿದರು. ತಮಿಳುನಾಡಿನ ಮೊಹಮ್ಮದ್ ಅನೀಸ್ 8.5 ಪಾಯಿಂಟ್ಸ್ ಗಳಿಸಿದರು. ಆದರೆ ಟೈಬ್ರೇಕ್‌ನಲ್ಲಿ ಅನದ್ಕತ್ ಮೇಲುಗೈ ಪಡೆದರು.

ಇನ್ನುಳಿದ ವಿಭಾಗಗಳಲ್ಲಿ ಮೊದಲ ಸ್ಥಾನ ಪಡೆದವರು: ಬಾಲಕರು: 7 ವರ್ಷದೊಳಗಿನವರು: ಅದ್ವಿಕ್ ಕುಮಾರ್. 9 ವರ್ಷದೊಳಗಿನವರು: ಜಡೆನ್ ಸಚಿನ್. 11 ವರ್ಷ ದೊಳಗಿನವರು: ಅಭಿನವ್ ಕುಮಾರ್. 14 ವರ್ಷದೊಳಗಿನವರು: ವಿಸ್ಮಯ್. ಬಾಲಕಿಯರು: 7 ವರ್ಷದೊಳಗಿನವರು: ಸನ್ವಿತಾ ಶೆಟ್ಟಿ. 9 ವರ್ಷದೊಳಗಿನವರು: ಇಂದುಶೀತಲಾ. 11 ವರ್ಷದೊಳಗಿನವರು: ಸುಮೇಧಾ ಬಿಜಾಪುರ. 14 ವರ್ಷದೊಳಗಿನವರು: ಗಾನಾ ಮುರಳೀಧರ್.

ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಭರವಸೆ

ರಾಜ್ಯದಲ್ಲಿ ಅಂತರರಾಷ್ಟ್ರೀಯ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಿಗೆ ಆತಿಥ್ಯ ವಹಿಸುವ ಅವಕಾಶ ಕರ್ನಾಟಕಕ್ಕೆ ಮತ್ತೆ ಲಭಿಸುವ ಸಾಧ್ಯತೆಯಿದೆ. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ಅಂತಹ ಭರವಸೆ ನೀಡಿದ್ದಾರೆ.

ಎಐಎಫ್‌ಎಫ್ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮೊದಲ ಬಾರಿಗೆ ಬೆಂಗಳೂರಿಗೆ ಬಂದ ಚೌಬೆ, ಸೋಮವಾರ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣಕ್ಕೆ ಭೇಟಿ ನೀಡಿದರು.

ಎಐಎಫ್‌ಎಫ್ ಉಪಾಧ್ಯಕ್ಷ ಮತ್ತು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಅಧ್ಯಕ್ಷರೂ ಆಗಿರುವ ಎನ್.ಎ.ಹ್ಯಾರಿಸ್ ಹಾಗೂ ಫೆಡರೇಷನ್‌ನ ಕೆಲವು ಅಧಿಕಾರಿಗಳು ಜತೆಗಿದ್ದರು. ಚೌಬೆ ಅವರನ್ನು ರಾಜ್ಯ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.



ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ (ಎಡ) ಅವರನ್ನು ಕೆಎಸ್‌ಎಫ್‌ಎ ಎನ್.ಎ.ಹ್ಯಾರಿಸ್ ಅಭಿನಂದಿಸಿದರು –ಪ್ರಜಾವಾಣಿ ಚಿತ್ರ

‘ಕರ್ನಾಟಕವು ಯಾವುದೇ ಅಂತರರಾಷ್ಟ್ರೀಯ ಪಂದ್ಯ, ಫಿಫಾ ಸ್ನೇಹಪರ ಪಂದ್ಯ, ಸೀನಿಯರ್, ಜೂನಿಯರ್ ಅಥವಾ ಮಹಿಳಾ ಫುಟ್‌ಬಾಲ್ ಪಂದ್ಯದ ಆತಿಥ್ಯಕ್ಕೆ ಸಿದ್ಧವಿದ್ದರೆ, ನಾವು ಅವಕಾಶ ನೀಡಲು ತಯಾರಿದ್ದೇವೆ’ ಎಂದು ಚೌಬೆ ಇದೇ ವೇಳೆ ಹೇಳಿದರು.

ಬೆಂಗಳೂರಿನಲ್ಲಿ ಈ ಹಿಂದೆ ಫಿಫಾ ವಿಶ್ವಕಪ್ ಅರ್ಹತಾ ಪಂದ್ಯಗಳು ನಡೆದಿದ್ದವು. ಆದರೆ ಕಳೆದ ಆರು ವರ್ಷಗಳಲ್ಲಿ ರಾಷ್ಟ್ರೀಯ ಸೀನಿಯರ್ ತಂಡ ಬೆಂಗಳೂರಿನಲ್ಲಿ ಯಾವುದೇ ಪಂದ್ಯ ಆಡಿಲ್ಲ.

₹ 24 ಲಕ್ಷ ಅನುದಾನ: ‘ಫುಟ್‌ಬಾಲ್ ಕ್ರೀಡೆಯ ಅಭಿವೃದ್ಧಿಗಾಗಿ ಪ್ರತಿ ರಾಜ್ಯ ಸಂಸ್ಥೆಗಳಿಗೆ ವಾರ್ಷಿಕ ₹ 24 ಲಕ್ಷ ಅನುದಾನ ನೀಡಲಾಗುವುದು. ಅದನ್ನು ಒಂದೇ ಕಂತಿನಲ್ಲಿ ನೀಡದೆ, ಹಂತ ಹಂತವಾಗಿ ನೀಡಲು ಯೋಜನೆ ರೂಪಿಸಲಾಗಿದೆ’ ಎಂದು ತಿಳಿಸಿದರು.

2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ‘ಫ್ರಿಜಿಯನ್ ಕ್ಯಾಪ್’ ಲಾಂಛನ

ಪ್ಯಾರಿಸ್ (ಎಪಿ/ ಎಎಫ್‌ಪಿ): ಫ್ರೆಂಚ್ ಗಣರಾಜ್ಯದ ಸಂಕೇತವಾಗಿರುವ 'ಫ್ರಿಜಿಯನ್ ಕ್ಯಾಪ್'ಅನ್ನು (ಫ್ರಿಜಿಯನ್ ಟೋಪಿ) 2024 ಪ್ಯಾರಿಸ್ ಒಲಿಂಪಿಕ್ಸ್‌ನ ಅಧಿಕೃತ ಲಾಂಛನವಾಗಿ (ಮ್ಯಾಸ್ಕಟ್) ಅಂತಿಮಗೊಳಿಸಲಾಗಿದೆ.

‘ಫ್ರೆಂಚ್ ಕ್ರಾಂತಿಯ ಸ್ಫೂರ್ತಿಯನ್ನು ಫ್ರಿಜಿಯನ್ ಟೋಪಿ ಎತ್ತಿ ಹಿಡಿಯಲಿದೆ. ಎಲ್ಲವನ್ನೂ ಬದಲಾಯಿಸುವ ಸಾಮರ್ಥ್ಯ ಕ್ರೀಡೆಗೆ ಇದ್ದು, ಸಮಾಜದಲ್ಲಿ ಪ್ರಮುಖ ಸ್ಥಾನ ಹೊಂದಲು ಅರ್ಹವಾಗಿದೆ ಎಂಬುದನ್ನು ಬಿಂಬಿಸುವ ಗುರಿಯನ್ನು ಮ್ಯಾಸ್ಕಟ್ ಹೊಂದಿದೆ’ ಎಂದು 2024ರ ಒಲಿಂಪಿಕ್ಸ್‌ನ ಬ್ರ್ಯಾಂಡ್ ನಿರ್ದೇಶಕ ಜೂಲಿ ಮ್ಯಾಟಿಖಿನ್ ಹೇಳಿದ್ದಾರೆ.

ತ್ರಿಕೋನ ಆಕೃತಿಯ ಕ್ಯಾಪ್ ಕೆಂಪು ಬಣ್ಣ ಹೊಂದಿದ್ದು, ಅದಕ್ಕೆ ಗೊಂಬೆಯ ರೂಪ ನೀಡಲಾಗಿದೆ. ಒಲಿಂಪಿಕ್ಸ್ ಮ್ಯಾಸ್ಕಟ್ ಮತ್ತು ಪ್ಯಾರಾಲಿಂಪಿಕ್ಸ್ ಮ್ಯಾಸ್ಕಟ್ ಅಲ್ಪ ವ್ಯತ್ಯಾಸ ಹೊಂದಿದೆ.



ಪ್ಯಾರಿಸ್ ಒಲಿಂಪಿಕ್ಸ್ ಲಾಂಛನ ‘ಫ್ರಿಜಿಯನ್ ಕ್ಯಾಪ್‘ –ಎಎಫ್‌ಪಿ ಚಿತ್ರ

ಸಾಮಾನ್ಯವಾಗಿ ಒಲಿಂಪಿಕ್ಸ್‌ಗೆ ಪ್ರಾಣಿ ಅಥವಾ ಇತರ ಜೀವಿಗಳನ್ನು ಲಾಂಛನವಾಗಿ ಆಯ್ಕೆ ಮಾಡುವ ರೂಢಿ ಬೆಳೆದುಬಂದಿದೆ. ಆದರೆ ಪ್ಯಾರಿಸ್ ಕೂಟದ ಸಂಘಟಕರು ಭಿನ್ನ ಹೆಜ್ಜೆಯಿಟ್ಟಿದ್ದು, ‘ಸ್ವಾತಂತ್ರ್ಯದ ರೂಪಕ’ ಎಂಬ ಕಾರಣಕ್ಕೆ 'ಫ್ರಿಜಿಯನ್ ಕ್ಯಾಪ್'ಅನ್ನು ಆಯ್ಕೆ ಮಾಡಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್ 2024ರ ಜುಲೈ 26ರಿಂದ ಆಗಸ್ಟ್ 11ರ ವರೆಗೆ ನಡೆಯಲಿದೆ.

ಪ್ರೊ ಕಬಡ್ಡಿ ಲೀಗ್: ಮಿಂಚಿದ ಆಕಾಶ್ ಶಿಂಧೆ, ಅಸ್ಲಂ

ವಾರಿಯರ್ಸ್ ಮಣಿಸಿದ ಪಲ್ಟನ್

ಪುಣೆ: ಸೊಗಸಾದ ಆಟವಾಡಿದ ಪುಣೇರಿ ಪಲ್ಟನ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ 43–27 ಪಾಯಿಂಟ್ಸ್‌ಗಳಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಗೆದ್ದರು.

ಈ ಋತುವಿನಲ್ಲಿ ಎಂಟನೇ ಗೆಲುವು ಸಾಧಿಸಿದ ಪಲ್ಟನ್, ಪಾಯಿಂಟ್‌ಗಳನ್ನು 49ಕ್ಕೆ ಹೆಚ್ಚಿಸಿಕೊಂಡು ಮತ್ತೆ ಅಗ್ರಸ್ಥಾನಕ್ಕೇರಿತು.

ಆಕಾಶ್ ಶಿಂಧೆ (10 ಪಾಯಿಂಟ್ಸ್), ಅಸ್ಲಂ ಇನಾಂದಾರ್ (9 ಪಾಯಿಂಟ್ಸ್) ಮತ್ತು ಮೋಹಿತ್ ಗೋಯತ್ (8 ಪಾಯಿಂಟ್ಸ್) ಅವರು ಪುಣೆ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮೊದಲ ನಿಮಿಷದಿಂದಲೇ ಮಿಂಚಿನ ಆಟವಾಡಿದ ಪಲ್ಟನ್ ಬೇಗನೇ ಎದುರಾಳಿಯನ್ನು ಆಲೌಟ್ ಮಾಡಿ 11–1 ರಲ್ಲಿ ಮುನ್ನಡೆ ಸಾಧಿಸಿತು.

ಮಣಿಂದರ್ ಸಿಂಗ್ ಅವರ ಚಾಕಚಕ್ಯತೆಯ ರೇಡಿಂಗ್‌ನ ಬಲದಿಂದ ಮರುಹೋರಾಟ ನಡೆಸಿದ ವಾರಿಯರ್ಸ್, ಎದುರಾಳಿ ತಂಡವನ್ನು ಆಲೌಟ್ ಮಾಡಿತು. ಆದರೂ ವಿರಾಮದ ವೇಳೆಗೆ ವಿಜಯಿ ತಂಡ 24–13 ರಲ್ಲಿ ಮುನ್ನಡೆಯಲ್ಲಿತ್ತು.

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	14	8	4	2	49
ಬೆಂಗಳೂರು	13	8	4	1	46
ಜೈಪುರ	13	8	5	0	43
ಮುಂಬಾ	13	8	5	0	43
ಯುಪಿ	13	6	5	2	40
ಪಟ್ನಾ	13	6	5	2	38

ಎರಡನೇ ಅವಧಿಯಲ್ಲೂ ಪ್ರಾಬಲ್ಯ ಮೆರೆದ ಪಲ್ಟನ್ ಪಾಯಿಂಟ್‌ಗಳನ್ನು ಕಲೆಹಾಕುತ್ತಾ ಪಂದ್ಯದ ಮೇಲೆ ಹಿಡಿತ ಬಿಗಿಗೊಳಿಸಿತು. ಮುನ್ನಡೆಯನ್ನು 33–14 ರಲ್ಲಿ ಹೆಚ್ಚಿಸಿ ಭಾರಿ ಅಂತರದಿಂದ ಗೆದ್ದಿತು.

ವಾರಿಯರ್ಸ್ ತಂಡದ ಮಣಿಂದರ್ 14 ಪಾಯಿಂಟ್ಸ್ ಗಳಿಸಿ ಸೋಲಿನ ನಡುವೆಯೂ ಗಮನ ಸೆಳೆದರು.

ದಿನದ ಎರಡನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 33–32 ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. 14 ಪಾಯಿಂಟ್ಸ್ ತಂದಿತ್ತ ರೇಡರ್, ಮಂಜೀತ್ ಅವರು ಸ್ಟೀಲರ್ಸ್ ತಂಡದ ರೋಚಕ ಗೆಲುವಿಗೆ ಕಾರಣರಾದರು. ಗುಜರಾತ್ ಪರ ರೇಡರ್‌ಗಳಾದ ರಾಕೇಶ್ (7 ಪಾಯಿಂಟ್ಸ್) ಮತ್ತು ಚಂದ್ರನ್ ರಂಜೀತ್ (8) ಅವರ ಆಟ ವ್ಯರ್ಥವಾಯಿತು.

ಆರಂಭದಿಂದ ಜಿದ್ದಾಜಿದ್ದಿ ಪೈಪೋಟಿ ನಡೆದ ಪಂದ್ಯದಲ್ಲಿ ಮೊದಲಾರ್ಧದ ವೇಳೆ ಹರಿಯಾಣ 21–16ರಲ್ಲಿ ಮುಂದಿತ್ತು. ದ್ವಿತೀಯಾರ್ಧದಲ್ಲಿ ಗುಜರಾತ್ ಪುಟಿದೆದ್ದರೂ ಒಂದು ಪಾಯಿಂಟ್‌ನಿಂದ ಸೋಲು ಕಂಡಿತು.

ಇಂದಿನ ಪಂದ್ಯಗಳು

ಜೈಪುರ ಪಿಂಕ್ ಪ್ಯಾಂಥರ್ಸ್– ಯು ಮುಂಬಾ

ತೆಲುಗು ಟೈಟನ್ಸ್– ಬೆಂಗಳೂರು ಬುಲ್ಸ್

ಫುಟ್‌ಬಾಲ್: ಶೇಕ್ ಮುಜೀಬ್ ಮಿಂಚು

ಬೆಂಗಳೂರು: ಶೇಕ್ ಮುಜೀಬ್ ಗಳಿಸಿದ ನಾಲ್ಕು ಗೋಲುಗಳು ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡಕ್ಕೆ ಗೆಲುವು ತಂದುಕೊಟ್ಟವು. ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಎಂಇಜಿ ಸೆಂಟರ್ 5–0ಯಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ಎದುರು ಗೆದ್ದಿತು. ಮುಜೀಬ್ 19, 29, 43 ಮತ್ತು 78ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಎಂಇಜಿ ಪರ ಕೆ.ಪಿ. ಕಿರಣ್ (56ನೇ ನಿ.) ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 3–0ಯಿಂದ ಅಗ್ನಿಪುತ್ರ ಎಫ್‌ಸಿ ಎದುರು, ಥಾಂಕೋಸ್ ಸ್ಟೂಡೆಂಟ್ಸ್ 3–1ರಿಂದ ಬೆಂಗಳೂರು ಈಗಲ್ಸ್ ಎದುರು ಗೆದ್ದವು.

ಸಂಕ್ಷಿಪ್ತ ಸುದ್ದಿ

ಮ್ಯಾಂಚೆಸ್ಟರ್ ಕ್ಲಬ್ ದ್ರೋಹ ಮಾಡಿದೆ: ರೊನಾಲ್ಡೊ

ಲಂಡನ್ (ಎಪಿ): ಪೋರ್ಚುಗಲ್‌ನ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ, ತಾವು ಪ್ರತಿನಿಧಿಸುತ್ತಿರುವ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ಹಾಗೂ ಅದರ ಮ್ಯಾನೇಜರ್ ಎರಿಕ್ ಟೆನ್ ಹಾಗ್ ವಿರುದ್ಧ ಹರಿಹಾಯ್ದಿದ್ದಾರೆ.



‘ಮ್ಯಾಂಚೆಸ್ಟರ್ ಕ್ಲಬ್ ನನ್ನನ್ನು ಬಲವಂತದಿಂದ ಹೊರಹಾಕಲು ಪ್ರಯತ್ನಿಸುತ್ತಿದೆ. ಕೋಚ್ ಅಲ್ಲದೆ ಕ್ಲಬ್‌ನ 2–3 ಮಂದಿ ನನಗೆ ದ್ರೋಹ ಬಗೆದಿದ್ದಾರೆ’ ಎಂದು ಬ್ರಿಟನ್‌ನ ‘ಟಾಕ್ ಟಿ.ವಿ’ಗೆ ನೀಡಿದ ಸಂದರ್ಶನದಲ್ಲಿ ಆರೋಪಿಸಿದ್ದಾರೆ.

‘ಕ್ಲಬ್‌ನ ಮ್ಯಾನೇಜರ್ ಟೆನ್ ಹಾಗ್ ಬಗ್ಗೆ ನನಗೆ ಗೌರವ ಇಲ್ಲ. ಏಕೆಂದರೆ ಅವರಿಗೆ ನನ್ನ ಮೇಲೆ ಗೌರವ ಇಲ್ಲ’ ಎಂದಿದ್ದಾರೆ.

‘ರೊನಾಲ್ಡೊ ಅವರ ಸಂದರ್ಶನದ ಪೂರ್ಣ ಮಾಹಿತಿ ದೊರೆತ ಬಳಿಕ ಪ್ರತಿಕ್ರಿಯೆ ನೀಡಲಾಗುವುದು’ ಎಂದು ಮ್ಯಾಂಚೆಸ್ಟರ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ಅಥ್ಲೆಟಿಕ್ಸ್: 2 ಚಿನ್ನ ಗೆದ್ದ ಕರ್ನಾಟಕ

ಬೆಂಗಳೂರು: ಕರ್ನಾಟಕದ ಅಥ್ಲೀಟ್‌ಗಳು ಅಸ್ಸಾಂನ ಗುವಾಹಟಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಎರಡು ಚಿನ್ನ, ತಲಾ ಒಂದು ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದರು.

ಹೆಪ್ಟಾಥ್ಲಾನ್‌ನಲ್ಲಿ ಪಾವನಾ ನಾಗರಾಜ್ 4,547 ಪಾಯಿಂಟ್ಸ್ ಗಳಿಸಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ವಿಭಾ ಶ್ರೀನಿವಾಸ್ ಪೋಲ್‌ವಾಲ್ಟ್‌ನಲ್ಲಿ 3.20 ಮೀಟರ್ಸ್ ಸಾಧನೆ ಮಾಡಿ ಬೆಳ್ಳಿ ಗೆದ್ದರು.

ಪ್ರಿಯಾ ಮೋಹನ್, ದೀಪಶ್ರೀ, ಆಕಾಶ್ ಮತ್ತು ಲೋಕೇಶ್ ಕೆ. ಅವರನ್ನೊಳಗೊಂಡ 4X400 ಮೀಟರ್ಸ್ ಮಿಶ್ರ ರಿಲೇ ತಂಡವು 3 ನಿ. 33.10 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದಿತು. ಮಹಿಳೆಯರ 4X100 ಮೀ. ರಿಲೇಯಲ್ಲಿ ವರ್ಷಾ ವಿ, ನಯನ್ ಕೆ, ಗ್ರೀಷ್ಮಾ ಮತ್ತು ದೀಪ್ ಆರ್. ಅವರಿದ್ದ ತಂಡ 49.23 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕಂಚು ಜಯಿಸಿತು.

ಸಮೀರ್, ಮಿಥುನ್ ಮೇಲೆ ಕಣ್ಣು

ಸಿಡ್ನಿ (ಪಿಟಿಐ): ಕರ್ನಾಟಕದ ಮಿಥುನ್ ಮಂಜುನಾಥ್ ಮತ್ತು ಸಮೀರ್ ವರ್ಮಾ ಅವರು ಮಂಗಳವಾರದಿಂದ ಇಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಪರ ಕಣಕ್ಕಿಳಿಯಲಿದ್ದು ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.